ತತ್ವ ಸಂಶೋಧನ ಸಂಸತ್

ಶ್ರೀಹೃಷೀಕೇಶತೀರ್ಥಸಂಸ್ಥಾನಮ್

ಶ್ರೀ ಪಲಿಮಾರು ಮಠ, ಉಡುಪಿ-೫೭೬೧೦೧

ದಾನದ ವಿಧಿ-ವಿಧಾನಗಳು



ಸಂಗ್ರಹ ಮತ್ತು ಅನುವಾದ

ವಿದ್ವಾನ್ ಶ್ರೀರಾಮವಿಟ್ಠಲಾಚಾರ್ಯ

ದಾನದ
ವಿಧಿ-ವಿಧಾನಗಳು

ಸಂಗ್ರಹ ಹಾಗೂ ಅನುವಾದ:

ವಿದ್ವಾನ್ ಶ್ರೀರಾಮವಿಟ್ಠಲಾಚಾರ್ಯ

ಪೂರ್ಣಪ್ರಜ್ಞ ವಿದ್ಯಾಪೀಠ, ಬೆಂಗಳೂರು-28



ಪ್ರಕಾಶನ:

ತತ್ತ್ವಸಂಶೋಧನ ಸಂಸತ್

(ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ)

ಶ್ರೀವಿದ್ಯಾಮಾನ್ಯಪ್ರಕಾಶನಮ್, ಶ್ರೀಹೃಷೀಕೇಶತೀರ್ಥಸಂಸ್ಥಾನಮ್

ಶ್ರೀ ಪಲಿಮಾರು ಮಠ, ರಥಬೀದಿ, ಉಡುಪಿ-576101

Daanada Vidhi-Vidhaanagalu, by
Vidvaan Sri Ramavittalaachaarya, Poornaprajna Vidyapeeta,
Bangalore -18

ISBN-978-93-81807-17-0

ಸಂಗ್ರಹ: ವಿದ್ವಾನ್ ಶ್ರೀರಾಮವಿಟ್ಠಲಾಚಾರ್ಯ
ಪೂರ್ಣಪ್ರಜ್ಞ ವಿದ್ಯಾಪೀಠ, ಬೆಂಗಳೂರು–28

ಮೊದಲ ಮುದ್ರಣ: **ಸೆಪ್ಟೆಂಬರ್ 2011**

ಎರಡನೇ ಮುದ್ರಣ: **ಸೆಪ್ಟೆಂಬರ್ 2014**

ಪ್ರಕಾಶನ: **ತತ್ವಸಂಶೋಧನ ಸಂಸತ್**
(ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ)
ಶ್ರೀವಿದ್ಯಾಮಾನ್ಯಪ್ರಕಾಶನಮ್, ಶ್ರೀಹೃಷೀಕೇಶತೀರ್ಥಸಂಸ್ಥಾನಮ್
ಶ್ರೀ ಪಲಿಮಾರು ಮಠ, ರಥಬೀದಿ, ಉಡುಪಿ–576101

ಪ್ರತಿಗಳು: 1000

ಪುಟಗಳು: XII+148

ಮುದ್ರಣ: ಪ್ರಗತಿ ಗ್ರಾಫಿಕ್ಸ್, ಬೆಂಗಳೂರು–560 104

ಶ್ರೀಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು
ಶ್ರೀಹೃಷೀಕೇಶತೀರ್ಥ ಸಂಸ್ಥಾನಂ,
ಶ್ರೀ ಪಲಿಮಾರು ಮಠ, ಉಡುಪಿ

ದಿನಾಂಕ : 07–09–2011

ಅನುಗ್ರಹ ಸಂದೇಶ

ಯಜನ–ಯಾಜನ, ಅಧ್ಯಯನ –ಅಧ್ಯಾಪನ, ದಾನ–ಪ್ರತಿಗ್ರಹ ಈ ಷಟ್ಕರ್ಮಗಳು ಜಿಜ್ಞಾಸುವಿನ ಉನ್ನತಿಗೆ ಅವಶ್ಯಕವಾಗಿವೆ. ಯಜ್ಞ–ಅಧ್ಯಯನ–ದಾನ ಈ ಮೂರು ಕರ್ಮಗಳ ಆಚರಣೆ ಪ್ರತಿಯೊಬ್ಬರಿಗೂ ಅತಿ ಅವಶ್ಯಕ, ಅನಿವಾರ್ಯವೂ ಹೌದು. ಇನ್ನುಳಿದ ಮೂರು ಕರ್ಮಗಳಾದ ಯಾಜನ–ಅಧ್ಯಾಪನ–ಪ್ರತಿಗ್ರಹಗಳು ಅವರವರ ವಿವೇಚನೆಗೆ ಬಿಟ್ಟಿದ್ದು. ಪ್ರತಿಯೊಬ್ಬರಿಗೂ ಅತಿ ಅವಶ್ಯಕವೆನಿಸಿದ ತ್ರಿಕರ್ಮಗಳಲ್ಲಿ ದಾನವೆಂಬುದು ಎಲ್ಲರಿಗೂ ಉಚಿತವಾದುದು. ಸಕಲ ಕರ್ಮಗಳನ್ನು ನ್ಯಾಸ ಮಾಡಿದ ಸನ್ಯಾಸಿಗಳೂ ಕೂಡ ವಿದ್ಯಾದಾನವನ್ನು ಮಾಡಲೇಬೇಕು. ಆ ಮೂಲಕ ತನ್ನ ಆಶ್ರಮದಲ್ಲಿ ಸಾರ್ಥಕ್ಯವನ್ನು ಕಾಣಲೇಬೇಕು. ಆದ್ದರಿಂದ ಚತುರಾಶ್ರಮಿಗಳೂ ಕೂಡ ಈ ದಾನದಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು.

ಶ್ರೀಮಧ್ವವಿಜಯದಲ್ಲಿ ನಾರಾಯಣಪಂಡಿತರು ತಿಳಿಸಿದಂತೆ 'ದಾನಂ ಧ್ರುವಂ ಫಲತಿ ಪಾತ್ರಗುಣಾನುಕೂಲ್ಯಾತ್' –ಸರಿಯಾದ ಪಾತ್ರದಲ್ಲಿ ಮಾಡಿದ ದಾನ ನಿಶ್ಚಯವಾಗಿ ಫಲವನ್ನು ನೀಡುತ್ತದೆ. ಸರಿಯಾದ ಪಾತ್ರದೊಂದಿಗೆ ಯೋಗ್ಯದೇಶ– ಕಾಲದಲ್ಲಿ ಅನುಸಂಧಾನಪೂರ್ವಕವಾಗಿ ದಾನ ಮಾಡಬೇಕು.

ಅನ್ನದಾನ ಹೊರತಾಗಿ ಎಲ್ಲಾ ದಾನಗಳಿಗೂ ಪಾತ್ರಾಪಾತ್ರವಿವೇಚನೆ ಅಗತ್ಯ– 'ಅನ್ನಸ್ಯ ಕ್ಷುಧಿತಂ ಪಾತ್ರಮ್'. ಅಪಾತ್ರದಾನ ಮಹಾಪಾಪಕರ. ನರಕಾದಿ ಅನರ್ಥಕ್ಕೆ ಕಾರಣವಾಗುತ್ತದೆ.

ದಾನ ಮಾಡುವವನಲ್ಲಿ ಅಹಂಕಾರವೆಂಬುದು ಇರಲೇಬಾರದು. ಆದರೆ ದಾನ ಮಾಡುವವನಲ್ಲಿ ಇದು ಮೊದಲಿಗೆ ಬಂದುಬಿಡುತ್ತದೆ. ಏಕೆಂದರೆ ನಾನೇ ದಾತಾ, ನಾನು ಕೊಡುವವನು ಎಂಬ ಗರ್ವ. ನಮ್ಮೊಳಗೆ ನಿಂತ ಭಗವಂತ ಕೊಡಿಸುತ್ತಾನೆ, ಪಡೆಯುವವನ ಒಳಗೆ ನಿಂದು ಪಡೆಯುತ್ತಾನೆ ಎಂಬ ಅನುಸಂಧಾನ ಇದ್ದರೆ ಇಂತಹ ಅಹಂಕಾರಕ್ಕೆ ಆಸ್ಪದವೇ ಇರಲಾರದು–

'ಅನಂತಃ ಪ್ರತಿಗೃಹ್ಣಾತಿ, ಅನಂತೋ ವೈ ದದಾತಿ ಚ ।'

ಈ ನಿಟ್ಟಿನಲ್ಲಿ ದಾನದ ಮಹತ್ತ್ವ, ದೇಶಕಾಲಗಳ ಚಿಂತನೆ, ಪಾತ್ರಾಪಾತ್ರವಿವೇಚನೆ, ದಾನದ ಸಂದರ್ಭದ ಉಪಯುಕ್ತಮಂತ್ರಗಳು ಹಾಗೂ ಅವುಗಳ ಅರ್ಥಚಿಂತನೆ ಇವುಗಳನ್ನು ನಮ್ಮ ಸಿದ್ಧಾಂತಕ್ಕನುಗುಣವಾಗಿ ಈ ಕೃತಿಯಲ್ಲಿ ನಮ್ಮವರೇ ಆದ ಶ್ರೀರಾಮವಿಟ್ಠಲಾಚಾರ್ಯರು ನಡೆಸಿದ್ದಾರೆ. ವಂಶಪಾರಂಪರ್ಯವಾಗಿ ಬಂದ ಪೌರೋಹಿತ್ಯಜ್ಞಾನ, ದೈವದತ್ತವಾಗಿ ಒಲಿದ ವಿದ್ವತ್ತು ಈ ಎರಡರ ಸಂಗಮದಿಂದಾಗಿ ಈ ಕೃತಿ ತನ್ನದಾದ ಮಹತ್ತ್ವವನ್ನು ಪಡೆದಿದೆ. ವಾಕ್ಪಟುತ್ವ ಹೊಂದಿದ, ಉತ್ತಮ ಬರಹಗಾರರೂ ಆದ ಶ್ರೀರಾಮವಿಟ್ಠಲಾಚಾರ್ಯರು ಹಲವಾರು ಸ್ಮೃತಿ–ಪುರಾಣಗಳನ್ನು ಮಥಿಸಿ ಸಂಗ್ರಹಿಸಿದ ಈ ಕೃತಿ ಜನಮಾನಸದಲ್ಲಿ ಅಚ್ಚಳಿಯದೇ ಉಳಿಯುವುದರಲ್ಲಿ ಸಂದೇಹವಿಲ್ಲ. ಆಚಾರ್ಯರಿಂದ ಇಂತಹ ಹತ್ತು ಹಲವು ಕೃತಿಗಳು ಸಮಾಜಕ್ಕೆ ದೊರಕಲಿ ಎಂದು ವಿಶೇಷವಾಗಿ ಪ್ರಾರ್ಥಿಸುತ್ತೇವೆ.

ಗುರುಗಳಾದ ಶ್ರೀಶ್ರೀವಿದ್ಯಾಮಾನ್ಯತೀರ್ಥರ ಅಪೇಕ್ಷೆಯಂತೆ, ಅವರಿಂದಲೇ ಪ್ರಾರಂಭವಾದ "ತತ್ತ್ವ ಸಂಶೋಧನ ಸಂಸತ್" ಸಂಶೋಧನಕೇಂದ್ರದಿಂದ ಈ ಕೃತಿ ಮೂಡಿ ಬರುತ್ತಿದೆ. ಮಧ್ವಸಿದ್ಧಾಂತಕ್ಕೆ ಸಂಬಂಧಿಸಿದ, ಸತ್ಸಿದ್ಧಾಂತಾನುಸಾರಿಯಾದ ಆಚರಣೆಗೆ ಉಪಯುಕ್ತವಾದ ಹಲವಾರು ಕೃತಿಗಳು ನಮ್ಮ ಸಮಾಜಕ್ಕೆ ಯಥೇಚ್ಛವಾಗಿ ದೊರಕಬೇಕೆಂಬುದು ವಿದ್ಯಾಮಾನ್ಯರ ಕನಸು. ಈ ಮಹಿಮಾತ್ಮರ ಕನಸು ನನಸಾಗುತ್ತಿರುವುದು ಸಂತೋಷದ ಸಂಗತಿ. ಈ ಸಂಸ್ಥೆಗೆ, ಈ ಕೃತಿಯನ್ನು ಸಂಪಾದಿಸಿದ ಶ್ರೀಮವಿಟ್ಠಲಾಚಾರ್ಯರಿಗೆ ಹಾಗೂ ಈ ಕೃತಿಯ ಉಪಯೋಗವನ್ನು ಪಡೆವ ಎಲ್ಲಾ ಜಿಜ್ಞಾಸುಗಳಿಗೆ ಗುರ್ವಂತರ್ಗತ ಹರಿ–ವಾಯುಗಳ ವಿಶೇಷಾನುಗ್ರಹವನ್ನು ಪ್ರಾರ್ಥಿಸುತ್ತೇವೆ.

ಶ್ರೀಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು
ಶ್ರೀಹೃಷೀಕೇಶತೀರ್ಥ ಸಂಸ್ಥಾನಂ,
ಶ್ರೀ ಪಲಿಮಾರು ಮಠ, ಉಡುಪಿ

ಲೇಖಕನ ಬಿನ್ನಹ

'ದಾನದ ವಿಧಿ-ವಿಧಾನಗಳು' ಪುಸ್ತಕವು ಸಂಕಲನಗೊಂಡು ಬಹುಕಾಲವಾಗಿತ್ತು. ಇದರ ರಚನೆಗೆ ಸ್ಫೂರ್ತಿ 'ಪೂರ್ಣಪ್ರಜ್ಞ ಸಂಶೋಧನ ಮಂದಿರ'ದ ವಿಚಾರಗೋಷ್ಠಿ. ಹಲವು ವರ್ಷಗಳ ಹಿಂದೆ ಪೂರ್ಣಪ್ರಜ್ಞ ಸಂಶೋಧನ ಮಂದಿರದಿಂದ ದಾನದ ಬಗ್ಗೆ ಗೋಷ್ಠಿಯೊಂದು ಏರ್ಪಾಡಾಗಿತ್ತು. ನನಗೂ ಅದರಲ್ಲಿ ಭಾಗವಹಿಸುವ ಅವಕಾಶ ದೊರೆತಿತ್ತು. ಅಂದು ನಾನು ಪ್ರಬಂಧ ಮಂಡನೆ ಮಾಡಿದ್ದೆ. ಅದರ ವಿಸ್ತಾರ ರೂಪವೇ ಈ ಪುಸ್ತಕ. ಆ ಗೋಷ್ಠಿಯಲ್ಲಿ ಶ್ರೋತೃಗಳಾಗಿ ಭಾಗವಹಿಸಿದ ಮಿತ್ರರಾದ ಸಾತ್ವಿಕ ಶ್ರದ್ಧಾಳು ಶ್ರೀಕಾಗಲ್ಕರರು ಈ ಪ್ರಬಂಧವನ್ನು ಪುಸ್ತಕರೂಪವಾಗಿ ವಿಸ್ತರಿಸಿ ಬರೆಯಿರಿ ಎಂದರಲ್ಲದೆ ತಾವು ಅದರ ಪ್ರಕಾಶನಕ್ಕೆ ಸಹಾಯ ಮಾಡುವ ಬಯಕೆಯನ್ನು ವ್ಯಕ್ತಪಡಿಸಿದರು. ಆ ಪ್ರೋತ್ಸಾಹದಿಂದ ಸಂಕ್ಷೇಪದ ಪ್ರಬಂಧ ವಿಸ್ತಾರದ ಗ್ರಂಥರೂಪ ಪಡೆಯಿತು. ಆದರೆ ಸಕಾಲದಲ್ಲಿ ಗ್ರಂಥ ಮುಕ್ತಾಯ ಕಾಣದೆ ಗಜಗರ್ಭ ಸೇರಿತು.

ಪರಮಪೂಜ್ಯ ಪಲಿಮಾರು ಹೃಷೀಕೇಶತೀರ್ಥಸಂಸ್ಥಾನಾಧಿಪತಿಗಳಾದ ಶ್ರೀಶ್ರೀ 1008 ಶ್ರೀವಿದ್ಯಾಧೀಶತೀರ್ಥ ಶ್ರೀಪಾದರು ಪ್ರಾತಃಸ್ಮರಣೀಯರಾದ ಮಹಾತಪಸ್ವಿಗಳಾಗಿದ್ದ ತಮ್ಮ ಪರಮಪೂಜ್ಯ ಗುರುಗಳಾದ ಶ್ರೀಶ್ರೀ 1008ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದಂಗಳವರ ದಶಮ ಆರಾಧನೆಯ ಮಹೋತ್ಸವದ ಪುಣ್ಯ ಪರ್ವಕಾಲದಲ್ಲಿ ಹತ್ತು ಗ್ರಂಥಗಳನ್ನು ಪ್ರಕಾಶನಗೊಳಿಸಬೇಕೆಂದು ಸಂಕಲ್ಪಿಸಿ ನನಗೂ ಒಂದು ಪುಸ್ತಕ ಬರೆಯುವಂತೆ ಪ್ರೀತಿಯಿಂದ ಆದೇಶಿಸಿದರು.

ಅವರ ಅನುಗ್ರಹದ ಆದೇಶದ ಫಲವಾಗಿ ಈ ಪುಸ್ತಕವು ಗಜಗರ್ಭದಿಂದ ಪ್ರಸವದ ಭಾಗ್ಯ ಪಡೆಯಿತು. ಶ್ರೀವಿದ್ಯಾಮಾನ್ಯತೀರ್ಥರ ಸಂಸ್ಥೆಯಿಂದ ಪ್ರಕಾಶನಗೊಳ್ಳುತ್ತಿರುವ ವಿಷಯವನ್ನು ತಿಳಿಸಿದಾಗ ಶ್ರೀಕಾಗಲ್ಕರರೂ ಇನ್ನೂ ಒಳ್ಳೆಯದಾಯಿತೆಂದು ಸಂತೋಷದಿಂದ ಒಪ್ಪಿದರು.

ಪರಮಪೂಜ್ಯ ಶ್ರೀಶ್ರೀ 1008 ಶ್ರೀವಿದ್ಯಾಮಾನ್ಯತೀರ್ಥ ಶ್ರೀಪಾದರು ತುಂಬ ಆತ್ಮೀಯತೆಯಿಂದ ಈ ಭಾಗ್ಯವನ್ನು ಅನುಗ್ರಹಿಸಿರುವರು. ಅದ್ಭುತ ಸಾಧಕರು, ಜ್ಞಾನಿಗಳು, ಮೇಲಾಗಿ ಎಲ್ಲರನ್ನು ಪ್ರೀತಿಯಿಂದ ಕಾಣುವ ಶ್ರೀರಾಮಕೃಷ್ಣಪಾದಪದ್ಮಾರಾಧಕರೂ ಆದ ಪರಮಪೂಜ್ಯ ತಪಸ್ವಿವರೇಣ್ಯ ಸತ್ಸಿದ್ಧಾಂತ ಸದಾಗ್ರಹಿಗಳಾದ ಶ್ರೀಶ್ರೀವಿದ್ಯಾಮಾನ್ಯತೀರ್ಥರ ಪ್ರತಿಮಾ ಸ್ಥಾನೀಯರಾದ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರ ಪರಮಾನುಗ್ರಹಕ್ಕೆ ಭಕ್ತಿಯ ಅನಂತ ಪ್ರಣಾಮಗಳನ್ನು ಸಲ್ಲಿಸುವುದರ ಹೊರತಾಗಿ ಮತ್ತೇನು ಕೊಡಲು ಸಾಧ್ಯ?

ಮರ ಎಷ್ಟು ಬೆಳೆದರೂ ಎಷ್ಟು ಹಬ್ಬಿದರೂ ಅದರ ಮೂಲಾಧಾರ ನೆಲೆ ಮನೆಯಾದ ಭೂತಾಯಿ ತಾನೆ? ಅಂತೆಯೇ ನಮ್ಮ ಅಕ್ಷರಜ್ಞಾನದ ಮೂಲಾಧಾರ ನಮ್ಮ ವಿದ್ಯಾಗುರುಗಳಾದ ಪರಮಪೂಜ್ಯ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರು. ತಂದೆ–ತಾಯಿ–ಗುರು ಎಲ್ಲವೂ ಆಗಿರುವ ಶ್ರೀಗಳವರಿಗೆ ಬರಿ ಬಾಯಿ ಮಾತಿನ ಕೃತಜ್ಞತೆ ತುಂಬ ಕೃತಕವೆನಿಸುತ್ತದೆ. 'ಭೂಯಿಷ್ಠಾಂ ತೇ ನಮ ಉಕ್ತಿಂ ವಿಧೇಮ' ಎಂಬ ಉಪನಿಷದ್ವಾಣಿಯೇ ನನ್ನ ಪ್ರತಿಕ್ರಿಯೆಯಷ್ಟೆ.

ಈ ಪುಸ್ತಕದ ಮಾಹಿತಿಗಳನ್ನು ಆಗಾಗ ಪರಿಶೀಲನೆ ಮಾಡುವುದರ ಜೊತೆಗೆ ಅನೇಕ ಅಪೂರ್ವ ಮಾಹಿತಿಗಳನ್ನು ಕೊಟ್ಟು ಸಹಕರಿಸಿದ ಪ್ರೀತಿಯ

ಮಿತ್ರರಾದ ಡಾ॥ ಹೆಚ್. ಸತ್ಯನಾರಾಯಣಾಚಾರ್ಯರಿಗೆ ಒಲವಿನ ಕೃತಜ್ಞತೆಗಳು. ಹಾಗೆಯೇ ಗೋದಾನದ ವಿವಿಧ ಮಾಹಿತಿಗಳ ಪುಸ್ತಕವನ್ನು ಕೊಟ್ಟು ಸಹಕರಿಸಿದ ಹಿರಿಯಮಿತ್ರರಾದ ಪಂಡಿತ ಎಲಮೇಲಿ ವಾಸುದೇವಾಚಾರ್ಯರ ಶಿಷ್ಯರಾದ ಪಂ॥ ಸತ್ಯನಾರಾಯಣಾಚಾರ್ಯರಿಗೆ ಕೃತಜ್ಞತೆಗಳು

ಪೂರ್ಣಪ್ರಜ್ಞಸಂಶೋಧನ ಮಂದಿರದ ನಿರ್ದೇಶಕರಾದ ನನ್ನ ಆತ್ಮೀಯ ಸಹಪಾಠಿ ವಿದ್ವನ್ಮಿತ್ರರಾದ ಶ್ರೀ ಆನಂದತೀರ್ಥ ನಾಗಸಂಪಿಗೆಯವರು ವಿಚಾರಗೋಷ್ಠಿಯಲ್ಲಿ ಅವಕಾಶ ಕೊಟ್ಟು ಗ್ರಂಥರಚನೆಯ ಸಂದರ್ಭದಲ್ಲಿ ಸಲಹೆ ಪ್ರೋತ್ಸಾಹಗಳನ್ನು ಕೊಟ್ಟು ಸಹಕರಿಸಿರುತ್ತಾರೆ. ಅವರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

ಇತಿ ಸುಜನವಿಧೇಯ

ಶ್ರೀರಾಮವಿಟ್ಠಲಾಚಾರ್ಯ

ವಿಷಯಾನುಕ್ರಮಣಿಕೆ

||ಶ್ರೀ||

ದಾನದ ಮಹತ್ತ್ವ

ನ ಅದತ್ತಮುಪಭುಜ್ಯತೇ

ಮನುಷ್ಯರಲ್ಲಿ ಕೆಲವರು ಒಳ್ಳೆ ಶಕ್ತಿ ಸಂಪನ್ನವಾದ ತಾರುಣ್ಯದಲ್ಲಿ ತಿನ್ನಲೂ ಇಲ್ಲದೆ ದಾರಿದ್ರ್ಯವನ್ನು ಅನುಭವಿಸುತ್ತಾರೆ. ಅವರು ವೃದ್ಧಾಪ್ಯದಲ್ಲಿ ಸಂಪದ್ಭರಿತರಾಗಿರುತ್ತಾರೆ. ಆಗ ಅನುಭವಿಸುವ ಶಕ್ತಿಯನ್ನೇ ಕಳೆದುಕೊಂಡಿರುತ್ತಾರೆ. ಕರುಣಾಳು ಎನಿಸಿದ ಭಗವಂತ ಸಕಾಲದಲ್ಲಿ ಸಂಪತ್ತು ಕೊಡಬಾರದಿತ್ತೆ?

ಮತ್ತೆ ಕೆಲವರು ಒಳ್ಳೆಯ ಪಂಡಿತರಾಗಿರುತ್ತಾರೆ. ಜೊತೆಗೆ ತುಂಬ ದರಿದ್ರರಾಗಿರುತ್ತಾರೆ. ಮತ್ತೊಬ್ಬ ನಿರಕ್ಷರಕುಕ್ಷಿ ಶ್ರೀಮಂತನಾಗಿ ಮೆರೆಯುತ್ತಿರುತ್ತಾನೆ! ಸಂಪತ್ತು ಯಾರಿಗೆ ಕೊಡಬೇಕೆಂದು ಯೋಚನೆ ಬೇಡವೇ?

ಪತ್ನಿ ಪಾರ್ವತಿಯ ಈ ಪ್ರಶ್ನೆಗೆ ಮಹೇಶ್ವರ ಉತ್ತರಿಸುತ್ತಾರೆ –ಪ್ರಿಯೆ। ಭಗವಂತನದು ತಪ್ಪೇನಿಲ್ಲ. ತಪ್ಪು ಮನುಷ್ಯನದೇ. ಹಿಂದಿನ ಜನ್ಮದಲ್ಲಿ ಮನುಷ್ಯ ಯೌವನದ ಅಮಲಿನಲ್ಲಿ ಅಹಂಕಾರಿಯಾಗಿ ಯಾರಿಗೂ ಏನನ್ನೂ ಕೈಯೆತ್ತಿ ಕೊಡಲಿಲ್ಲ, ವೃದ್ಧಾಪ್ಯ ಆವರಿಸಿದಾಗ ಈ ತನಕ ತಾನು ಯಾವ ದಾನಧರ್ಮಗಳನ್ನು ಮಾಡಲಿಲ್ಲ, ಮುಂದೇನು ಗತಿ! ಎಂದು ಹೆದರಿ ದಾನ ಕೊಡಲು ಶುರು ಮಾಡುತ್ತಾನೆ. ಅವನು ಯಾವ ವಯಸ್ಸಿಗೆ ದಾನ ಕೊಡಲು ಶುರು ಮಾಡಿದ ಅದೇ ವಯಸ್ಸಿಗೆ ದೇವರು ಸಂಪತ್ತು ಕೊಡುತ್ತಾನೆ.

ಹಿಂದಿನ ಜನ್ಮದಲ್ಲಿ ಚೆನ್ನಾಗಿ ವಿದ್ಯಾದಾನ ಮಾಡಿದ ಪ್ರಭಾವದಿಂದ ಈ ಜನ್ಮದಲ್ಲಿ ಒಳ್ಳೆ ಪಂಡಿತನಾದ. ಆದರೆ ಹಿಂದೆ ವಿದ್ಯೆ ಹೊರತು ಯಾರಿಗೆ ಯಾವ ಸಂಪತ್ತನ್ನೂ ಕೈಯೆತ್ತಿ ಕೊಡಲಿಲ್ಲ. ಈಗ ದರಿದ್ರನಾಗಿದ್ದಾನೆ.

ಮತ್ತೊಬ್ಬ ಹಿಂದೆ ವಿದ್ವಾಂಸನಾಗಿದ್ದವನು ಯಾರಿಗೂ ವಿದ್ಯಾದಾನ ಮಾಡಲಿಲ್ಲ. ಉಳಿದ ಸಂಪತ್ತನ್ನು ಧಾರಾಳವಾಗಿ ಕೊಟ್ಟ. ಈಗ ನಿರಕ್ಷರಕುಕ್ಷಿಯಾದರೂ ಶ್ರೀಮಂತನಾದನು. ಕೊಡದೇ ಇದ್ದುದನ್ನು ಅನುಭವಿಸಲು ಆಗುವುದಿಲ್ಲ.

ಕೈಗೆ ಸಂಸ್ಕಾರ ಬೇಕು

ಸಂತ ಸಮರ್ಥರಾಮದಾಸರು ಒಮ್ಮೆ ರಾಮನಾಮ ಭಜನೆ ಮಾಡುತ್ತ ಜೋಳಿಗೆ ಹಿಡಿದು ಬರುತ್ತಿದ್ದರು. ನಾಲ್ಕು ಮನೆಯ ಆಚೆ ಮನೆಯ ಹೆಂಗಸು ದಾಸರು ಬಂದರೆ ಏನಾದರೂ ಕೊಡಬೇಕಾಗುತ್ತದೆಯೆಂದು ಧಡಾರನೇ ಕದ ಮುಚ್ಚಿದಳು. ಗಮನಿಸಿದ ದಾಸರು ಅವಳ ಮನೆಯ ಮುಂದೆ ಬಂದು ಬಾಗಿಲು ತಟ್ಟಿ ತೆಗೆಯುವವರೆಗೆ ಸಹನೆಯಿಂದ ಕಾದು ನಿಂತರು. ಕೊನೆಗೂ ದಾಕ್ಷಿಣ್ಯಕ್ಕೆ ಕಟ್ಟುಬಿದ್ದು ಆಕೆ ಬಾಗಿಲು ತೆರೆದಳು. ದಾಸರು ಹೇಳಿದರು– 'ಅಮ್ಮ! ಮನೆಯ ಮುಂದಿನ ಮಣ್ಣನ್ನು ಒಂದು ಹಿಡಿಯಷ್ಟು ತೆಗೆದು ನನ್ನ ಜೋಳಿಗೆಗೆ ಹಾಕು.'

ಎಂಥ ದಾಸರು! ಮಣ್ಣನ್ನಾದರೂ ಹಾಕು ಎನ್ನುವರಲ್ಲ ಎಂದು ಗೊಣಗಿಕೊಂಡೇ ಕೇಳಿದಳು. ಅಕ್ಕಿಯಿರುವ ಜೋಳಿಗೆಗೆ ಮಣ್ಣು ಹಾಕಿದರೆ ಗತಿ? ಆರಿಸಿಕೊಳ್ಳಲು ತೊಂದರೆಯಾಗದೆ?

ದಾಸರು ನಗುತ್ತ ನೋಡಿ ಹೇಳಿದರು– ಅಮ್ಮ! ನನಗೆ ತೊಂದರೆಯಾದರೂ ಪರವಾಗಿಲ್ಲ. ನಿನ್ನ ಕೈಗೆ ಏನನ್ನಾದರೂ ಎತ್ತಿ ಕೊಡುವ ಸಂಸ್ಕಾರ ಬರಲಿ! ಮುಂದಿನ ಜನ್ಮದಲ್ಲಿ ಅಕ್ಕಿ ಹಾಕುವೆಯಂತೆ.

ದಾನ ನಮಗಾಗಿ! ಸಂಗ್ರಹ ಪರರಿಗಾಗಿ! 'ದಾನವೇ ಕೈಗೆ ಭೂಷಣ. ಬಂಗಾರದ ಬಳೆಗಳಲ್ಲ'[1]

---

1. ದಾನೇನ ಪಾಣಿಃ ನ ತು ಕಂಕಣೇನ–
   ದಾನವೇ ಭೂಷಣ ಇರುವ ಹಸ್ತಂಗಳಿಗೆ –ಶ್ರೀಪಾದರಾಜರು.

ಬ್ರಹ್ಮನಿಂದ ದಾನದ ಉಪದೇಶ

ಒಮ್ಮೆ ದೇವತೆಗಳು ದಾನವರು ಮಾನವರು ಉಪದೇಶ ಪಡೆಯಲೆಂದು ನಾಲ್ಮೊಗನಲ್ಲಿ ಹೋದರಂತೆ. ಬ್ರಹ್ಮ ಎಲ್ಲರಿಗೂ 'ದ' ಎಂದು ಒಂದೇ ಅಕ್ಷರದ ಉಪದೇಶ ಕೊಟ್ಟನಂತೆ. ಅಚ್ಚರಿಯಿಂದ ಅದರ ಆಶಯವನ್ನು ಅರುಹುವಂತೆ ಅವರೆಲ್ಲ ಕೇಳಿದರು.

ಬ್ರಹ್ಮ ಹೇಳಿದನು –ವಿಪುಲ ಭೋಗದ ಅವಕಾಶ ಪಡೆದಿರುವ ದೇವತೆಗಳು 'ದಮ'ವನ್ನು ಇಂದ್ರಿಯನಿಗ್ರಹವನ್ನು ಗಳಿಸಬೇಕು. ಎಲ್ಲರನ್ನು ದಮನ ಮಾಡುವುದೇ ಕಾಯಕವಾಗಿಸಿಕೊಂಡ ದಾನವರು 'ದಯೆ'ಯ ಪಾಠ ಕಲಿಯಬೇಕು. ಲೋಭಿಗಳಾದ ಮಾನವರು 'ದಾನ' ಮಾಡುವುದನ್ನು ಕಲಿಯಬೇಕು.

ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ದಾನ ಅವಶ್ಯಕರ್ತವ್ಯ ಎಂದಿರುವನು:

ಯಜ್ಞದಾನ ತಪಃ ಕರ್ಮ ನ ತ್ಯಾಜ್ಯಂ ಕಾರ್ಯಮೇವ ತತ್।
ಯಜ್ಞೋದಾನಂ ತಪಶ್ಚೈವ ಪಾವನಾನಿ ಮನೀಷಿಣಾಮ್॥ (ಭ.ಗೀ. 18–5)

ಯಜ್ಞ, ದಾನ, ತಪಸ್ಸು ಇವನ್ನು ಬಿಡಲಾಗದು. ಮಾಡಲೇಬೇಕು. ಯಜ್ಞ, ದಾನ, ತಪಸ್ಸು ಇವು ಜ್ಞಾನಿಗಳಿಗೆ ಪವಿತ್ರವಾದವು. ಇದನ್ನೇ ಕಠೋಪನಿಷತ್ 'ತ್ರಿಕರ್ಮಕೃತ್' ಎಂದು ತಿಳಿಸಿದೆ.

ನಾಲ್ಕು ಆಶ್ರಮದವರೂ ಈ ಮೂರನ್ನು ಮಾಡಬೇಕು. ಸನ್ಯಾಸಿಗಳು ಮಾಡಬೇಕಾದ ದಾನವೆಂದರೆ 'ಅಭಯದಾನ' ಮತ್ತು ವಿದ್ಯಾದಾನ ಎಂದು ಶ್ರೀಮಧ್ವರು ಈ ಸಂದರ್ಭದಲ್ಲಿ ಗೀತಾಭಾಷ್ಯದಲ್ಲಿ ಸಪ್ರಮಾಣವಾಗಿ ತಿಳಿಸಿರುವರು.

ಹೇಗಾದರೂ ದಾನ ಕೊಡಬೇಕು

ತೈತ್ತಿರೀಯ ಉಪನಿಷತ್ತಿನಲ್ಲಿ ದಾನವನ್ನು ಕೊಡಲೇಬೇಕು ಎನ್ನುವುದನ್ನು ಬಹುಬಗೆಯಿಂದ ವಿವರಿಸಲಾಗಿದೆ.

1. **ಶ್ರದ್ಧಯಾ ದೇಯಮ್**– ಆಸ್ತಿಕ್ಯಬುದ್ಧಿಪೂರ್ವಕವಾಗಿ ದಾನ ಮಾಡಬೇಕು. ದಾನವು ಶಾಸ್ತ್ರ ವಿಧಿಸಿರುವ ಕರ್ತವ್ಯ. ಇದು ಪುಣ್ಯಕರ ಎಂಬ ನಂಬಿಕೆಯಿಂದ ದಾನ ಕೊಡಬೇಕು.

2. **ಅಶ್ರದ್ಧಯಾ ದೇಯಮ್**– ಶ್ರದ್ಧೆಯಿರದಿದ್ದರೂ ದಾನ ಮಾಡಬೇಕು.

[1]ಶ್ರದ್ಧೆ ಎಂಬುದು ಅಂಗ. ದಾನ ಪ್ರಧಾನ. ಅಂಗವಾದದ್ದಿಲ್ಲವೆಂದು ಪ್ರಧಾನವಾದುದನ್ನು ಬಿಡಬಾರದು.

[2]ದಾನ ಪಡೆದವನು ಸತ್ ಪಾತ್ರನಾದರೆ ಶ್ರದ್ಧೆಯಿಂದ ದಾನ ಕೊಡಬೇಕು. ಅಪಾತ್ರನಾದರೆ ಅಶ್ರದ್ಧೆಯಿಂದ ದಾನ ನೀಡಬೇಕು. ಅಶ್ರದ್ಧೆ ಎಂದರೆ ಅಪಾತ್ರನ ಅಂತರ್ಯಾಮಿಯಾದ ಅಕಾರವಾಚ್ಯನಾದ ಭಗವಂತನಲ್ಲಿ ಶ್ರದ್ಧೆಯಿಟ್ಟು ಕೀರ್ತಿಗಾಗಿ ದಾನ ಮಾಡಬೇಕು.

3. **ಶ್ರಿಯಾ ದೇಯಮ್**– [3]ಪ್ರಸನ್ನವಾದ ಮನಸ್ಸಿನಿಂದ ದಾನ ನೀಡಬೇಕು. [4]ಬಹುಧನಸಂಪತ್ತಿದ್ದರೆ ಅದರ ರಕ್ಷಣೆಗಾಗಿ ಅನುಕೂಲರಾದ ಎಲ್ಲರಿಗೂ ಕೊಡಬೇಕು.

---

1. ಗುಣಭೂತಶ್ರದ್ಧಾಭಾವೇನ ಪ್ರಧಾನದಾನಲೋಪೋ ನ ಕರ್ತವ್ಯಃ ಇತಿ ಭಾವಃ ತೈ.ಖಂ. ಶ್ರೀ ರಾಘವೇಂದ್ರತೀರ್ಥೀಯ.

2. ಅಸತ್ ಪಾತ್ರಂ ಚೇತ್ ತತ್ರಾಪಿ ಅಶ್ರದ್ಧಯಾ ಕೀರ್ತ್ಯೈ ದೇಯಮ್। 'ಅ ಇತಿ ಬ್ರಹ್ಮ' ಇತಿ ಶ್ರುತೇಃ। ಏತದಂತರ್ಯಾಮಿಣೆ ನಾರಾಯಣೇ ಶ್ರದ್ಧಯಾದೇಯಮ್।' ಗುಹಾಶಯಾಯೈವ ನ ದೇಹಮಾನಿನೇ' ಇತಿ ಸ್ಮೃತೇಃ॥ ತೈ.ಪ್ರ. ಶ್ರೀವಾದಿರಾಜೀಯ

3. ಪ್ರಸನ್ನ ಮನಸಾ ಇತ್ಯರ್ಥಃ॥

4. ಶ್ರೀಭೂನಿಮಿತ್ತೇನ ದೇಯಂ। ಬಹುಧನ ಸಂಪತ್ತೌ ಸತ್ಯಾಂ ತದ್ರಕ್ಷಣಾಯ ಅನುಕೂಲೇಭ್ಯಃ ಸರ್ವೇಭ್ಯೋಽಪಿ ದೇಯಮ್ ಇತ್ಯರ್ಥಃ। ತೈ.ಪ್ರ.

4. **ಹ್ರಿಯಾ ದೇಯಮ್**– [1]ತನಗೆ ದಾನ ಕೊಡುವ ಔದಾರ್ಯವಿರದಿದ್ದರೂ ಮತ್ತೊಬ್ಬನು ಕೊಡುತ್ತಿದ್ದಾನೆಂದು ಸಂಕೋಚದಿಂದ ದಾನ ಕೊಡಬೇಕು.

5. **ಭಿಯಾ ದೇಯಮ್**– ದಾನ ಕೊಡದಿದ್ದರೆ ನರಕ, ದಾರಿದ್ರ್ಯಗಳು ಬಂದಾವೆಂದು, ನೋಡಿದವರು ದೂಷಿಸುತ್ತಾರೆಂಬ ಭಯದಿಂದ ದಾನ ಮಾಡಬೇಕು.

6. **ಸಂವಿದಾ ದೇಯಮ್**– ವಸ್ತುತಃ ಸಮೀಚೀನವಾದ ಜ್ಞಾನದಿಂದ ಕೊಡಬೇಕು. ನನ್ನ ಅಂತರ್ಯಾಮಿ ಕೊಡುತ್ತಿರುವನು. ದಾನ ಪಡೆದವ ನಂತರ್ಯಾಮಿಯಾದ ಶ್ರೀಹರಿಯು ಸ್ವೀಕರಿಸುತ್ತಿರುವನೆಂಬ ತಿಳಿವಳಿಕೆಯಿರಬೇಕು. ಭಗವಂತನ ಸೊತ್ತನ್ನೇ ಭಗವಂತನಿಗೆ ಅರ್ಪಣೆ ಮಾಡುತ್ತಿದ್ದೇವೆ ಎಂಬ ಅನುಸಂಧಾನವಿರಬೇಕು. ಶ್ರೀಹರಿ ಪ್ರೀತನಾಗಲಿ ಎಂಬ ಸಮರ್ಪಣೆಯಿರಬೇಕು.

ದಾನದಲ್ಲಿ ತಾರತಮ್ಯ

ಬೇರೆ ಬೇರೆ ದೃಷ್ಟಿಯಿಂದ ದಾನದಲ್ಲಿ ಉತ್ತಮ, ಮಧ್ಯಮ, ಅಧಮ ಎಂದು ಸಾತ್ತ್ವಿಕ, ರಾಜಸ, ತಾಮಸಗಳೆಂದೂ ತಾರತಮ್ಯವಿದೆ.

ಭಗವದ್ಗೀತೆಯಲ್ಲಿ ದಾನದಲ್ಲಿರುವ ಸಾತ್ತ್ವಿಕಾದಿ ಪ್ರಭೇದವನ್ನು ಹೀಗೆ ತಿಳಿಸಲಾಗಿದೆ:

[2]ದಾತವ್ಯಮಿತಿ ಯದ್ದಾನಂ ದೀಯತೇऽನುಪಕಾರಿಣೇ।
ದೇಶೇ ಕಾಲೇ ಚ ಪಾತ್ರೇ ಚ ತದ್ದಾನಂ ಸಾತ್ತ್ವಿಕಂ ಸ್ಮೃತಮ್॥

ದಾನ ಮಾಡುವುದು ಕರ್ತವ್ಯವೆಂದು ಶ್ರದ್ಧೆಯಿಂದ ಪುಣ್ಯ ದೇಶ, ಕಾಲಗಳಲ್ಲಿ, ಪ್ರತ್ಯುಪಕಾರವನ್ನು ಬಯಸದೆ ಸತ್ಪಾತ್ರನಲ್ಲಿ ಮಾಡುವ ದಾನವು ಸಾತ್ತ್ವಿಕವೆನಿಸಿದೆ.

---

1. ಸ್ವಸ್ಯ ದಾತೃಭಾವೇऽಪಿ ಅನ್ಯೋऽ ದದಾತೀತಿ ಹ್ರಿಯಾ ದೇಯಮ್। ತೈ.ಪ್ರ.
2. ಭ.ಗೀ. 17–20, 21, 22

ಯತ್ತು ಪ್ರತ್ಯುಪಕಾರಾರ್ಥಂ ಫಲಮುದ್ದಿಶ್ಯ ವಾ ಪುನಃ।
ದೀಯತೇ ಚ ಪರಿಕ್ಲಿಷ್ಟಂ ತದ್ದಾನಂ ರಾಜಸಂ ಸ್ಮೃತಮ್॥

ಪ್ರತ್ಯುಪಕಾರದ ಅಪೇಕ್ಷೆಯಿಂದ ಅಥವಾ ಸ್ವರ್ಗಾದಿಫಲದ ಉದ್ದೇಶದಿಂದ ಅನ್ಯಾಯಾರ್ಜಿತವಾದ ಸಂಪತ್ತನ್ನು ದಾನ ಮಾಡುವುದು ರಾಜಸವೆನಿಸಿದೆ.

ಅದೇಶಕಾಲೇ ಯದ್ದಾನಂ ಅಪಾತ್ರೇಭ್ಯಶ್ಚ ದೀಯತೇ।
ಅಸತ್ಕೃತಮವಜ್ಞಾತಂ ತತ್ತಾಮಸಮುದಾಹೃತಮ್॥

ಅಶುಚಿಯಾದ ದೇಶ-ಕಾಲಗಳಲ್ಲಿ, ಅಪಾತ್ರರಿಗೆ, ನಮಸ್ಕಾರಾದಿ ಸತ್ಕಾರ ಮಾಡದೇ ಅವಮಾನ ಪಡಿಸುತ್ತ ದಾನ ಮಾಡುವುದು ತಾಮಸವೆನಿಸಿದೆ.

[1]ದೂರದಲ್ಲಿರುವ ಸತ್ಪಾತ್ರನೆಡೆಗೆ ಹೋಗಿ ಅವನನ್ನು ಪ್ರಸನ್ನೀಕರಿಸಿ ದಾನವನ್ನು ಕೊಡುವುದು ಉತ್ತಮ.

[2]ಪಾತ್ರನನ್ನು ಮನೆಗೆ ಕರೆದು ಕೊಡುವುದು ಮಧ್ಯಮ.

[3]ಶಕ್ತಿ ಮೀರಿ ಕೊಡುವ ದಾನ ಉತ್ತಮ. [4]ಯಥಾಶಕ್ತಿ ಕೊಡುವ ದಾನ ಮಧ್ಯಮ. [5]ಶಕ್ತಿಗೆ ಅನನುರೂಪವಾಗಿ ಕೊಡುವ ದಾನ ಅಧಮ.

[6]ದಾನ ಪಡೆವವನ ಪಾತ್ರತೆಯನ್ನು ಮೊದಲೇ ತಿಳಿದು ಗೌರವ ಪೂರ್ವಕವಾಗಿಆಹ್ವಾನಿಸಿ ನಿವೇದನೆ ಮಾಡಿ ಶೌಚ ಆಚಮನ ಪುರಸ್ಸರವಾಗಿ

---

1. ಪಾತ್ರಭೂತಂ ತು ದೂರಸ್ಥಮಭಿಗಮ್ಯ ಪ್ರಸಾದ್ಯ ಚ ।
ದಾತಾ ದಾನಂ ತಥಾ ದದ್ಯಾತ್ ಯಥಾ ತುಷ್ಯೇತ ತೇನ ಸಃ ॥
–ಮ.ಭಾ.ಅನು–235ನೇ ಅಧ್ಯಾಯ
2. ಸಮಾಹೂಯ ತು ಮಧ್ಯಮಃ । –ಮ.ಭಾ.ಅನು – 235ನೇ ಅಧ್ಯಾಯ
3. ಅತಿಶಕ್ತ್ಯಾ ಪರಂ ದಾನಂ –ಮ.ಭಾ.ಅನು– 235ನೇ ಅಧ್ಯಾಯ
4. ಯಥಾಶಕ್ತಿ ತು ಮಧ್ಯಮಮ್ –ಮ.ಭಾ. ಅನು–235ನೇ ಅಧ್ಯಾಯ
5. ತೃತೀಯ ಚಾಪರಂ ದಾನಂ ನಾನುರೂಪಮಿವಾತ್ಮನಃ –ಮ.ಭಾ.ಅನು– 235ನೇ ಅಧ್ಯಾಯ

ಶ್ರದ್ಧೆಯಿಂದ ದಾನ ಮಾಡಬೇಕು. ಪ್ರತಿಗ್ರಹೀತೃವಿಗೆ ಎದುರಾಗಿ ಕುಳಿತು ಉತ್ತಮ ದೇಶ–ಕಾಲಗಳಲ್ಲಿ ಸಮ್ಮಾನಪೂರ್ವಕವಾಗಿ ದಾನಮಾಡಬೇಕು.

ದಾನದಲ್ಲಿರಬೇಕಾದ ಷಾಡ್ಗುಣ್ಯ :

ದಾನವು ಆರು ಅಂಶಗಳನ್ನೊಳಗೊಂಡಿದೆ.

1. ದಾನ ನೀಡುವವನು, 2 ಸ್ವೀಕರಿಸುವವನು, 3 ಕೊಡುವ ವಸ್ತು, 4. ಉಪಕ್ರಮ, 5 ದೇಶ, ಮತ್ತು 6. ಕಾಲ

ದಾತಾ ಪ್ರತಿಗ್ರಹೀತಾ ಚ ದೇಯಂ ಸೋಪಕ್ರಮಂ ತಥಾ ।
ದೇಶಕಾಲೌ ಚ ಯತ್ತ್ವೇತದ್ದಾನಂ ಷಡ್ಗುಣಮುಚ್ಯತೇ ॥

ಮ.ಭಾ. ಅನು – 234ನೇ ಅಧ್ಯಾಯ

1. **ದಾತಾ–** ಜನ್ಮದಾರಭ್ಯ ಮನೊ, ವಾಕ್, ಕಾಯ, ಕರ್ಮಗಳಿಂದ ಪರಿಶುದ್ಧನು, ಸತ್ಯವಾದಿಯು, ಕ್ರೋಧವನ್ನು ಗೆದ್ದವನು, ಲೋಭವಿಲ್ಲದವನು, ಅಸೂಯೆಯಿಲ್ಲದವನು, ಶ್ರದ್ಧಾವಂತನು, ಆಸ್ತಿಕನು ಆದ ದಾನಿಯು ಶ್ರೇಷ್ಠನು.

ಆದಿಪ್ರಭೃತಿ ಯಃ ಶುದ್ಧೋ ಮನೋವಾಕ್ಕಾಯಕರ್ಮಭಿಃ ।
ಸತ್ಯವಾದೀ ಜಿತಕ್ರೋಧಸ್ತ್ವಲುಬ್ಧೋ ನಾಭ್ಯಸೂಯಕಃ ॥
ಶ್ರದ್ಧಾವಾನಾಸ್ತಿಕಶ್ಚೈವ ಏವಂ ದಾತಾ ಪ್ರಶಸ್ಯತೇ ।

2. **ಪ್ರತಿಗ್ರಹೀತಾ–** ಶುದ್ಧನು, ದಾಂತನು, ಜಿತಕ್ರೋಧನು, ಉತ್ತಮ ಕುಲದಲ್ಲಿ ಹುಟ್ಟಿದವನು, ಶಾಸ್ತ್ರಾಧ್ಯಯನ ಸಂಪನ್ನನು, ಉತ್ತಮಚಾರಿತ್ರ್ಯ ಹೊಂದಿದವನು,

---

6. ಪೂರ್ವಂ ಚ ಪಾತ್ರತಾಂ ಜ್ಞಾತ್ವಾ ಸಮಾಹೂಯ ನಿವೇದ್ಯ ಚ ।
ಶೌಚಾಚಮನಸಂಯುಕ್ತಂ ದಾತವ್ಯಂ ಶ್ರದ್ಧಯಾ ಪ್ರಿಯೇ ॥
ಯಾಚಿತೃಣಾಂ ತು ಪರಮಮಾಭಿಮುಖ್ಯಂ ಪುರಸ್ಕೃತಮ್ ।
ಸಮ್ಮಾನಪೂರ್ವಂ ಸಂಗ್ರಾಹ್ಯಂ ದಾತವ್ಯಂ ದೇಶಕಾಲಯೋಃ ॥–ಮ.ಭಾ.ಅನು/235

ಬಹುಕುಟುಂಬಿಯು, ಪಂಚಯಜ್ಞಗಳನ್ನು ಆಚರಿಸುವವನು, ಶಾರೀರಿಕವಿಕಾರ ಇಲ್ಲದವನು, ಇಂತಹವನು ಸತ್ಪಾತ್ರನು.

ಪಿತೃ–ದೇವ–ಅಗ್ನಿಕಾರ್ಯಗಳಲ್ಲಿ ಇವನಿಗೆ ಕೊಟ್ಟದ್ದು ಮಹಾ ಫಲಪ್ರದ.

ಶುದ್ಧೋ ದಾಂತೋ ಜಿತಕ್ರೋಧಃ ತಥಾ ದೀನಕುಲೋದ್ಭವಃ ।
ಶ್ರುತಚಾರಿತ್ರಸಂಪನ್ನಸ್ತಥಾ ಬಹುಕಲತ್ರವಾನ್ ।
ಪಂಚಯಜ್ಞಪರೋ ನಿತ್ಯಂ ನಿರ್ವಿಕಾರಶರೀರವಾನ್।
ಏತಾನ್ ಪಾತ್ರಗುಣಾನ್ ವಿದ್ಧಿ ತಾದೃಕ್ ಪಾತ್ರಂ ಪ್ರಶಸ್ಯತೇ ।
ಪಿತೃದೇವಾಗ್ನಿಕಾರ್ಯೇಷು 'ತಸ್ಯ ದತ್ತಂ ಮಹಾಫಲಮ್'॥

[1]ಯಾರು ಯಾವುದಕ್ಕೆ ಅರ್ಹರೋ ಅವರು ಅದಕ್ಕೆ ಪಾತ್ರರು. ಯಾವುದರಿಂದ ಆಪನ್ನನು ಆಪತ್ತಿನಿಂದ ಬಿಡುಗಡೆ ಹೊಂದುವನೋ ಅವನು ಅದಕ್ಕೆ ಪಾತ್ರನು. ಅನ್ನಕ್ಕೆ ಹಸಿದವನು, ನೀರಿಗೆ ಬಾಯಾರಿದವನು ಪಾತ್ರ. ಹೀಗೆ ಪಾತ್ರತೆಯೆಂಬುದು ನಾನಾ ಬಗೆಯಾಗಿದೆ.

[2]ಜಾರ, ಚೋರ, ಷಂಡ, ಹಿಂಸಾಸ್ವಭಾವದವನು, ಮಾತು ತಪ್ಪುವವನು, ಜನರಿಗೆ ಅಡ್ಡಿ ಪಡಿಸುವವನು, ಇವರಿಗೆ ದಾನ ಕೊಡಬಾರದು.

3. **ದೇಯ–** ಮತ್ತೊಬ್ಬರನ್ನು ಘಾಸಿಗೊಳಿಸಿ ಸಂಪಾದಿಸಿದ, ಕಳ್ಳತನದಿಂದ

---

1. ಯದ್ಯದರ್ಹತಿ ಯೋ ಲೋಕೇ ಪಾತ್ರಂ ತಸ್ಯ ಭವೇಚ್ಚ ಸಃ ।
ಮುಚ್ಯೇದಾಪದ ಆಪನ್ನೋ ಯೇನ ಪಾತ್ರಂ ತದಸ್ಯ ತು ।
ಅನ್ನಸ್ಯ ಕ್ಷುಧಿತಂ ಪಾತ್ರಂ ತೃಷಿತಸ್ತು ಜಲಸ್ಯ ವೈ।
ಏವಂ ಪಾತ್ರೇಷು ನಾನಾತ್ವಂ ಇಷ್ಯತೇ ಪುರುಷಂ ಪ್ರತಿ ॥

2. ಜಾರಶ್ಚೋರಶ್ಚ ಷಂಡಶ್ಚ ಹಿಂಸ್ರಃ ಸಮಯಭೇದಕಃ ।
ಲೋಕವಿಘ್ನಕರಾಶ್ಚಾನ್ಯೇ ವರ್ಜಿತವ್ಯಾಃ ಸರ್ವಶಃ ಪ್ರಿಯೇ ॥

ಪಡೆದ, ನಿರ್ದಯವಾಗಿ ಕಸಿದುಕೊಂಡ, ಧೂರ್ತತನದ ದಬ್ಬಾಳಿಕೆಯಿಂದ ಪಡೆದ, ಅಧರ್ಮದಿಂದ, ಹಣದ ವ್ಯಾಮೋಹದಿಂದ, ಬಹಳ ಜನರನ್ನು ಪೀಡಿಸಿ ಗಳಿಸಿದ ಸಂಪತ್ತು ಅತ್ಯಂತ ನಿಂದಿತ. ಅಂತಹ ಹಣದಿಂದ ಮಾಡಿದ ಧರ್ಮ ವಿಫಲ. ಆದ್ದರಿಂದ ನ್ಯಾಯಮಾರ್ಗದಿಂದ ಗಳಿಸಿದ ಹಣದಿಂದಲೇ ಒಳಿತನ್ನು ಬಯಸುವವನು ದಾನ ಮಾಡಬೇಕು.

ಪರೋಪಘಾತಾದ್ ಯದ್ದ್ರವ್ಯಂ ಚೌರ್ಯಾದ್ವಾ ಲಭ್ಯತೇ ನೃಭಿಃ ।
ನಿರ್ದಯಾಲ್ಲಭ್ಯತೇ ಯಚ್ಚ ಧೂರ್ತಭಾವೇನ ವೈ ತಥಾ ॥

ಅಧರ್ಮಾದರ್ಥಮೋಹಾದ್ವಾ ಬಹೂನಾಮುಪರೋಧನಾತ್ ।
ಯಲ್ಲಭ್ಯತೇ ಧನಂ ದೇವಿ ತದತ್ಯಂತವಿಗರ್ಹಿತಮ್ ॥

ತಾದೃಶೇನ ಕೃತಂ ಧರ್ಮಂ ನಿಷ್ಫಲಂ ವಿದ್ಧಿ ಭಾಮಿನಿ ।
ತಸ್ಮಾನ್ನ್ಯಾಯಾಗತೇನೈವ ದಾತವ್ಯಂ ಶುಭಮಿಚ್ಛತಾ ॥

4. **ಉಪಕ್ರಮ–** [1]ನಮಗೆ ಯಾವುದು ಅತ್ಯಂತ ಪ್ರಿಯವೋ ಅದನ್ನು ಕೊಡಬೇಕು. ಇದನ್ನೇ ಉಪಕ್ರಮವೆನ್ನುವುದು. ಇದೇ ದಾತೃಗಳಿಗೆ ಪರಮ ಹಿತಪ್ರದವಾದುದು.

ನಾವು ಸಾಮಾನ್ಯವಾಗಿ ಮನೆಯಲ್ಲಿ ನಮಗೆ ಬಂದ ವಸ್ತುಗಳಲ್ಲಿ ಚೆನ್ನಾಗಿರುವುದನ್ನು ಇಷ್ಟಪಟ್ಟು ಉಳಿದುದನ್ನು ಕೊಡಲು ತೆಗೆದಿಡುತ್ತೇವೆ. ಆದರೆ ನಮಗೆ ಪ್ರಿಯವಾದುದನ್ನು ಕೊಡುವುದರಿಂದಲೇ ಪರಮ ಹಿತವೆಂದು ಮಹಾಭಾರತ ಹೇಳುತ್ತಿರುವುದನ್ನು ಗಮನಿಸಬೇಕು.

5. **ದೇಶ–** [2]ದೇವತೆಗಳು, ಋಷಿಗಳು ಸೇವಿಸಿದ ಕುರುಕ್ಷೇತ್ರ ಮುಂತಾದ

---

1. ಯದ್ಯದಾತ್ಮಪ್ರಿಯಂ ನಿತ್ಯಂ ತತ್ತದ್ದೇಯಮಿತಿ ಸ್ಥಿತಿಃ ।
ಉಪಕ್ರಮಮಿಮಂ ವಿದ್ಧಿ ದಾತೃಣಾಂ ಪರಮಂ ಹಿತಮ್ । –ಮ.ಭಾ.ಅನು/235 ಅ

ಪುಣ್ಯಕ್ಷೇತ್ರಗಳು, ಹಿಮಾಲಯಾದಿ ಪುಣ್ಯಪರ್ವತಗಳು, ಗಂಗಾದಿ ಪುಣ್ಯತೀರ್ಥಗಳು, ಇವುಗಳು ಪವಿತ್ರ ದೇಶಗಳು. ಇವಲ್ಲದೇ ಪಾತ್ರರು ಎಲ್ಲಿ ಪಡೆಯಲು ಬಯಸುವರೋ ಅದೇ ಪುಣ್ಯದೇಶ. ಇಂತಹ ದೇಶದಲ್ಲಿ ಕೊಟ್ಟದ್ದಕ್ಕೆ ಮಹಾಫಲ.

6. ಕಾಲ– ಶರದ್, ವಸಂತ ಋತುಗಳು, ಪುಣ್ಯಮಾಸಗಳು, ಶುಕ್ಲಪಕ್ಷ, ಹುಣ್ಣಿಮೆ, ಪಿತೃದೇವತಾಕವಾದ ನಕ್ಷತ್ರಗಳಂದು ನಿರ್ಮಲವಾದ ದಿವಸ, ಇವು ಪ್ರಶಸ್ತಕಾಲ. ಹಾಗೆ ಚಂದ್ರ–ಸೂರ್ಯಗ್ರಹಣಕಾಲ, ದಾನ ಪಡೆವವನು ಯಾವ ಕಾಲದಲ್ಲಿ ಬಯಸುವನೋ ಆ ಕಾಲ ದಾನಕ್ಕೆ ಪುಣ್ಯಕಾಲ.

ಕೊಡುವ ದಾನ ಅತ್ಯಲ್ಪವಾದರೂ ಈ ಆರು ಗುಣಗಳಿಂದ ಕೂಡಿದ್ದರೆ ಅದು ಶ್ರೇಷ್ಠವಾದ ದಾನವೆನಿಸುವುದು. ದಾನ ಮಹತ್ತರವಾದರೂ ಷಾಡ್ಗುಣ್ಯವರ್ಜಿತವಾದರೆ ಅತ್ಯಲ್ಪ ಫಲದಾಯಕ ಅಥವಾ ವಿಫಲವೇ ಆಗುವುದು. ದುಷ್ಫಲವೇ ದೊರೆತೀತು.

---

2. ಕುರುಕ್ಷೇತ್ರಂ ಮಹಾನನ್ದ್ಯೋ ಯಶ್ಚ ದೇವರ್ಷಿಸೇವಿತಃ ।
ಗಿರಿರ್ವರಶ್ಚ ತೀರ್ಥಾನಿ ದೇಶಭಾಗೇಷು ಪೂಜಿತಃ ॥
ಗ್ರಹೀತುಮೀಪ್ಸಿತೋ ಯತ್ರ ತತ್ರ ದತ್ತಃ ಮಹಾಫಲಮ್ ।
ಶರದ್ವಸಂತಕಾಲಶ್ಚ ಪುಣ್ಯಮಾಸಸ್ತಥೈವ ಚ ॥
ಶುಕ್ಲಪಕ್ಷಶ್ಚ ಪಕ್ಷಾಣಾಂ ಪೌರ್ಣಮಾಸೀ ಚ ಪರ್ವಸು ।
ಪಿತೃದೈವತ ನಕ್ಷತ್ರ ನಿರ್ಮಲೋ ದಿವಸಸ್ತಥಾ ॥
ತಚ್ಛ್ರೋಭನತರಂ ವಿದ್ಧಿ ಚಂದ್ರಸೂರ್ಯಗ್ರಹೇ ತಥಾ ।
ಪ್ರತಿಗ್ರಹೀತುರ್ಯಃ ಕಾಲಃ ಮನಸಾ ಕೀರ್ತಿತಃ ಶುಭೇ ॥
ಏವಮಾದಿಷ್ಟಕಾಲೇಷು ದತ್ತಂ ದಾನಂ ಮಹದ್ ಭವೇತ್ ।
ಅತ್ಯಲ್ಪಮಪಿ ಯದ್ದಾನಮೇಭಿಃ ಷಡ್ಭಿರ್ಗುಣೈರ್ಯುತಮ್ ॥
ಭೂತ್ವಾಽನಂತಂ ನಯೇತ್ ಸ್ವರ್ಗಂ ದಾತಾರಂ ದೋಷವರ್ಜಿತಮ್ ।
ಸುಮಹದ್ವಾಪಿ ಯದ್ದಾನಂ ಗುಣೈರೇಭಿರ್ವಿನಾ ಕೃತಮ್ ॥
ಅತ್ಯಲ್ಪಫಲನಿರ್ಯೋಗಮಫಲಂ ವಾ ಫಲೋದ್ಧತಮ್ ।– ಮ.ಭಾ.ಅನು/235 ಅ

ಯಾರು ಪಾತ್ರ ?

ತಪಃ ಸ್ವಾಧ್ಯಾಯ ವಿದ್ಯಾಭಿಃ ವಿಪ್ರಃ ಪಾತ್ರತ್ವಮಶ್ನುತೇ ।
ದುರ್ಲಭಂ ತ್ರಯಮೇಕತ್ರ ಕುತ್ರಚಿತ್ ಸುಲಭಂ ದ್ವಯಮ್ ॥

ಏಕೈಕಸ್ಮಾದಪಿ ಪ್ರೋಕ್ತಂ ಪಾತ್ರತ್ವಂ ನಾನ್ಯಥಾ ಹಿ ತತ್॥

– ವಿಷ್ಣುರಹಸ್ಯ ಅಧ್ಯಾಯ, 38/12, 15

ತಪಸ್ಸು, ವೇದಾಧ್ಯಯನ, ಆಧ್ಯಾತ್ಮವಿದ್ಯೆ, ಈ ಮೂರರಿಂದ ಬ್ರಾಹ್ಮಣನಿಗೆ ಪಾತ್ರತೆ ಬರುವುದು. ಈ ಮೂರು ಒಂದೆಡೆ ಇರುವುದು ದುರ್ಲಭ. ಕೆಲವೆಡೆ ಸುಲಭವಾಗಿ ಎರಡು ಪಾತ್ರತೆಯಿರಬಹುದು. ಈ ಮೂರರಲ್ಲಿ ಒಂದೊಂದರಿಂದಲೂ ಪಾತ್ರತೆ ಬರುವುದು. ಮೂರೂ ಇಲ್ಲದಿದ್ದರೆ ಅವನು ಪಾತ್ರನೆನಿಸುವುದಿಲ್ಲ.

ಅನ್ನಸ್ಯ ಕ್ಷುಧಿತಂ ಪಾತ್ರಂ ಪಾನೀಯಸ್ಯ ಪಿಪಾಸಿತಮ್ ।
ನ ಹಿ ಜಾತಿವಿವೇಕೋಽತ್ರ ವಿಶೇಷಾತ್ ಬ್ರಾಹ್ಮಣಃ ಸ್ಮೃತಃ ।

ವಿಷ್ಣುರಹಸ್ಯ –38/13–14

ಅನ್ನಕ್ಕೆ ಹಸಿದವನು ಪಾತ್ರ. ನೀರಿಗೆ ಬಾಯಾರಿದವನು ಪಾತ್ರ. ಇಲ್ಲಿ ಜಾತಿಭೇದವಿಲ್ಲ. ಬ್ರಾಹ್ಮಣನು ವಿಶೇಷವಾಗಿ ಪಾತ್ರನೆನಿಸಿರುವನು.

ಮೋಕ್ಷೋಪಯೋಗಿ ಯತ್ ಜ್ಞಾನಂ ಸಾ ಹಿ ವಿದ್ಯೇತಿ ಭಣ್ಯತೇ ।
ವಿದ್ಯಾವಾನಧಿಕಸ್ತಸ್ಮಾತ್ ಶ್ರೌತಃ ಪಾತ್ರಂ ತತೋ ಹಿ ಸಃ ॥

ವಿಪ್ರಾಣಾಮಪಿ ಪಾತ್ರಾಣಿ ವಿಪ್ರಾ ಏವ ಮಿಥಃ ಸ್ಮೃತಾಃ ।
ತಾರತಮ್ಯಂ ತು ತತ್ರಾಪಿ ತಪ ಆದೇರ್ವಿಶೇಷತಃ ॥

– ವಿ.ರ. 38/15–16

ಮೋಕ್ಷೋಪಯೋಗಿಯಾದ ಜ್ಞಾನವು ವಿದ್ಯೆಯೆನಿಸುವುದು. ಇಂತಹ ವಿದ್ಯಾವಂತನು ಅಧಿಕಪಾತ್ರನು. ಅನಂತರ ವೇದಾಧ್ಯಯನ ಮಾಡಿದವನು ಪಾತ್ರನು.

ಬ್ರಾಹ್ಮಣರು ದಾನ ಕೊಡಲು ಬ್ರಾಹ್ಮಣರೇ ಪರಸ್ಪರ ಪಾತ್ರರು. ಅವರು ತಪಸ್ಸು, ವೇದಾಧ್ಯಯನ, ಆಧ್ಯಾತ್ಮವಿದ್ಯೆಗಳ ತಾರತಮ್ಯದಿಂದ ಪಾತ್ರತೆಯಲ್ಲಿ ತಾರತಮ್ಯವನ್ನು ತಿಳಿಯಬೇಕು.

ಯಥಾಯೋಗ್ಯ ದಾನ

ದೃಷ್ಟಿಂ ದದ್ಯಾನ್ಮನೋ ದದ್ಯಾತ್ ವಾಚಂ ದದ್ಯಾಚ್ಚ ಸೂನೃತಾಮ್ ।
ಉತ್ಥಾಯ ಚಾಸನಂ ದೇಯಾದ್ ಇತ್ಯಾದೌ ವಿಪ್ರತೋಷಣಮ್ ।
ಶಕ್ತ್ಯಾ ದಾನಂ ಪ್ರಕುರ್ವೀತ, ಯಥಾಪಾತ್ರಂ ಯಥಾಧನಮ್ ।
ಯಥಾಶ್ರಿತತತ್ವಸಂಬಂಧಂ ಯಥಾಪ್ರೀತಿ ಯಥಾಶ್ರಮಮ್ ॥
ಇತ್ಥಂ ದಾನಾನ್ನ ತೋಷಃ ಸ್ಯಾದ್‌ಯದಿ ವಿಪ್ರಸ್ಯ ಕರ್ಹಿಚಿತ್ ।
ತದಾ ಸಾಕ್ಷೀ ಹರಿಸ್ತಸ್ಮಾತ್ತುಷ್ಟೋ ದಾತರಿ ಜಾಯತೇ॥

– ವಿ.ರ.38/ 19–21

ಬ್ರಾಹ್ಮಣರು ಬಂದಾಗ ಮೊದಲು ಭಕ್ತಿಯಿಂದ ಕಣ್ಣೆತ್ತಿ ಅವರನ್ನು ನೋಡಬೇಕು. ಹಿತವಾಗಿ ಮಾತನಾಡಿಸಬೇಕು. ಎದ್ದು ಆಸನವನ್ನು ಕೊಡಬೇಕು. ಹೀಗೆ ಮೊದಲು ನಮ್ಮ ಹಿತವಾದ ನಡವಳಿಕೆಯಿಂದ ಸಂತೋಷಪಡಿಸಬೇಕು. ಬಳಿಕ ದಾನವನ್ನು ಕೊಡಬೇಕು.

ನಮ್ಮ ಶಕ್ತಿಗೆ ಅನುಸಾರವಾಗಿ, ಪ್ರತೀಗ್ರಹೀತೃವಿನ ಪಾತ್ರತೆಗೆ ಅನುಗುಣವಾಗಿ, ನಮ್ಮ ಸಂಪತ್ತಿಗೆ ಅನುಸಾರವಾಗಿ ಹಾಗೂ ಅವರು ನಮ್ಮಲ್ಲಿ ಆಶ್ರಿತರಾಗಿದ್ದರೆ ಆ ಸಂಬಂಧಕ್ಕೆ ಅನುಗುಣವಾಗಿ, ನಮ್ಮಲ್ಲಿ ಅವರಿಗಿರುವ ಪ್ರೀತಿಗೆ ಅನುಸಾರವಾಗಿ, ತೆಗೆದುಕೊಳ್ಳುವವರ ಬ್ರಹ್ಮಚರ್ಯಾದಿ ಆಶ್ರಮಗಳಿಗೆ ಹೊಂದುವಂತೆ ದಾನ ಕೊಡಬೇಕು. ಒಂದು ಪಕ್ಷ ತಾರತಮ್ಯಾನುಸಂಧಾನಪೂರ್ವಕವಾದ ನಮ್ಮ ದಾನದಿಂದ ಆ ವಿಪ್ರರಿಗೆ ಸಂತೋಷವಾಗದಿದ್ದರೆ ಚಿಂತೆ ಇಲ್ಲ. ನಿಮ್ಮ ಅನುಸಂಧಾನಪೂರ್ವಕವಾದ ದಾನಪ್ರವೃತ್ತಿಗೆ ಶ್ರೀಹರಿಯು ಸಾಕ್ಷೀ. ಅವನು ನಿಮ್ಮ ವಿಷಯದಲ್ಲಿ ಸಂತುಷ್ಟನಾಗುತ್ತಾನೆ.

ಯತ್ರ ಕಾಲೇ ಯತ್ರ ದೇಶೇ ಲಭ್ಯಂತೇ ಬ್ರಾಹ್ಮಣಾ ಯಥಾ ।
ತಥೈವ ವಂದನೀಯಾಸ್ತೇ ಯತಸ್ತಾ ಹರಿಮೂರ್ತಯಃ ।
ಹರಿಭಾವನಯಾ ತಸ್ಮಾತ್ ಪೂಜ್ಯಾಸ್ತೇ ಭಕ್ತಿಪೂರ್ವಕಮ್ ॥

–ವಿ. ರ. 38/22

ಯಾವ ಕಾಲ–ದೇಶಗಳಲ್ಲಿ ಎಂತಹ ಬ್ರಾಹ್ಮಣರು ದೊರೆಯುತ್ತಾರೋ ಅವರನ್ನೇ ಗೌರವಿಸಬೇಕು. ಏಕೆಂದರೆ ಅವರು ಶ್ರೀ ಹರಿಯ ಪ್ರತಿಮೆಗಳು. ಆದ್ದರಿಂದ ಅವರಲ್ಲಿ ಶ್ರೀಹರಿ ಇರುವನೆಂದು ಭಕ್ತಿಪೂರ್ವಕವಾಗಿ ಪೂಜಿಸಬೇಕು.

ಆಗಲೇ ದಾನ

ಯದೈವ ಜಾಯತೇ ಶ್ರದ್ಧಾ ಪಾತ್ರಂ ಸಂಪ್ರಾಪ್ಯತೇ ಯದಾ ।
ಸ ಏವ ಪುಣ್ಯಕಾಲಃ ಸ್ಯಾದ್ ಯತಃ ಸಂಪತ್ತಿರಸ್ಥಿರಾ ॥

–ಗ.ಪು.ಪ್ರೇ.ಕಾ. 8/89

ಕೊಡುವ ಶ್ರದ್ಧೆ ಎಂದು ಉಂಟಾಗುವುದೋ, ಪಾತ್ರ ಎಂದು ದೊರೆಯುವನೋ ಅದೇ ಪುಣ್ಯಕಾಲವೆಂದರಿತು ದಾನ ಮಾಡಿಬಿಡಬೇಕು. ಸಂಪತ್ತು ಅಸ್ಥಿರ.

ಆತ್ಮಾಯತ್ತಂ ಧನಂ ಯಾವತ್ ತಾವದ್ ವಿಪ್ರೇ ಸಮರ್ಪಯೇತ್ ।
ಪರಾಧೀನೇ ಧನೇ ಜಾತೇ ನ ಕಿಂಚಿದ್ ವಕ್ತುಮುತ್ಸಹೇತ್ ॥

–ಗ.ಪು.ಪ್ರೇ.ಕಾಂ. 8/ಪು. 107

ನಾವು ಗಳಿಸಿದ ಸಂಪತ್ತು ನಮ್ಮ ಅಧೀನದಲ್ಲಿರುವಾಗಲೇ ವಿಪ್ರರಿಗೆ ಅರ್ಪಣೆ ಮಾಡಬೇಕು. ಸಂಪತ್ತು ಪರಾಧೀನವಾದರೆ ಏನೂ ಮಾತನಾಡಲಾಗುವುದಿಲ್ಲ.

ಸಂಪದೋ ವಿಪದಶ್ಚೈವ ಭ್ರಮಂತಿ ರಥಚಕ್ರವತ್ ।
ಅತೋ ಯಾವದ್ಯಸ್ಯ ಶಕ್ತಿರ್ದಾನೇ ತಪಸಿ ಭೂಮಿಪ ।
ತಾವತ್ಯೇವ ಪ್ರಕುರ್ವೀತ ಪುಣ್ಯಮಿತ್ಯಾಹ ಹಿ ಶ್ರುತಿಃ ॥

–ವಿ.ರ. 38/41

ರಥದ ಚಕ್ರದಂತೆ ಸಂಪತ್ತು, ವಿಪತ್ತುಗಳು ಒಂದರ ಮೇಲೊಂದು ಸುತ್ತುತ್ತಲೇ ಇರುತ್ತವೆ. ಆದ್ದರಿಂದ ಯಾರಿಗೆ ಎಷ್ಟು ಶಕ್ತಿಯಿರುತ್ತದೆಯೋ ಅಷ್ಟು ದಾನ, ಅಷ್ಟು ತಪಸ್ಸು ಮಾಡಬೇಕು. ಅದೇ ಪುಣ್ಯದ ಕೆಲಸವೆನ್ನುತ್ತದೆ ಶ್ರುತಿ.

ಅದೇ ಅನ್ನ, ಅದೇ ಹಣ

ತದನ್ನಂ ತದ್ಧನಂ ನೃಣಾಂ ಯದ್ವಿಪ್ರೇಷು ವ್ಯಯೀಕೃತಮ್ ।
ನ ತದನ್ನಂ ವ್ಯಯೋ ನಾಸೌ ಯೋ ವಿಪ್ರಾಣಾಂ ನ ತೋಷಕೃತ್ ॥

'ವಿಪ್ರರಿಗೆ ಉಣಬಡಿಸಿದ್ದೇ ಅನ್ನ. ವಿಪ್ರರಿಗಾಗಿ ವ್ಯಯಗೊಳಿಸಿದ್ದೇ ಸಂಪತ್ತು. ವಿಪ್ರರನ್ನು ಸಂತೋಷಪಡಿಸದ ಅನ್ನ ಅನ್ನವಲ್ಲ. ಸಂಪತ್ತು ಸಂಪತ್ತಲ್ಲ.'

ಇದ್ದರೂ ಕೊಡಬೇಕು. ಇಲ್ಲದಿದ್ದರೂ ಕೊಡಬೇಕು.

ಸಾನುಕೂಲೇ ಹರೌ ದೇಯಂ ಯತಃ ಪೂರಯಿತಾ ಹರಿಃ ।
ಪ್ರತಿಕೂಲೇ ಹರೌ ದೇಯಂ ಯತಃ ಸರ್ವಂ ಹರಿಷ್ಯತಿ ॥
ದಾರಿದ್ರ್ಯಂ ಯದ್ಯವಶ್ಯಂ ಸ್ಯಾತ್ತದಾ ಚೋರನೃಪಾದಿಭಿಃ ।
ಧನಹಾನಿರ್ಭವೇದೇವ ದಾನಾತ್ಪುಣ್ಯಾಧಿಕೋ ಭವೇತ್ ॥

–ವಿ.ರ. 38/46–47

ಶ್ರೀಹರಿಯು ನಮಗೆ ಅನುಕೂಲನಾಗಿರುವಾಗ ಧೈರ್ಯವಾಗಿ ದಾನ ಮಾಡಬೇಕು. ತುಂಬಿ ಕೊಡಲು ಹರಿಯಿರುವನಲ್ಲ!

ದಾರಿದ್ರ್ಯವನ್ನು ಅವಶ್ಯವಾಗಿ ಅನುಭವಿಸಬೇಕೆಂದು ಹಣೆಬರಹವಿದ್ದರೆ ಕಳ್ಳರಿಂದಲೋ ರಾಜರಿಂದಲೋ ಧನಾಪಹಾರವಾಗಿಯೇ ತೀರುತ್ತದೆ. ಅದರ ಬದಲು ನಾವೇ ಕೈಯೆತ್ತಿ ದಾನವಿತ್ತರೆ! ಅಧಿಕ ಪುಣ್ಯವಾದರೂ ಬರುವುದಲ್ಲವೇ?

ಸಾವಿರ ಕೈಯಿಂದ ಕೊಟ್ಟರೆ ಎರಡು ಕೈಯಿಂದ ಎಷ್ಟು ಹಿಡಿದೇವು?

ಸಂಪದೋ ಯದಿ ಜಾಯೇರನ್ ತದಾ ದಾನಾತ್ ಕಿಯಾನ್ ಕ್ಷಯಃ ।
ದಾತಾ ಹಸ್ತಸಹಸ್ರೈಃ ಸ್ಯಾದ್ ಹರಿಃ ಪ್ರೀತೋ ನೃಣಾಂ ಯದಿ ।
ವ್ಯಯೋ ಹಸ್ತದ್ವಯೇನಾಽಸ್ಯ ಧನಸ್ಯ ಭವಿತಾ ಕಿಯಾನ್ ॥

–ವಿ.ರ. 38/47–49

ಸಂಪತ್ತು ಮೇಲಿಂದ ಮೇಲೆ ಬರುತ್ತಿದ್ದರೆ ನಮ್ಮ ದಾನ–ಧರ್ಮದಿಂದ ಏನು ಮಹಾ ಖರ್ಚಾದೀತು? ಪ್ರೀತನಾದ ಶ್ರೀಹರಿ ಸಾವಿರ ಕೈಯಿಂದ ಕೊಡಲು ಶುರು ಮಾಡಿದರೆ ಎರಡು ಕೈಯಿಂದ ನಾವೆಷ್ಟು ಖರ್ಚು ಮಾಡಲು ಸಾಧ್ಯ ?

ಅವ ಸಾವಿರ ಕೈಯಿಂದ ಕಸಿದರೆ ಎರಡು ಕೈಯಿಂದ ಎಷ್ಟು ಕಾಪಾಡಬಹುದು?

ಹರ್ತಾ ಹಸ್ತಸಹಸ್ರೈಶ್ಚೇತ್ ಧನಸ್ಯ ಭವಿತಾ ಹರಿಃ ।
ತದಾ ಹಸ್ತದ್ವಯೇನಾಸೌ ಕಿಯದ್ರಕ್ಷಣಮಾಚರೇತ್ ॥
ತಸ್ಮಾದ್ದಾನಂ ಪ್ರಕುರ್ವೀತ ಸರ್ವವಾಂಛಾಪ್ರಪೂರಕಮ್ ।
ವಿನಾ ಶರೀರಸಂಕ್ಲೇಶೈಃ ಮಹಾಪುಣ್ಯಂ ಯತೋ ಭವೇತ್ ॥

–ವಿ.ರ. 38/49–50

ಶ್ರೀಹರಿ ಸಾವಿರಾರು ಕೈಗಳಿಂದ ಕಸಿದುಕೊಳ್ಳಲು ಶುರುವಿಟ್ಟುಕೊಂಡರೆ ಎರಡು ಕೈಗಳಿಂದ ಎಷ್ಟು ಸಂಪತ್ತನ್ನು ರಕ್ಷಣೆ ಮಾಡಿಕೊಳ್ಳಬಲ್ಲೆವು?

ಆದ್ದರಿಂದ ಸರ್ವಾಭೀಷ್ಟ ಪೂರಕವಾದ ದಾನವನ್ನು ಮಾಡುತ್ತಿರಬೇಕು. ಇಂಥ ದಾನದಿಂದ ಶಾರೀರಿಕ ಕ್ಲೇಶವಿಲ್ಲದೆ ಮಹಾ ಪುಣ್ಯ ಬರುವುದು.

ಶಕ್ತಿವಂಚನತೋ ದಾನಂ ಶಾಠ್ಯದಾನಂ ಪ್ರಕೀರ್ತಿತಂ ।
ಹರಿಸ್ತೇನ ನ ತುಷ್ಯೇತ ಫಲಮಲ್ಪಂ ಭವೇತ್ತತಃ ॥
ಅಪಮಾನೇನ ಶಾಠ್ಯೇನ ಪಾಪಮಪ್ಯಧಿಕಂ ಭವೇತ್ ।

–ವಿ.ರ. 38/60–61

ಶಕ್ತಿವಂಚನೆಯಿಂದ ಮಾಡುವ ದಾನ ಶಾಠ್ಯದಾನವೆನಿಸುವುದು. ಇದರಿಂದ ಶ್ರೀಹರಿ ಸಂತೋಷಗೊಳ್ಳುವುದಿಲ್ಲ. ಅದರಿಂದ ಬರುವ ಫಲವೂ ಅಲ್ಪ. ವಿಪ್ರರ ಅವಮಾನದಿಂದ, ತೋರಿಸುವ ಶಾಠ್ಯದಿಂದ ಅಧಿಕ ಪಾಪವೂ ಸಂಭವಿಸುತ್ತದೆ.

ಯಾರು ಎಷ್ಟು ಕೊಡಬೇಕು ?

ಏಕಂ ದಶಧನೋ ದದ್ಯಾತ್ ಸಹಸ್ರಧನವಾನ್ ಶತಮ್ ।
ದಶ ದದ್ಯಾತ್ ಶತಧನಃ ಸರ್ವೇ ತುಲ್ಯಫಲಾಃ ಸ್ಮೃತಾಃ ॥
ಪಂಚ ದದ್ಯಾತ್ ಶತಧನಃ ಸಹಸ್ರಧನವಾನ್ ದಶ ।
ಪುಣ್ಯಾಧಿಕ್ಯಂ ಶತಧನೇ ಭವೇತ್ತತ್ರ ನ ಚಾನ್ಯಥಾ ॥

–ವಿ.ರ. 38/26–28

ಹತ್ತು ರೂ. ಇರುವವನು ಒಂದು ರೂಪಾಯಿಯನ್ನು, ನೂರು ರೂಪಾಯಿ ಇರುವವನು ಹತ್ತು ರೂಪಾಯಿಯನ್ನು, ಸಾವಿರ ರೂ. ಇರುವವನು ನೂರು ರೂಪಾಯಿಗಳನ್ನು ಕೊಟ್ಟಾಗ ಎಲ್ಲರಿಗೂ ಸಮಾನವಾದ ಫಲ ಬರುವುದು.

ನೂರು ರೂ. ಗಳಿರುವವನು ಐದು ರೂ.ಗಳನ್ನು ಕೊಟ್ಟಾಗ, ಸಾವಿರ ರೂ. ಇರುವವನು ಹತ್ತು ರೂ.ಗಳನ್ನು ದಾನವಿತ್ತರೆ ನೂರು ರೂಪಾಯಿಯವನಿಗೆ ಅಧಿಕ ಪುಣ್ಯ. ಹತ್ತು ರೂ. ಕೊಟ್ಟನೆಂದು ಸಾವಿರ ರೂಪಾಯಿಯಿರುವವನಿಗೆ ಅಧಿಕ ಪುಣ್ಯ ಬಾರದು.

ತೃಣಾನಿ ಭೂಮಿರುದಕಂ ವಾಕ್ ಚತುರ್ಥೀ ಚ ಸೂನೃತಾ ।
ಏತಾನ್ಯಪಿ ಸತಾಂ ಗೇಹೇ ನೋಚ್ಛಿದ್ಯಂತೇ ಕದಾಚನ ॥

–ವಿ.ರ.38/61–62

ಕುಳಿತುಕೊಳ್ಳಲು ಹುಲ್ಲಿನ ಚಾಪೆ ಅಥವಾ ನೆಲ, ಕುಡಿಯಲು ನೀರು, ಹಿತವಾದ ಮಾತು – ಸಜ್ಜನರ ಮನೆಯಲ್ಲಿ ಈ ನಾಲ್ಕಕ್ಕೆ ಎಂದೂ ಕೊರತೆ ಬರುವುದಿಲ್ಲ. ಇಷ್ಟನ್ನಾದರೂ ಕೊಡಬೇಕು.

ಇವರು ಕೊಡದಿದ್ದರೂ ಪಾಪವಿಲ್ಲ

ಗೃಹಿಣಃ ಶಕ್ತ್ಯಭಾವೇ ತು ಪಾತ್ರಾವಜ್ಞಾನದೋಷಕೃತ್ ।
ಅಂಧೋ ಯದಿ ನ ಪಶ್ಯೇತ ಭ್ರಾಂತೋ ದದ್ಯಾನ್ಮನೋ ನ ಚೇತ್ ॥
ರೋಗೀ ವಾ ಪಂಗುಲೋ ವಾಪಿ ನೋತ್ತಿಷ್ಠೇತ್ತನ್ನ ದೋಷಕೃತ್ ।
ಮೂಕಶ್ಚೇನ್ನ ವದೇದ್ವಿಪ್ರಾಂಸ್ತೃಣ ಭೂಮಿರ್ನ ವಾಪ್ಯತೇ ॥
ದೋಷಾಭಾವಸ್ತದೈವ ಸ್ಯಾತ್ ಅನ್ಯಥಾ ದೋಷಭಾಗ್ ಭವೇತ್ ।
ಏವಂ ಮಹಾದರಿದ್ರಶ್ಚೇನ್ನ ದದ್ಯಾದ್ ದೋಷಭಾಙ್ನಹಿ ॥

–ವಿ.ರ.38/63–65

ಗೃಹಸ್ಥಾಶ್ರಮಿಗೆ ಕೊಡುವ ಶಕ್ತಿಯಿರದಿದ್ದಾಗ ಪಾತ್ರನಿಗೆ ಅವಮಾನ ಮಾಡಿದನೆಂದು ದೋಷವಾಗುವುದಿಲ್ಲ.

ಕುರುಡ ಬಂದ ವಿಪ್ರನನ್ನು ನೋಡಲಿಲ್ಲೆಂಬುದು, ಭ್ರಾಂತನಾದವನು ಅವರತ್ತ ಮನ ಕೊಡಲಿಲ್ಲೆಂಬುದು, ರೋಗಿಯೋ ಕುಂಟನೋ ಎದ್ದು ನಿಲ್ಲಲಿಲ್ಲೆಂಬುದು, ಮೂಕನಾದವನು ಬನ್ನಿ, ಕುಳಿತುಕೊಳ್ಳಿ ಎಂದು ಹೇಳಲಿಲ್ಲೆಂಬುದು ಎಂದೂ ದೋಷವಾಗದು. ಸಶಕ್ತನಾಗಿದ್ದರೆ ಇವು ಪ್ರತಿಯೊಂದೂ ದೋಷವಾಗುವುದು.

ಹೀಗೆ ಮಹಾದರಿದ್ರನಾಗಿದ್ದರೆ ದಾನ ಕೊಡಲಿಲ್ಲವೆಂಬುದು ದೋಷವಾಗದು.

ಹಣ ಹೋಗುವ ಕಾಲ ಬಂದರೆ........

ಅವಜ್ಞಾಂ ಘಟಯತ್ಯೇವ ಸಂಪದೋ ನಾಶಹೇತವೇ ।
ವೃದ್ಧಯೇ ಘಟಯತ್ಯೇವ ವಿಪ್ರಾಣಾಂ ತೋಷಣಂ ಹರಿಃ ॥
ಅಪಾಹರತ ಯಲ್ಲಂಕಾಂ ರಾವಣಾದ್ರಾಮರೂಪಧೃಕ್ ।
ವಿಭೀಷಣಾಯ ತದ್ದಾತುಮರ್ಜಿತಾಂ ಪೂರ್ವಕರ್ಮಭಿಃ ।
ಬಲೇರ್ಯತ್ ಪ್ರತಿಜಗ್ರಾಹ ತ್ರೈಲೋಕ್ಯಂ ವಾಮನೋ ಹರಿಃ ॥
ದಾತುಮಿಂದ್ರಾಯ ತದ್ರಾಜ್ಯಂ ಸರ್ವತ್ರೈವಂ ನಿರೀಕ್ಷಯೇತ್ ॥

ನಮ್ಮ ಸಂಪತ್ತು ನಾಶವಾಗುವ ಕಾಲ ಬಂದರೆ ಶ್ರೀಹರಿ ಬ್ರಾಹ್ಮಣರಿಗೆ ನಮ್ಮಿಂದ ಅವಮಾನ ಸಂಭವಿಸುವಂತೆ ಮಾಡಿಯೇ ಮಾಡುತ್ತಾನೆ. ನಮ್ಮ ಸಂಪತ್ತನ್ನು ವೃದ್ಧಿಯಾಗಿಸಬೇಕಿದ್ದರೆ ವಿಪ್ರರನ್ನು ಸಂತೋಷಪಡಿಸುವಂತೆ ಸಂದರ್ಭವನ್ನು ತಂದೊದಗಿಸುತ್ತಾನೆ.

ವಿಭೀಷಣನಿಗೆ ಪೂರ್ವಕರ್ಮಾನುಸಾರವಾಗಿ ಸಂಪತ್ತು ಅನುಭವಿಸುವ ಕಾಲ ಬಂದಾಗ ರಾವಣನಿಂದ ಶ್ರೀರಾಮ ಲಂಕೆಯನ್ನು ಅಪಹರಿಸಿ ಕೊಟ್ಟನು.

ಇಂದ್ರನಿಗೆ ಸಂಪತ್ತನ್ನು ಕೊಡಬೇಕೆಂದು ವಾಮನನಾಗಿ ಬೇಡಿ ಬಲಿಯಿಂದ ರಾಜ್ಯವನ್ನು ಪಡೆಯಲಿಲ್ಲವೇ? ಎಲ್ಲೆಡೆ ಹೀಗೆಯೇ ಭಗವಂತನ ಪ್ರವೃತ್ತಿಯನ್ನು ಅರ್ಥ ಮಾಡಿಕೊಳ್ಳಬೇಕು.

ಬ್ರಾಹ್ಮಣರು ವಿಷ್ಣುದೂತರು

ಉಪಕಾರಾಯ ಕೇಷಾಂಚಿತ್ ಅಪಕಾರಾಯ ಕಸ್ಯಚಿತ್ ।
ಮುಖಂ ಹಿ ಬ್ರಾಹ್ಮಣಾ ವಿಷ್ಣೋರ್ನೃಪಸ್ಯೇವಾತ್ರ ದೂತಕಾಃ ॥
ನಾನಾಸಂಪತ್ಕರಾಸ್ತುಷ್ಟಾಃ ರುಷ್ಟಾ ನಾನಾವಿಪತ್ಕರಾಃ ।
ಅತಃ ಸಂಮಾನಯೇದ್ ಜ್ಞಾತ್ವಾ ಬುಭೂಷುಸ್ತಾನ್ ಸದೈವ ಹಿ ॥
ಶ್ರೇಷ್ಠಸ್ಯ ಯಸ್ಯ ಕಸ್ಯಾಪಿ ದೂತಃ ಸಂಪಾದಯೇದ್ ಭಿಯಾ ।
ಸರ್ವಶ್ರೇಷ್ಠಸ್ಯ ವಿಷ್ಣೋರ್ಯೇ ಮುಖಂ ತಾನವಜಾನತೇ ॥
ಕಥಂ ಭೀರ್ಜಾಯತೇ ನೈಷಾಂ ದುಷ್ಟಾನಾಂ ನಿರ್ಹ್ರಿಯಾಣಾಮಪಿ ।
ವಿಷ್ಣೋರ್ಮುಖಮಿತಿ ಜ್ಞಾತ್ವಾಽಪ್ಯವಮಾನಂ ಪ್ರಕುರ್ವತೇ ॥
ಅಹೋ ಮಾಯಾಬಲಂ ವಿಷ್ಣೋಃ ಪಶ್ಯನ್ನಪಿ ನ ಪಶ್ಯತಿ ॥

–ವಿ.ರ. 37/88–91

ಕೆಲವರ ಉಪಕಾರಕ್ಕಾಗಿ, ಮತ್ತೆ ಕೆಲವರ ಅಪಕಾರಕ್ಕಾಗಿ ಬ್ರಾಹ್ಮಣರನ್ನು ಮುಖದಿಂದ ಶ್ರೀಹರಿಯು ಸೃಷ್ಟಿ ಮಾಡಿರುವನು. ರಾಜನಿಗೆ ದೂತರಿರುವಂತೆ

ಬ್ರಾಹ್ಮಣರು ಶ್ರೀಹರಿಯ ದೂತರು. ಸಂತೋಷಗೊಂಡರೆ ನಾನಾ ಸಂಪತ್ ಪ್ರದರಾಗುವರು. ಕೋಪಗೊಂಡರೆ ನಾನಾ ವಿಪತ್ತು ಉಂಟುಮಾಡುವವರೂ ಆಗುವರು. ಆದ್ದರಿಂದ ಭೋಗವನ್ನು ಬಯಸುವವರು ಯಾವಾಗಲೂ ವಿಪ್ರರನ್ನು ಸಮ್ಮಾನಿಸಲೆಬೇಕು.

ಶ್ರೇಷ್ಠನಾದ ಯಾವದೇ ವ್ಯಕ್ತಿಯ ದೂತನಾದರೂ ಅವನನ್ನು ಹೆದರಿ ಸಮ್ಮಾನಿಸಬೇಕು. ಹಾಗಿರುವಾಗ ಸರ್ವಶ್ರೇಷ್ಠನಾದ ವಿಷ್ಣುವಿನ ದೂತರಾದ ವಿಪ್ರರನ್ನು ಯಾರು ಅಪಮಾನಿಸುವರು? ಅವಮಾನಿಸುವವರಿಗೆ ಭಯವಾಗದಿರುವುದು ಹೇಗೆ?

ವಿಷ್ಣುವಿನ ಮುಖರೆಂದು ತಿಳಿದೂ ವಿಪ್ರರನ್ನು ಅವಮಾನಿಸುವರು ಹಲವರು! ಅಹೋ! ವಿಷ್ಣುವಿನ ಮಾಯೆಯು ಬಲವೆ! ಕಣ್ಣಿದ್ದು ಕುರುಡನಾಗುವನಲ್ಲ!

ಬಡತನ, ಅತೃಪ್ತಿ ಅವನೇ ಕೊಟ್ಟಿದ್ದು

ಅಧನಾನ್ ಸಧನಾನ್ ಕರ್ತುಂ ಸಧನಾನಪಿ ನಿರ್ಧನಾನ್ ।
ಬ್ರಾಹ್ಮಣಾನ್ನಿರ್ಧನಾಂಶ್ಚಕ್ರೇ ಸಂತೋಷರಹಿತಾನಪಿ ॥
ಸಂತುಷ್ಟಾ ಯದಿ ವಿಪ್ರಾಃ ಸ್ಯುಃ ಕೇ ತರ್ಹಿ ಗೃಹಿಣಾಂ ಗೃಹಮ್ ।
ಗತ್ವಾ ಧನಂ ಪ್ರಗೃಹ್ಣೀಯುರ್ಯೇನ ದಾತಾ ಧನೀ ಭವೇತ್ ॥
ಅಥವಾ ಕಸ್ಯ ತೇಽವಜ್ಞಾಂ ಧನಿನಃ ಕುರ್ಯುರುದ್ಧತಾಃ ।
ಕಥಂ ಸ್ಯುರ್ನಿಧನಾಸ್ತೇ ತು ಕಥಂ ಸ್ಯುಃ ಸಧನಾಃ ಪರೇ ॥

–ವಿ.ರ. 37/94–96

ನಿರ್ಧನರನ್ನು ಸಿರಿವಂತರನ್ನಾಗಿಯೂ, ಸಿರವಂತರನ್ನು ನಿರ್ಧನರನ್ನಾಗಿಯೂ ಮಾಡಲೆಂದೇ ಶ್ರೀಹರಿ ಬ್ರಾಹ್ಮಣರನ್ನು ದರಿದ್ರರನ್ನಾಗಿಯೂ, ತೃಪ್ತಿಯಿಲ್ಲದವರನ್ನಾಗಿಯೂ ಮಾಡಿರುವನು.

ಎಲ್ಲ ಬ್ರಾಹ್ಮಣರು ಸಂತೃಪ್ತರಾಗಿದ್ದರೆ ಯಾರು ತಾನೇ ಗೃಹಸ್ಥರ ಮನೆಗೆ ಹೋಗಿ ಸಂಪತ್ತನ್ನು ಪಡೆಯುತ್ತಿದ್ದರು? ಹಾಗೆ ಪಡೆಯದಿದ್ದರೆ ಗೃಹಸ್ಥ ಧನಿಕನಾಗುವುದು ಹೇಗೆ?

ಯಾರಿಗೆ ತಾನೆ ಅವಜ್ಞೆ ಮಾಡಿ ಉದ್ಧಟರಾದ ಸಿರಿವಂತರು ದರಿದ್ರರಾಗುತ್ತಿದ್ದರು?

ದರಿದ್ರರು ಯಾರನ್ನು ಸಂತೋಷಪಡಿಸಿ ಸಿರಿವಂತರಾಗುತ್ತಿದ್ದರು?

ಕರಗುವುದೆಂದು ಕರುಬಬೇಡ

ಧನವ್ಯಯಂ ಪ್ರತಿದಿನಂ ವಿಚಾರಯತಿ ಮೂಢಧೀಃ ।
ಯಮಮಾರ್ಗಸ್ಯ ಪಾಥೇಯಂ ಮನಸ್ಯಪಿ ನ ಚಿಂತತಿ ।
ವ್ಯಯಾಗ್ನಿಃ ಗೃಹಿಣಾಂ ಗೇಹೇ ದಹತ್ಯಹರಹರ್ಧನಮ್ ।
ವಿಪ್ರೈರಾಕೃಷ್ಯತೇ ಯತ್ತು ತದೇವಾಸ್ಯಾವಶಿಷ್ಯತೇ ॥

–ವಿ.ರ. 37/97–99

ದಾನವಿತ್ತರೆ ಹಣವ್ಯಯವಾಗುತ್ತದಲ್ಲ ಎಂದು ಮೂಢನು ಪ್ರತಿನಿತ್ಯ ವಿಚಾರ ಮಾಡುತ್ತಾನೆ. ನಾಳೆ ಯಮಲೋಕದ ದಾರಿಯಲ್ಲಿ ಸಿಗಬೇಕಾದ ಬುತ್ತಿಯ ಬಗ್ಗೆ ಯೋಚಿಸುವುದಿಲ್ಲ!

ಖರ್ಚು ಎನ್ನುವ ಬೆಂಕಿ ಗೃಹಸ್ಥರ ಮನೆಯಲ್ಲಿ ಪ್ರತಿದಿನ ಸಂಪತ್ತನ್ನು ಸುಡುತ್ತಿರುತ್ತದೆ. ಬ್ರಾಹ್ಮಣರು ದಾನಗಳ ಮೂಲಕ ಕಸಿಯುವುದಷ್ಟೇ ಅವನಿಗೆ ಉಳಿಯುವ ಸಂಪತ್ತು.

ಹತನಾಗುವ ಮುಂಚೆ ದಾತನಾಗು

ಪುತ್ರಸ್ತ್ರೀಪಶುಭೃತ್ಯೇಭ್ಯಃ ಕಿಯದ್ವಿತ್ತಂ ಪ್ರಯಚ್ಛತಿ ।
ತತ್ಪಾದಾಂಶಮಪಿ ಸ್ವಸ್ಯ ಕುರ್ಯಾತ್ ಪಾಥೇಯಮನ್ವಹಮ್ ॥
ಪಶ್ಚಾತ್ತಾಪೋ ನ ಜಾಯೇತ ಮರಣಾನಂತರಂ ತಥಾ ।
ವಿದ್ವಾಂಸ್ತಥಾ ಯತೇತಾದೌ ಯಾವದ್ಧಸ್ತೇ ಧನಂ ಭವೇತ್ ॥

ಮಕ್ಕಳು, ಹೆಂಡತಿ, ಸಾಕಿದ ಪಶುಗಳು, ಆಳುಗಳಿಗೆ ಎಷ್ಟು ಹಣವನ್ನು

ನಿತ್ಯ ಕೊಡುತ್ತೇವೆಯೋ ಅದರ ಕಾಲಂಶವನ್ನಾದರೂ ನಮ್ಮ ಪರಲೋಕದ ಮಾರ್ಗದ ಪಾಥೇಯಕ್ಕಾಗಿ ವಿನಿಯೋಗ ಮಾಡುತ್ತಿರಬೇಕು.

ಸತ್ತಮೇಲೆ ಪಶ್ಚಾತ್ತಾಪವಾಗದಂತೆ ತಿಳಿದವನು ಕೈಯಲ್ಲಿ ಹಣವಿರುವಾಗ ದಾನದ ಪ್ರಯತ್ನ ಮಾಡುತ್ತಿರಬೇಕು.

ಪ್ರತಿಗ್ರಹದಿಂದ ಪುಣ್ಯಹಾನಿ

ಪ್ರತಿಗ್ರಹೇಣ ವಿಪ್ರಾಣಾಂ ಪುಣ್ಯಹಾನಿಃ ಪ್ರಜಾಯತೇ ।
ಜಪಾಧ್ಯಯನಹೋಮಾದ್ಯೈಃ ಪುನಃ ಪೂರಣಮಾಚರೇತ್ ॥

–ವಿ.ರ 37/103

ದಾನವನ್ನು ಪಡೆಯುವುದರಿಂದ ವಿಪ್ರರ ಪುಣ್ಯಹಾನಿಯಾಗುವುದು. ಜಪ, ಅಧ್ಯಯನ, ಹೋಮ ಮುಂತಾದವುಗಳಿಂದ ಪುಣ್ಯವನ್ನು ಮತ್ತೆ ತುಂಬಿಸಿಕೊಳ್ಳಬೇಕು.

ದಾನ ಪಡೆಯುವುದರಿಂದ ಕೊಟ್ಟವನ ಪಾಪ ನಮಗೆ ಬರುತ್ತದೆಯೆಂದು ಸಾಮಾನ್ಯವಾಗಿ ಹೆದರುವರು. ದಾನವನ್ನು ಪಡೆಯಲು ಹಿಂಜರಿಯುವರೂ ಕೂಡ. ಮೇಲಿನ ಪ್ರಮಾಣ ನಮ್ಮ ಈ ಗೊಂದಲವನ್ನು ಪರಿಹರಿಸುವುದು. ದಾನ ಪಡೆಯುವುದರಿಂದ ನಮ್ಮ ಪುಣ್ಯ ನಾಶವಾಗುತ್ತದೆ. ಅರ್ಥಾತ್ ನಮ್ಮ ಪುಣ್ಯದಿಂದ ಕೊಟ್ಟವನಿಗೆ ಹಿತವಾಗುತ್ತದೆ. ಖಾಲಿಯಾದ ಪುಣ್ಯವನ್ನು ಗಾಯತ್ರೀ ಜಪದಿಂದ, ಪವಮಾನ ಸೂಕ್ತ, ಪುರುಷಸೂಕ್ತಾದಿ ವೇದ, ಉಪನಿಷತ್ತುಗಳ ಪಾರಾಯಣದಿಂದ, ಪವಮಾನಹೋಮಾದಿಗಳಿಂದ ಮತ್ತೆ ತುಂಬಿಸಿಕೊಳ್ಳಬೇಕು.

ದಾನ–ಪ್ರತಿಗ್ರಹಗಳೆರಡು ಬ್ರಾಹ್ಮಣನ ಕರ್ತವ್ಯಗಳು. ದಾನವನ್ನು ಪಡೆದು ಪುಣ್ಯಫಲವನ್ನು ಪರಹಿತಕ್ಕಾಗಿ ವ್ಯಯಗೊಳಿಸಿ, ಜಪಾದಿಗಳಿಂದ ಮತ್ತೆ ಪುಣ್ಯವನ್ನು ತುಂಬಿಸಿಕೊಳ್ಳಬೇಕು.

ಹೇಳಿಕೊಳ್ಳುವುದರಿಂದ ಪುಣ್ಯನಾಶ

ಕೀರ್ತನಾದಪಿ ನಶ್ಯಂತಿ ನೃಣಾಂ ಪುಣ್ಯಾನಿ ಕಾನಿಚಿತ್ ।
ತಸ್ಮಾನ್ನ ಕೀರ್ತಯೇತ್ಪುಣ್ಯಂ ಮಯೇದಂ ಕೃತಮಿತ್ಯಪಿ ॥
ಮನಸ್ಯಪಿ ನ ಕುರ್ವೀತ ಪಶ್ಯನ್ ಪುಣ್ಯಾಧಿಕಾನ್ ಸ್ವತಃ ।
ಪುಣ್ಯೇ ಪುಣ್ಯಾಧಿಕಾನ್ ಪಶ್ಯೇತ್ ದುಃಖೇ ದುಃಖಾಧಿಕಾನಪಿ ॥
ಧನೀ ಧನಾಧಿಕಾನ್ ಪಶ್ಯೇತ್ ಪಾಪೇ ಪಾಪಾಧಿಕಾನ್ನತು ।
ವಿನೀತಃ ಸರ್ವದಾ ತಿಷ್ಠೇದ್ ಅನಿತ್ಯಂ ವೀಕ್ಷ್ಯ ಸರ್ವಶಃ ॥
ನಾಭಿಮಾನಂ ಪ್ರಕುರ್ವೀತ ತಸ್ಮೈ ತುಷ್ಯೇಜ್ಜನಾರ್ದನಃ ॥

–ವಿ.ರ. 37/104–107

ಮಾಡಿದ ಪುಣ್ಯ ಹೇಳಿಕೊಳ್ಳುವುದರಿಂದ ನಾಶವಾಗುತ್ತದೆ. ಆದ್ದರಿಂದ ನಾನು ಇಂತಹ ಪುಣ್ಯವನ್ನು ಮಾಡಿದೆನೆಂದು ಎಂದೂ ಹೆಮ್ಮೆಯಿಂದ ಹೇಳಿಕೊಳ್ಳಬಾರದು.

ನಮಗಿಂತ ಹೆಚ್ಚು ಪುಣ್ಯ ಮಾಡಿರುವವರನ್ನು ಕಂಡು ನಾವು ಹೆಮ್ಮೆಯ ಹಮ್ಮನ್ನು ಬಿಡಬೇಕು. ಅವರ ಮುಂದೆ ನಾವು ಅಲ್ಪರು ಎಂಬ ವಿನಯವಿರಬೇಕು.

ದುಃಖದಲ್ಲಿಯೂ ನಮಗಿಂತ ಹೆಚ್ಚು ದುಃಖಿಗಳನ್ನು ನೋಡಿ ಅವರಿಗಿಂತ ನಾವು ಕಡಿಮೆ ದುಃಖವನ್ನು ಹೊಂದಿರುವೆವು ಎಂದು ಸಮಾಧಾನ ವಾಗಿರುವುದನ್ನು ಕಲಿಯಬೇಕು.

ಧನಿಕರಾಗಿರುವಾಗಲೂ ನಮಗಿಂತ ಹೆಚ್ಚಿನ ಧನಿಕರನ್ನು ನೋಡಿ ಅಹಂಕಾರವನ್ನು ಬಿಡಬೇಕು.

ಆದರೆ ಪಾಪದ ವಿಷಯದಲ್ಲಿ ನಮಗಿಂತಲೂ ಹೆಚ್ಚು ಪಾಪಿಗಳನ್ನು ನೋಡಿ ಅವರಿಗಿಂತ ನಾವು ಕಡಿಮೆ ಪಾಪ ಮಾಡಿದ್ದೇವೆಂದು ಸಮಾಧಾನ ಮಾಡಿಕೊಳ್ಳಬಾರದು. ಬದಲಾಗಿ ನಮಗಿಂತ ಕಡಿಮೆ ಪಾಪವನ್ನು ಮಾಡಿರುವವರನ್ನು ನೋಡಿ ಅವರಿಗಿಂತ ಹೆಚ್ಚು ಪಾಪ ಮಾಡಿದ್ದೇವೆಂದು

ಭಯಪಡಬೇಕು. ಸಂಪತ್ತಿನ ನಶ್ವರತೆಯನ್ನು ಅರಿತು ಸರ್ವದಾ ವಿನೀತರಾಗಿರಬೇಕು. ಎಂದೂ ನಮ್ಮ ಬಗ್ಗೆ ನಾವೇ ಅಭಿಮಾನ ಪಡಬಾರದು. ಅಂತಹವನಿಗೆ ಜನಾರ್ದನನು ಸಂತುಷ್ಟನಾಗುವನು.

ಅನ್ನದಾನದ ಮಹಿಮೆ

ಅನ್ನಂ ಪ್ರಾಣೋ ಮನುಷ್ಯಾಣಾಮನ್ನದಃ ಪ್ರಾಣದೋ ಭವೇತ್ ।
ತಸ್ಮಾದನ್ನಂ ವಿಶೇಷೇಣ ದಾತುಮಿಚ್ಛತಿ ಮಾನವಃ ॥

–ಮ.ಭಾ.ಅನು./235/5

ಅನ್ನ ಮನುಷ್ಯರ ಪ್ರಾಣ. ಅನ್ನವನ್ನು ಕೊಟ್ಟವನು ಪ್ರಾಣವನ್ನೇ ಕೊಟ್ಟಂತೆ ಆಗುವನು. ಆದ್ದರಿಂದ ವಿಶೇಷವಾಗಿ ಅನ್ನವನ್ನು ಕೊಡಬಯಸುತ್ತಾನೆ ಮಾನವ.

ಮನೆಗೆ ಬಂದ ಯೋಗ್ಯ ಬ್ರಾಹ್ಮಣನಿಗೆ ಅವನಿಗೆ ಇಷ್ಟವಾದ ಅನ್ನವನ್ನು ಉಣಬಡಿಸುವವನು ಪರಲೋಕದ ನಿಧಿಯನ್ನು ಸಂಗ್ರಹಿಸಿಕೊಂಡಂತೆ.

ಪ್ರಯಾಣ ಮಾಡಿ ದಣಿದು ಬಂದ ಅತಿಥಿಗೆ ಪ್ರಯತ್ನಪೂರ್ವಕವಾಗಿ ಅನ್ನಹಾಕಿ ಅರ್ಚಿಸಬೇಕು. ಇದು ವರಪ್ರದ ಯಜ್ಞ.

ಪಾಪ ಮಾಡಿದವನು ಅರ್ಥಿಯಾಗಿ ಬಂದ ಬ್ರಾಹ್ಮಣರಿಗೆ ತೃಪ್ತಿಯಾಗುವಂತೆ ಅನ್ನವಿಕ್ಕರೆ ಅವನ ಪಾಪ ಕಳೆಯುವುದು.

ಮಕ್ಕಳು ಅಥವಾ ಮೊಮ್ಮಕ್ಕಳು ಶ್ರೋತ್ರಿಯನಿಗೆ ಭೋಜನ ಮಾಡಿಸಿದರೆ ಪಿತೃದೇವತೆಗಳು ಸಂತೋಷಪಡುವರು.

ಅಪಿ ಚಂಡಾಲ ಶೂದ್ರಾಣಾಮನ್ನದಾನಂ ನ ಗರ್ಹ್ಯತೇ ।
ತಸ್ಮಾತ್ ಸರ್ವಪ್ರಯತ್ನೇನ ದದ್ಯಾದನ್ನಮಮತ್ಸರಃ ॥

ಚಂಡಾಲ, ಶೂದ್ರರಿಗೂ ಮಾಡುವ ಅನ್ನದಾನ ಎಂದೂ ನಿಂದ್ಯವಾಗದು. ಆದುದರಿಂದ ಸರ್ವಪ್ರಯತ್ನ ಮಾಡಿ ಮಾತ್ಸರ್ಯವಿಲ್ಲದೆ ಅನ್ನ ಕೊಡಬೇಕು.

ಕಲತ್ರಂ ಪೀಡಯಿತ್ವಾಽಪಿ ಪೋಷಯೇದತಿಥೀನ್ ಸದಾ ।

–ಮ.ಭಾ.ಅನು.235/11

ಸೋಮಾರಿಯಾದ ಹೆಂಡತಿಯನ್ನು ಬಲವಂತಪಡಿಸಿಯಾದರೂ ಅತಿಥಿಗಳಿಗೆ ಅನ್ನವಿಕ್ಕಿ ಪೋಷಿಸಬೇಕು.

ಅನ್ನದಾನ ಮಾಡಿದವನು ಬಹುವೈಭವೋಪೇತವಾದ ಸಕಲವಿಧಭೋಗ ಸೌಕರ್ಯಗಳಿಂದ ಕೂಡಿದ ಲೋಕದಲ್ಲಿ ಸುಖವನ್ನನುಭವಿಸಿ, ಮತ್ತೆ ಮನುಷ್ಯಲೋಕದಲ್ಲಿ ಸರ್ವ ಕಲ್ಯಾಣಸಂಪನ್ನನಾಗಿ ಹುಟ್ಟಿ, ರೋಗರಹಿತನಾಗಿ ಚಿರಂಜೀವಿಯಾಗುವನು. ಸತ್ಕುಲಭೂಷಣನಾಗಿ, ಮತಿವಂತನಾಗಿ ಅನ್ನದಾತೃವಾಗುವನು.

ಆದ್ದರಿಂದ ಐಶ್ವರ್ಯವನ್ನು ಬಯಸುವವನು ಎಲ್ಲ ದೇಶ–ಕಾಲಗಳಲ್ಲು ಯಾವಾಗಲೂ ಅನ್ನವನ್ನು ಕೊಡಬೇಕು.

ಸುವರ್ಣದಾನದ ಮಹಿಮೆ

ಅಗ್ನಿರ್ಹಿ ದೇವತಾಃ ಸರ್ವಾಃ ಸುವರ್ಣಂ ಚಾಗ್ನಿರುಚ್ಯತೇ ।
ತಸ್ಮಾತ್ಸುವರ್ಣದಾನೇನ ತೃಪ್ತಾಃ ಸ್ಯುಃ ಸರ್ವದೇವತಾಃ ॥
ಅಗ್ನ್ಯಭಾವೇ ತು ಕುರ್ವಂತಿ ವಹ್ನಿಸ್ಥಾನೇಷು ಕಾಂಚನಮ್ ।
ತಸ್ಮಾತ್ಸುವರ್ಣದಾತಾರಃ ಸರ್ವಾನ್ ಕಾಮಾನ್ ಅವಾಪ್ನುಯಃ ॥

ಅಗ್ನಿಯಲ್ಲಿ ಎಲ್ಲ ದೇವತೆಗಳ ಸನ್ನಿಧಾನವಿದೆ. ಸುವರ್ಣವು ಅಗ್ನಿಯೆಂದೇ ಹೇಳೋಣವಾಗಿದೆ. ಆದ್ದರಿಂದ ಸುವರ್ಣದಾನದಿಂದ ಎಲ್ಲ ದೇವತೆಗಳು ಪ್ರಸನ್ನರಾಗುವರು.

ಅಗ್ನಿ ಇಲ್ಲದಿರುವಾಗ ಅದರ ಸ್ಥಾನದಲ್ಲಿ ಬಂಗಾರವನ್ನಿಟ್ಟು ಯಜ್ಞ ಕಾರ್ಯ ಮಾಡುತ್ತಾರೆ. ಆದ್ದರಿಂದ ಸುವರ್ಣದಾನಿಗಳು ಎಲ್ಲ ಕಾಮನೆಗಳನ್ನು ಪಡೆಯುವರು.

ಬಂಗಾರದ ಆಭರಣಗಳಿಂದ ಬ್ರಾಹ್ಮಣನನ್ನು ಅಲಂಕರಿಸಿ ಭೋಜನ ಮಾಡಿಸಬೇಕು. ಬಹು ಪುಣ್ಯಪ್ರಾಪ್ತಿಯಾಗುತ್ತದೆ.

ಸುವರ್ಣ ದಾನದಿಂದ ಕಾಂತಿ, ಮೇಧಾ, ಸುಂದರ ಶರೀರ, ಕೀರ್ತಿಗಳನ್ನು ಪಡೆಯುವನು. ಆದ್ದರಿಂದ ಯಥಾಶಕ್ತಿ ಸುವರ್ಣದಾನವನ್ನು ಮಾಡಬೇಕು.

ಗೋದಾನ ಮಹಿಮೆ

ಹಿಂದೆ ಸ್ವಯಂಭೂ ಬ್ರಹ್ಮ ಪ್ರಜೆಗಳನ್ನು ಸೃಷ್ಟಿ ಮಾಡುವ ಮೊದಲು ಎಲ್ಲ ಪ್ರಾಣಿಗಳ ವೃತ್ತ್ಯರ್ಥವಾಗಿ ಗೋವುಗಳನ್ನು ಸೃಷ್ಟಿ ಮಾಡಿದನು. ಆದ್ದರಿಂದ ಗೋವು ಮಾತೆ ಎನಿಸಿದೆ.

ಒಳ್ಳೆ ಮೆದುಸ್ವಭಾವದ, ಪುಷ್ಟವಾದ, ಸುಂದರ ಕರುವನ್ನು ಹೊಂದಿರುವ, ತುಂಬ ಹಾಲು ಕೊಡುವ ಗೋವನ್ನು ದಾನ ಕೊಟ್ಟವನಿಗೆ ಗೋವಿನಲ್ಲಿ ಎಷ್ಟು ರೋಮಗಳಿವೆಯೋ ಅಷ್ಟು ವರ್ಷಗಳ ಸ್ವರ್ಗಸುಖವಾಸವು ದೊರೆಯುತ್ತದೆ.

ಕಪಿಲವರ್ಣದ ಗೋವನ್ನು ವಸ್ತ್ರದಿಂದ ಸಹಿತವಾಗಿ, ಹಾಲು ಕರೆವ ಕಂಚಿನ ಪಾತ್ರೆಯಿಂದ ಕೂಡಿ, ಬಂಗಾರದ ಆಭರಣಗಳಿಂದ ಕೊಂಬುಗಳನ್ನು ಸಿಂಗರಿಸಿ ಕೊಟ್ಟ ದಾನವು ಮಕ್ಕಳನ್ನು, ಮೊಮ್ಮಕ್ಕಳನ್ನು, ಎಲ್ಲ ಕುಲವನ್ನು ಏಳು ತಲೆಯವರೆಗೆ ಕಾಪಾಡುತ್ತದೆ.

ಗವಾಂ ಮೂತ್ರಪುರೀಷಾಣಿ ನೋದ್ವಿಜೇತ ಕದಾಚನ ।
ನ ಚಾಸಾಂ ಮಾಂಸಮಶ್ನೀಯಾತ್ ಗೋಷು ಭಕ್ತಃ ಸದಾ ಭವೇತ್ ॥

ಹಸುಗಳ ಮಲ-ಮೂತ್ರಗಳನ್ನು ನೋಡಿ ಎಂದೂ ಅಸಹ್ಯ ಪಡಬಾರದು. ಹಸುಗಳ ಮಾಂಸವನ್ನು ತಿನ್ನಬಾರದು. ಸದಾ ಗೋವುಗಳಲ್ಲಿ ಭಕ್ತನಾಗಿರಬೇಕು.

ಗ್ರಾಸಮುಷ್ಟಿಂ ಪರಗವೇ ದದ್ಯಾತ್ ಸಂವತ್ಸರಂ ಶುಚಿ ।
ಅಕೃತ್ವಾ ಸ್ವಯಮಾಹಾರಂ ವ್ರತಂ ತತ್ ಸಾರ್ವಕಾಮಿಕಮ್ ॥

ಪ್ರತಿನಿತ್ಯ ಸಂವತ್ಸರಪರ್ಯಂತ ಒಂದು ಮುಷ್ಟಿಯಷ್ಟು ಹುಲ್ಲನ್ನು, ಶುಚಿಯಾಗಿದ್ದು ತಾನು ಆಹಾರ ಸೇವನೆ ಮಾಡುವ ಮುಂಚೆ ಬೇರೊಂದು ಹಸುವಿಗೆ ಕೊಡುವುದು ಸರ್ವಕಾಮಪ್ರದ ವ್ರತವೆನಿಸಿದೆ.

ಗಾವಃ ಪರಮಂ ಪವಿತ್ರಂ ಗೋಷು ಲೋಕಾಃ ಪ್ರತಿಷ್ಠಿತಾಃ ।
ಕಥಂಚಿನ್ನಾವಮಂತವ್ಯಾ ಗಾವೋ ಲೋಕಸ್ಯ ಮಾತರಃ ॥
ತಸ್ಮಾದೇವ ಗವಾಂ ದಾನಂ ವಿಶಿಷ್ಟಮಿತಿ ಕಥ್ಯತೇ ॥

ಗೋವುಗಳು ಪರಮ ಪವಿತ್ರ. ಎಲ್ಲ ಲೋಕಗಳು, ದೇವತೆಗಳು ಗೋವುಗಳಲ್ಲಿರುವರು. ಎಂದಿಗೂ ಅವುಗಳನ್ನು ಅವಮಾನಿಸಬಾರದು. ಅವು ಲೋಕಮಾತೆಗಳು. ಆದ್ದರಿಂದಲೇ ಗೋದಾನ ಬಹಳ ವಿಶಿಷ್ಟದಾನ.

ಭೂಮಿದಾನದ ಮಹಿಮೆ

ಮನೆಯಿಂದ ಕೂಡಿರುವ ಭೂಮಿಯನ್ನಾಗಲಿ, ಸಸ್ಯಸಮೃದ್ಧವಾದ ಹೊಲ–ಗದ್ದೆಗಳ ಭೂಮಿಯನ್ನಾಗಲಿ ಕೊಡುವುದು ತುಂಬ ಪುಣ್ಯ ಕರವಾದ ದಾನ.

ಎಲ್ಲ ಭೋಗಸಾಮಗ್ರಿಗಳಿಂದ ಸಹಿತವಾದ ಗೃಹವನ್ನು ಮೊದಲು ವಾಸ್ತು ಶುದ್ಧಿಮಾಡಿಸಿ, ಸಪರಿವಾರ ಬ್ರಾಹ್ಮಣನಿಗೆ ಭೋಜನ ಮಾಡಿಸಿ, ವಸ್ತ್ರ, ಪುಷ್ಪ ಗಂಧಾದಿ ಉಪಚಾರ ಮಾಡಿ, ದಕ್ಷಿಣೆ ಕೊಟ್ಟು, ಮೂರು ಬಾರಿ ಕೈಗೆ ನೀರು ಹಾಕಿ ದಾನ ಕೊಡಬೇಕು. ಭೂಮಿ ಅಚಲ. ಅಷ್ಟು ಕಾಲ ಸ್ವರ್ಗಸೀಮೆಯಲ್ಲಿ ಸುಖದಿಂದಿರುವನು.

ಬೇಸಾಯದ ಮೂಲಕ ಪಾಪಗಳನ್ನು ಸಂಭವಿಸಿಕೊಂಡವನು ಸ್ವಲ್ಪ ಭೂದಾನ ಮಾಡುವುದರಿಂದಲೂ ಪಾಪಮುಕ್ತನಾಗುತ್ತಾನೆ.

ಸಸ್ಯಶ್ಯಾಮಲೆಯಾದ ವಸುಂಧರೆಯು ದಾನದಿಂದ ದಾತೃವು ಇಂದ್ರಲೋಕವನ್ನು ಸೇರುವನು.

ಭೂಮಿಯು. ಜನನಿಯು ಎದೆಹಾಲಿನಿಂದ ಮಕ್ಕಳನ್ನು ಅಭಿವೃದ್ಧಿ ಪಡಿಸುವಂತೆ ಎಲ್ಲ ಫಲಗಳಿಂದ ದಾತೃವನ್ನು ಅಭಿವೃದ್ಧಿ ಪಡಿಸುವಳು.

ಪಿತೃಲೋಕದ ಪಿತೃಗಳು, ದೇವಲೋಕದ ದೇವತೆಗಳು ಎಲ್ಲರೂ ಭೂದಾನ ಕೊಟ್ಟವನನ್ನು ಸಂತೋಷಪಡಿಸುತ್ತಾರೆ. ದೀರ್ಘಾಯುಷ್ಯ, ವರಾಂಗತ್ವ ಉತ್ತಮವಾದ ಸಂಪತ್ತುಗಳು ಭೂದಾನದ ಫಲ.

ಕನ್ಯಾದಾನದ ಮಹಿಮೆ

ಕನ್ಯಾ ದೇಯಾ ಮಹಾದೇವಿ ! ಪರೇಷಾಮಾತ್ಮನೋಽಪಿ ವಾ॥

ತಮಗೆ ಹುಟ್ಟಿದ ಕನ್ಯೆಯನ್ನು ದಾನ ಮಾಡಬಹುದು. ಮತ್ತೊಬ್ಬರ ಕನ್ಯೆಯನ್ನೂ ದಾನ ಮಾಡಬಹುದು.

ಶುದ್ಧ ವ್ರತಾಚಾರವುಳ್ಳ ಕುಲ, ರೂಪಗಳಿಂದ ಸಂಪನ್ನಳಾದ, ಪಾತ್ರನಿಂದಲೂ ಬಯಸಲ್ಪಟ್ಟವಳಾದ ಕನ್ಯೆಯನ್ನು ಯಾವ ಪಾತ್ರನಿಗೆ ಕೊಡಲು ಬಯಸುವನೋ ಅವನನ್ನು ಬರಮಾಡಿ, ಬಂಧುಗಳೊಂದಿಗೆ ವಿಚಾರ ಮಾಡಿ ವಾಙ್‌ನಿಶ್ಚಯ ಮಾಡಬೇಕು. ಮನೆಯನ್ನು ಮೊದಲು ದಾಸ–ದಾಸಿಯರಿಂದ, ಪರಿಕರಗಳಿಂದ ಸಂಪನ್ನಗೊಳಿಸಿ, ಗೃಹೋಪಕರಣಗಳನ್ನಿಟ್ಟು, ದವಸ ಧಾನ್ಯಗಳಿಂದಲೂ ತುಂಬಿಸಿ ಬಳಿಕ ಅಲಂಕೃತ ಕನ್ಯೆಯನ್ನು ಅಗ್ನಿಸಾಕ್ಷಿಕವಾಗಿ, ನ್ಯಾಯಸಮ್ಮತವಾಗಿ ವಿವಾಹ ಪೂರ್ವಕದಾನ ಕೊಟ್ಟು, ಆ ದಂಪತಿಗಳನ್ನು ಆ ಮನೆಯಲ್ಲಿ ಪ್ರವೇಶ ಮಾಡಿಸಬೇಕು. ಇದು ಕನ್ಯಾದಾನದ ಕ್ರಮ. ಇದರ ಫಲವಾಗಿ ಸ್ವರ್ಗಸುಖವನ್ನನುಭವಿಸಿ ಮತ್ತೆ ಮನುಷ್ಯಲೋಕದಲ್ಲಿ ಹುಟ್ಟಿದಾಗ ಸೌಭಾಗ್ಯವನ್ನು ಕುಲವೃದ್ಧಿಯನ್ನು ಪಡೆಯುವನು.

ವಿದ್ಯಾದಾನ, ದಾಪನಗಳ ಮಹಿಮೆ

ಸತ್ಪಾತ್ರನಿಗೆ ವಿದ್ಯಾ ದಾನ ಮಾಡುವವನು, ಮೇಧಾಶಕ್ತಿ ಅಭಿವೃದ್ಧಿಯನ್ನು, ಧೃತಿ-ಧೈರ್ಯವನ್ನು, ಸ್ಮರಣಶಕ್ತಿಯನ್ನು ಪಡೆಯುವನು.

ದಾಪನಂ ತ್ವಥ ವಿದ್ಯಾನಾಂ ದರಿದ್ರೇಭ್ಯೋಽರ್ಥವೇದನೈಃ ।
ಸ್ವಯಂ ದತ್ತೇನ ತುಲ್ಯಂ ಸ್ಯಾದಿತಿ ವಿದ್ಧಿ ಶುಭಾನನೇ ॥

–ಮ.ಭಾ.ಅನು. 335/77

ಬಡವರಿಗೆ ಆರ್ಥಿಕ ಸೌಕರ್ಯವನ್ನೊದಗಿಸಿ ವಿದ್ಯೆ ಕೊಡಿಸುವುದೂ ತಾನೇ ವಿದ್ಯಾದಾನ ಮಾಡುವುದಕ್ಕೆ ಸಮಾನ.

ತಿಲದಾನದ ರೀತಿ ಮತ್ತು ಫಲ

ತಿಲಾಃ ಪವಿತ್ರಾಃ ಪಾಪಘ್ನಾಃ ಸುಪುಣ್ಯಾಃ ಇತಿ ಸಂಸ್ಮೃತಾಃ ।

–ಮ.ಭಾ.ಅನು. 235

ಎಳ್ಳು ಪವಿತ್ರ. ಪಾಪಹರ. ಪುಣ್ಯಕರ. ನ್ಯಾಯಮಾರ್ಗದಿಂದ ಎಳ್ಳನ್ನು ಸಂಪಾದಿಸಿ, ಸಂಗ್ರಹಿಸಿ, ತನ್ನ ಶಕ್ತಿಯಿದ್ದಷ್ಟು ರಾಶಿ ಮಾಡಿ ಗುಡ್ಡೆ ಹಾಕಿ ಬಂಗಾರ, ಬೆಳ್ಳಿ, ರತ್ನ, ಮುತ್ತುಗಳಿಂದ ಅಲಂಕರಿಸಿ ವೇದಿಕೆಯಲ್ಲಿಟ್ಟು ಪತಾಕೆ, ಆಭರಣ, ವಸ್ತ್ರ, ಆಸನ, ಶಯನಗಳೊಂದಿಗೆ ವಿಧಿಯಂತೆ ಅರ್ಹ ಅನೇಕ ಬ್ರಾಹ್ಮಣರನ್ನು ಭೋಜನ ಮಾಡಿಸಿ ಸ್ವಯಂ ಉಪವಾಸವಿದ್ದು ಶುಚಿಯಾಗಿದ್ದು ದಾನ ಕೊಡಬೇಕು. ಎಳ್ಳಿಗೆ ಪ್ರದಕ್ಷಿಣೆ ಬಂದು ದಕ್ಷಿಣೆ ಸಹಿತ ಕೊಡಬೇಕು ಅಥವಾ ಅನೇಕರಿಗೂ ಕೊಡಬಹುದು. ಇದರಿಂದ ಅಗ್ನಿಷ್ಟೋಮದ ಫಲವನ್ನು ಪಡೆಯುವನು.

ನೆಲದಲ್ಲಿ ಎಳ್ಳಿನಿಂದಲೇ ಹಸುವಿನ ಆಕೃತಿಯನ್ನು ಬರೆದು ಅದನ್ನು ರತ್ನ ವಸ್ತ್ರಗಳ ಸಹಿತವಾಗಿ ಗೋದಾನ ಕೊಡಬಯಸುವವನು ಅರ್ಹ ವಿಪ್ರನಿಗೆ ಕೊಡಬಹುದು. ಅದರಿಂದ ಗೋದಾನದ ಫಲವನ್ನು ಪಡೆವನು. ಪಾತ್ರೆಗಳಲ್ಲಿ ಎಳ್ಳು ತುಂಬಿಯೂ ಸದಕ್ಷಿಣಾಕವಾಗಿ ದಾನ ಮಾಡಬಹುದು.

ನಾನಾ ದಾನಗಳ ಫಲ

ಬಲಮಾಯುಷ್ಯಮಾರೋಗ್ಯಮನ್ನದಾನಾತ್ ಲಭೇನ್ನರಃ ।
ಪಾನೀಯಾದಸ್ತು ಸೌಭಾಗ್ಯಂ ರಸಜ್ಞಾನಂ ಲಭೇನ್ನರಃ ॥
ವಸ್ತ್ರದಾನಾದ್ ವಪುಃಶೋಭಾಮಲಂಕಾರಂ ಲಭೇನ್ನರಃ ।
ದೀಪದೋ ಬುದ್ಧಿವೈಶದ್ಯಂ ದ್ಯುತಿಶೋಭಾಃ ಲಭೇನ್ನರಃ ॥
ರಾಜಪೀಡಾವಿಮೋಕ್ಷಂ ತು ಛತ್ರದೋ ಲಭತೇ ಫಲಮ್ ।
ಯಾನಾನಿ ವಾಹನಂ ಚೈವ ತದರ್ಹಾಯ ದದನ್ನರಃ ॥
ಪಾದರೋಗಪರಿಕ್ಲೇಶಾನ್ಮುಕ್ತಃ ಶ್ವಸನವಾಹವಾನ್ ।
ವಿಚಿತ್ರಂ ರಮಣೀಯಂ ಚ ಲಭತೇ ಯಾನವಾಹನಮ್ ॥

–ಮ.ಭಾ.ಅನು

ಅನ್ನದಾನದಿಂದ ಬಲ, ಆಯುಷ್ಯ, ಆರೋಗ್ಯಗಳನ್ನು ಮನುಷ್ಯ ಪಡೆವನು. ಜಲದಾನದಿಂದ ಸೌಭಾಗ್ಯ, ರುಚಿಜ್ಞಾನಗಳನ್ನು ಮನುಷ್ಯಪಡೆವನು. ವಸ್ತ್ರದಾನದಿಂದ ದೇಹಕಾಂತಿ, ಆಭರಣಗಳನ್ನು ಮನುಷ್ಯ ಪಡೆವನು. ದೀಪದಾನದಿಂದ ವಿಶದವಾದ ಬುದ್ಧಿಯನ್ನು, ಕಾಂತಿಯ ಶೋಭೆಯನ್ನು ಮನುಷ್ಯ ಪಡೆವನು. ಛತ್ರವನ್ನು ಕೊಡುವದರಿಂದ ರಾಜಪೀಡೆಯಿಂದ ಬಿಡುಗಡೆ ಪಡೆವನು. ಅರ್ಹನಿಗೆ ಪಲ್ಲಕ್ಕಿ ಮತ್ತು ಇತರ ವಾಹನಗಳನ್ನು ದಾನ ಕೊಡುವುದರಿಂದ ಪಾದರೋಗದಿಂದ ಮುಕ್ತನಾಗುವನು. ವಿಚಿತ್ರ ಹಾಗೂ ರಮಣೀಯವಾದ ವಾಹನಾದಿಗಳನ್ನು ಮುಂದೆ ಪಡೆವನು.

ಅರ್ಹನಿಗೆ ಷಡ್ಗುಣಂಯುಕ್ತವಾದ ದಾನವನ್ನು ಯಥಾ ಯೋಗ್ಯವೈಭವದಿಂದ ಕೊಟ್ಟರೆ

ಬುದ್ಧಿಮಾಯುಷ್ಯಮಾರೋಗ್ಯಂ ಬಲಂ ಭಾಗ್ಯಂ ತಥಾಽಗಮಮ್ ।
ರೂಪೇಣ ಸಪ್ತಧಾ ಭೂತ್ವಾ ಮಾನುಷ್ಯಂ ಫಲತಿ ಧ್ರುವಮ್ ॥

ಬುದ್ಧಿ, ಆಯುಷ್ಯ, ಆರೋಗ್ಯ, ಬಲ, ಭಾಗ್ಯ, ಶಾಸ್ತ್ರ, ರೂಪ – ಹೀಗೆ ಏಳು ಬಗೆಯಿಂದ ಸಾರ್ಥಕವಾದ ಮನುಷ್ಯತನವನ್ನು ನಿಶ್ಚಯವಾಗಿ ಪಡೆಯುತ್ತಾನೆ.

ಇದಂ ದತ್ತಮಿದಂ ದೇಯಮಿತ್ಯೇವ ಫಲಕಾಂಕ್ಷಯಾ ।
ಯದ್ದತ್ತಂ ತತ್ತದೇವ ಸ್ಯಾನ್ನತು ಕಿಂಚನ ಲಭ್ಯತೇ ॥

–ಮ.ಭಾ.ಅನು. 236–30

ಫಲಕಾಮನೆಯಿಂದ ದಾನ ಕೊಟ್ಟರೆ ಕೊಟ್ಟವಸ್ತು ಮಾತ್ರವೇ ಮುಂದೆ ದೊರೆಯುತ್ತದೆ ಹೊರತು ಮತ್ತೇನೂ ಸಿಗಲಾರದು.

ಶ್ರುಣು ದತ್ತಸ್ಯ ವೈ ದೇವಿ ಪಂಚಧಾ ಫಲಕಲ್ಪನಮ್ ।
ಆನಂತ್ಯಂ ಚ ಮಹಚ್ಚೈವ ಸಮಂ ಹೀನಂ ಹಿ ಪಾತಕಮ್ ॥
ದುಸ್ತ್ಯಜಸ್ಯ ಚ ವೈ ದಾನಂ ಪಾತ್ರ ಮಾನಂತ್ಯಮುಚ್ಯತೇ ।
ದಾನಂ ಷಡ್ಗುಣಯುಕ್ತಂ ತು ಮಹದ್ ಇತ್ಯಭಿಧೀಯತೇ ॥
ಯಥಾಶ್ರದ್ಧಂ ತು ವೈ ದಾನಂ ಯಥಾರ್ಹಂ ಸಮಮುಚ್ಯತೇ ।
ಗುಣತಸ್ತು ತಥಾ ಹೀನಂ ದಾನಂ ಹೀನಮಿತಿ ಸ್ಮೃತಮ್ ॥
ದಾನಂ ಪಾತಕಮಿತ್ಯಾಹುಃ ಷಡ್ಗುಣಾನಾಂ ವಿಪರ್ಯಯೇ ।
ದೇವಲೋಕೇ ಮಹತ್ ಕಾಲಮಾನಂತ್ಯಸ್ಯ ಫಲಂ ವಿದುಃ ॥
ಮಹತಸ್ತು ತಥಾ ಕಾಲಂ ಸ್ವರ್ಗಲೋಕೇ ತು ಪೂಜ್ಯತೇ ।
ಸಮಸ್ಯ ತು ತದಾ ದಾನಂ ಮಾನುಷ್ಯಂ ಭೋಗಮಾವಹೇತ್ ॥
ದಾನಂ ನಿಷ್ಫಲಮಿತ್ಯಾಹುರ್ವಿಹೀನಂ ಕ್ರಿಯಯಾ ಶುಭೇ ।
ಅಥವಾ ಮ್ಲೇಚ್ಛದೇಶೇಷು ತತ್ರ ತತ್ಫಲತಾಂ ವ್ರಜೇತ್ ॥
ನರಕಂ ಪ್ರೇತ್ಯ ತಿರ್ಯಕ್ಷು ಗಚ್ಛೇದಶುಭದಾನತಃ ॥

–ಮ.ಭಾ.ಅನು. 239/7–13

ಕೊಟ್ಟ ದಾನದ ಫಲಕಲ್ಪನೆ ಐದು ಬಗೆ:– ಆನಂತ್ಯ, ಮಹತ್, ಸಮ, ಹೀನ ಮತ್ತು ಪಾತಕ ಎಂದು.

ಅಭಿಮಾನ ಬಿಡಲಾರದ ವಸ್ತುವನ್ನು ಸತ್ಪಾತ್ರನಲ್ಲಿ ಕೊಡುವ ದಾನ 'ಆನಂತ್ಯ' ಫಲವುಳ್ಳದ್ದು ಆಗಿದೆ.

ಷಡ್ಗುಣಸಂಪನ್ನವಾದ ದಾನ 'ಮಹತ್' ಎನಿಸುತ್ತದೆ. ಮಹಾ ಫಲ ನೀಡುತ್ತದೆ.

ಶ್ರದ್ಧೆಗೆ, ಅರ್ಹತೆಗೆ ಅನುಗುಣವಾದ ದಾನ ಸಮಫಲವನ್ನು ನೀಡುವ 'ಸಮ' ದಾನ.

ದಾನದಲ್ಲಿರಬೇಕಾದ ಷಡ್ಗುಣಗಳಲ್ಲಿ ಕೆಲವು ಗುಣಗಳಿಲ್ಲದ ದಾನ 'ಹೀನ' ದಾನವೆನಿಸಿದೆ.

ಷಾಡ್ಗುಣ್ಯರಹಿತವಾದ ದಾನ 'ಪಾತಕ' ವೆನಿಸುತ್ತದೆ.

ದೇವಲೋಕದಲ್ಲಿ ಬಹುಕಾಲ ಸಂತಸ ನೀಡುವುದು 'ಆನಂತ್ಯ' ದಾನ. ಸ್ವರ್ಗಲೋಕದಲ್ಲಿ ಕೆಲವು ಕಾಲ ಆದರವುಂಟು ಮಾಡುವುದು 'ಮಹತ್' ದಾನ. 'ಸಮ' ದಾನ ಮಾನುಷಭೋಗವನ್ನುಂಟು ಮಾಡುತ್ತದೆ.

'ಹೀನ' ದಾನ ನಿಷ್ಫಲವಾಗುವುದು ಅಥವಾ ಮ್ಲೇಚ್ಛದೇಶದಲ್ಲಿ ಅದರ ಫಲ ದೊರೆಯುವುದು.

'ಪಾತಕ' ದಾನದಿಂದ ನರಕಪ್ರಾಪ್ತಿ, ತಿರ್ಯಕ್ ಯೋನಿಯಲ್ಲಿ ಜನ್ಮ.

ಉಮಾ ಉವಾಚ–
ಅಶುಭಸ್ಯಾಪಿ ದಾನಸ್ಯ ಶುಭಂ ಸ್ಯಾಚ್ಚ ಫಲಂ ಕಥಮ್ ?

ಅಶುಭದಾನಕ್ಕೂ ಶುಭಫಲವು ಹೇಗೆ ದೊರೆಯುವುದು?

ಮಹೇಶ್ವರ ಉವಾಚ–
ಮನಸಾ ತತ್ತ್ವತಃ ಶುದ್ಧಮಾನೃಶಂಸ್ಯಪುರಸ್ಸರಮ್ ।
ಪ್ರೀತ್ಯಾ ತು ಸರ್ವದಾನಾನಿ ದತ್ತ್ವಾ ಫಲಮವಾಪ್ನುಯಾತ್ ।
ರಹಸ್ಯಂ ಸರ್ವದಾನಾನಾಂ ಏತದ್ವಿದ್ಧಿ ಶುಭೇಕ್ಷಣೇ ॥

–ಮ.ಭಾ.ಅನು. 239/14–15

ಮಹೇಶ್ವರನು ನುಡಿದನು– ತಾತ್ತ್ವಿಕವಾಗಿ ಶುದ್ಧನಾಗಿ, ಕ್ರೌರ್ಯದ ಹಿನ್ನೆಲೆಯಿಲ್ಲದೆ, ಪ್ರೀತಿಯಿಂದ ಮನಸಾರೆ ದಾನ ಕೊಟ್ಟು ಸತ್ಫಲ ಪಡೆಯುವನು. ಎಲ್ಲ ದಾನಗಳ ರಹಸ್ಯವಿದು!

ಉಮಾ ಉವಾಚ –
ಮಾನುಷಾಸ್ತ್ರಿವಿಧಾ ದೇವ ದೃಶ್ಯಂತೇ ಸತತಂ ವಿಭೋಃ ।
ಆಸೀನಾ ಏವ ಭುಂಜಂತೇ ಸ್ಥಾನೈಶ್ವರ್ಯಪರಿಗ್ರಹೈಃ ।
ಅಪರೇ ಯತ್ನಪೂರ್ವಂ ತು ಲಭಂತೇ ಭೋಗಸಂಗ್ರಹಮ್ ॥

–ಮ.ಭಾ.ಅನು. 218/1

ಅಪರೇ ಯತಮಾನಾಶ್ಚ ನ ಲಭಂತೇ ತು ಕಿಂಚನ ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ॥

–ಮ.ಭಾ.ಅನು. 218/2

ಮೂರು ಬಗೆಯ ಮನುಷ್ಯರು ಲೋಕದಲ್ಲಿ ಕಂಡು ಬರುತ್ತಾರೆ.

1. ಕುಳಿತಲ್ಲೇ ಅನಾಯಾಸವಾಗಿ ಸ್ಥಾನ, ಐಶ್ವರ್ಯ, ಸಂಪತ್ತುಗಳಿಂದ ಸುಖವನ್ನು ಅನುಭವಿಸುತ್ತಾರೆ.

2. ಮತ್ತೆ ಕೆಲವರು ಪ್ರಯತ್ನಪಟ್ಟು ಭೋಗವನ್ನು ಪಡೆಯುವರು.

3. ಕೆಲವರು ಪ್ರಯತ್ನ ಪಟ್ಟರೂ ಏನೂ ದೊರೆಯದೇ ಕ್ಲೇಶ ಪಡುವರು. ಇದಕ್ಕೆ ಕಾರಣವೇನು?

ಮಹೇಶ್ವರ ಉವಾಚ–

ಯೇ ಲೋಕೇ ಮಾನುಷಾ ದೇವಿ! ದಾನಧರ್ಮಪರಾಯಣಾಃ ।
ಪಾತ್ರಾಣಿ ವಿಧಿವದ್ ಜ್ಞಾತ್ವಾ ದೂರತೋಽಪ್ಯನುಮಾನತಃ ॥
ಅಭಿಗಮ್ಯ 'ಸ್ವಯಂ ತತ್ರ ಗ್ರಾಹಯಂತಿ' ಪ್ರಸಾದ್ಯ ಚ ।
ದಾನಾದಿ ಚೇಂಗಿತೈರೇವ, ತೈರವಿಜ್ಞಾತ್ತಮೇವ ವಾ ॥
ಪುನರ್ಜನ್ಮನಿ ತೇ ದೇವಿ ತಾದೃಶಾಃ ಶೋಭನಾಃ ನರಾಃ ।
ಅಯತ್ನತಸ್ತು ತಾನ್ಯೇವ ಫಲಾನಿ ಪ್ರಾಪ್ನುವಂತ್ಯುತ ॥
ಆಸೀನಾ ಏವ ಭುಂಜಂತೇ ಭೋಗಾನ್ ಸುಕೃತಭೋಗಿನಃ ॥

–ಮ.ಭಾ.ಅನು. 218/4–8

ಪಾತ್ರರನ್ನು ದೂರದಲ್ಲಿಯೇ ತಿಳಿದು ಅವರಿದ್ದಲ್ಲಿಗೇ ಹೋಗಿ, ಅವರನ್ನು ಸಂತೋಷಪಡಿಸಿ, ಅವರ ಇಂಗಿತಗಳಿಂದಲೇ ಅವರಿಗೇನು ಬೇಕು ಎಂಬುದನ್ನು ಅರಿತು ದಾನ ಕೊಟ್ಟು ಬಂದವರು ಮುಂದಿನ ಜನ್ಮದಲ್ಲಿ ಹೆಚ್ಚಿನ ಪ್ರಯತ್ನ ಪರಿಶ್ರಮವಿಲ್ಲದೆ ಕುಳಿತಲ್ಲೇ ಪ್ರಾಚೀನ ಪುಣ್ಯದ ಫಲವಾಗಿ ಬಗೆಬಗೆಯ ಭೋಗಗಳನ್ನು ಅನುಭವಿಸುವರು.

ಅಪರೇ ಯೇ ಚ ದಾನಾನಿ ದದತ್ಯೇವ ಪ್ರಯಾಚಿತಾಃ ।
ಯದಾ ಯದಾಽರ್ಥಿನೇ ದತ್ವಾ ಪುನರ್ದಾನಂ ಚ ಯಾಚಿತಾಃ ॥
ತಾವತ್ ಕಾಲಂ ತತೋ ದೇವಿ ಪುನರ್ಜನ್ಮನಿ ತೇ ನರಾಃ ।
ಯತ್ನತಃ ಶ್ರಮಸಂಯುಕ್ತಾಃ ಪುನಸ್ತಾನ್ ಪ್ರಾಪ್ನುವಂತಿ ಚ॥

–ಮ.ಭಾ.ಅನು 218/9–10

ಮತ್ತೆ ಕೆಲವರು ಅರ್ಥಿಗಳು ಅನೇಕ ಬಾರಿ ಯಾಚನೆ ಮಾಡಿದ ಮೇಲೆ ದಾನ ಕೊಟ್ಟಿರುತ್ತಾರೆ. ದಾನ ಕೊಟ್ಟ ಮೇಲೆಯೂ ಮತ್ತೆ ಯಾಚನೆ ಮಾಡಿದ ಮೇಲೆ ಮತ್ತೆ ಸ್ವಲ್ಪದಾನ ಕೊಡುವರು. ಅವರು ಮರುಜನ್ಮದಲ್ಲಿ ಪ್ರಯತ್ನ ಪರಿಶ್ರಮ ಪಟ್ಟು ತಾವು ಕೊಟ್ಟ ದಾನದ ಫಲವನ್ನು ಪಡೆವರು.

ಯಾಚಿತಾ ಅಪಿ ಕೇಚಿತ್ತು ಅದತ್ತ್ವೈವ ಕಥಂಚನ ।
ಅಭ್ಯಸೂಯಾಪರಾಃ ಮರ್ತ್ಯಾ ಲೋಭೋಪಹತಚೇತಸಃ ॥
ತೇ ಪುನರ್ಜನ್ಮನಿ ಶುಭೇ ಯತಂತೋ ಬಹುಧಾ ನರಾಃ ।
ನ ಪ್ರಾಪ್ನುವಂತಿ ಮನುಜಾ ಮಾರ್ಗಂತಸ್ತೇಽ ಪಿ ಕಿಂಚನ ॥

–ಮ.ಭಾ.ಅನು. 218/11–12

ಕೆಲವರಂತೂ ಎಷ್ಟು ಬೇಡಿದರೂ ಅಸೂಯಾಪರರಾಗಿ, ಲೋಭಾವಿಷ್ಟರಾಗಿ ಏನೂ ಕೊಡಲೊಲ್ಲರು. ಅವರು ಮುಂದಿನ ಜನ್ಮದಲ್ಲಿ ಬಹಳ ಪ್ರಯತ್ನ ಪಟ್ಟು ಅಲೆದಾಡಿದರೂ ಏನನ್ನೂ ಪಡೆಯುವುದಿಲ್ಲ.

ಧರ್ಮಾದ್ ಅರ್ಥಾತ್ ಭಯಾತ್ ಕಾಮಾತ್ ಕಾರುಣ್ಯಾದಿತಿ ಭಾರತ ।
ದಾನಂ ಪಂಚವಿಧಂ ಜ್ಞೇಯಂ ಕಾರಣೈರ್ಯೈರ್ನಿಬೋಧ ತತ್ ।

1. ಇಹ ಕೀರ್ತಿಮವಾಪ್ನೋತಿ ಪ್ರೇತ್ಯ ಚಾನುತ್ತಮಂ ಸುಖಮ್ ।
ಇತಿ ದಾನಂ ಪ್ರದಾತವ್ಯಂ ಬ್ರಾಹ್ಮಣೇಭ್ಯೋಽನಸೂಯತಾ ॥

2. ದದಾತಿ ವಾ ದಾಸ್ಯತಿ ವಾ ಮಹ್ಯಂ ದತ್ತಮನೇನ ವಾ ।
ಇತ್ಯರ್ಥಿಭ್ಯೋ ನಿಶಮ್ಯೈವ ಸರ್ವಂ ದಾತವ್ಯಮರ್ಥಿನೇ ॥

3. ನಾಸ್ಯಾಹಂ ನ ಮದೀಯೋಽಯಂ ಪಾಪಂ ಕುರ್ಯಾದ್ ವಿಮಾನಿತಃ।
ಇತಿ ದದ್ಯಾದ್ ಭಯಾದೇವ ದೃಢಂ ಮೂಢಾಯ ಪಂಡಿತಃ ॥

4. ಪ್ರಿಯೋ ಮೇಽಯಂ ಪ್ರಿಯೋಽಸ್ಯಾಹಮ್ ಇತಿ ಸಂಪ್ರೇಕ್ಷ್ಯ ಬುದ್ಧಿಮಾನ್।
ವಯಸ್ಯಾಯೈವಮಕ್ಲಿಷ್ಟಂ ದಾನಂ ದದ್ಯಾದತಂದ್ರಿತಃ ॥

5. ದೀನಶ್ಚ ಯಾಚತೇ ಚಾಯಂ ಅಲ್ಪೇನಾಪಿ ಹಿ ತುಷ್ಯತಿ ।
ಇತಿ ದದ್ಯಾದ್ ದರಿದ್ರಾಯ ಕಾರುಣ್ಯಾದಿತಿ ಸರ್ವಥಾ ॥

ಇತಿ ಪಂಚವಿಧಂ ದಾನಂ ಪುಣ್ಯಕೀರ್ತಿವಿವರ್ಧನಮ್ ।
ಯಥಾಶಕ್ತ್ಯಾ ಪ್ರದಾತವ್ಯಮೇವಮಾಹ ಪ್ರಜಾಪತಿಃ ॥

ಧರ್ಮದ ಕಾರಣದಿಂದ, ಅರ್ಥದ ಕಾರಣದಿಂದ, ಭಯದಿಂದ, ಕಾಮ (ಪ್ರೀತಿ)ದಿಂದ, ಕಾರುಣ್ಯದಿಂದ, ಹೀಗೆ ದಾನ ಐದು ಬಗೆಯಾಗಿದೆ.

1. ದಾನ ಕೊಡುವುದರಿಂದ ಈ ಲೋಕದಲ್ಲಿ ಕೀರ್ತಿ, ಪರಲೋಕದಲ್ಲಿ ಸುಖ ದೊರೆಯುವುದೆಂದು ಕೊಡುವ ದಾನ ಧರ್ಮದ ನಿಮಿತ್ತವಾಗಿ ಕೊಡುವ ದಾನ.

2. ಇವನೂ ನನಗೆ ಈ ದಿನ ಕೊಡುತ್ತಾನೆ, ಮುಂದೆ ಕೊಡಬಹುದು, ಅಥವಾ ಹಿಂದೆ ದಾನ ಕೊಟ್ಟಿದ್ದ ಎಂದು ಭಾವಿಸಿ ಅರ್ಥಿಗೆ ಕೊಡುವ ದಾನ ಅರ್ಥನಿಮಿತ್ತಕ ದಾನ.

3. ಇವನು ನನ್ನವನಲ್ಲ. ನಾನೂ ಇವನಿಗೆ ಬೇಕಾದವನಲ್ಲ. ಆದರೂ ಕೊಡದೆ ಅವಮಾನ ಮಾಡಿದರೆ ಕೇಡು ಬಗೆಯುತ್ತಾನೆ ಎಂದು ಹೆದರಿ ಪಂಡಿತನೂ ಮೂಢನಿಗೆ ದಾನಕೊಡಬೇಕು. ಇದು ಭಯದಿಂದ ಕೊಡುವ ದಾನ.

4. ನನಗೆ ಇವನು, ಇವನಿಗೆ ನಾನು ಪ್ರೀತಿಪಾತ್ರರು ಎಂದು ವಿಚಾರ ಮಾಡಿ ಬುದ್ಧಿವಂತನು ಸ್ನೇಹಿತನಿಗೆ ಕೊಡಬೇಕೆಂಬ ಕಾಮನೆಯಿಂದ ಕೊಡುವ ದಾನ ಕಾಮನಿಮಿತ್ತವಾದುದು.

5. ಅಯ್ಯೋ ಪಾಪ! ಇವನು ದೀನ. ಅಲ್ಪ ಕೊಟ್ಟರೂ ಅಷ್ಟರಿಂದಲೇ ತೃಪ್ತಿ ಪಡುತ್ತಾನೆ ಎಂದು ದರಿದ್ರನಿಗೆ ಕಾರುಣ್ಯದಿಂದ ಕೊಡುವ ದಾನ. ಹೀಗೆ ಐದು ಬಗೆಯಾದ ದಾನ ಪುಣ್ಯ, ಕೀರ್ತಿವರ್ಧಕವಾದುದು. ಯಥಾ ಶಕ್ತಿ ದಾನ ನೀಡಬೇಕೆಂದು ಪ್ರಜಾಪತಿ ಅಭಿಪ್ರಾಯ ಪಡುವನು.

ಉಮಾ ಉವಾಚ–
ಭಗವನ್ಮಾನುಷಾಃ ಕೇಚಿತ್ ಐಶ್ವರ್ಯಜ್ಞಾನಸಂಯುತಾಃ ।

ಮ್ಲೇಚ್ಛಭೂಮಿಷು ದೃಶ್ಯಂತೇ ಮ್ಲೇಚ್ಛೈಶ್ವರ್ಯ ಸಮನ್ವಿತಾಃ ।
ಕೇನ ಕರ್ಮವಿಪಾಕೇನ? ತನ್ಮೇ ಶಂಸಿತುಮರ್ಹಸಿ ।

ಮಹೇಶ್ವರ ಉವಾಚ–
ಯೇ ಪುರಾ ಮನುಜಾ ದೇವಿ ಧನಧಾನ್ಯಸಮನ್ವಿತಾಃ ।
ಅಯಥಾವತ್ ಪ್ರಯಚ್ಛಂತಿ ಶ್ರದ್ಧಾವರ್ಜಿತಮೇವ ವಾ ॥
ಅಪಾತ್ರೇಭ್ಯಶ್ಚ ಯೇ ದಾನಂ ಶೌಚಮಂಗಲವರ್ಜಿತಾಃ ।
ದದತ್ಯೇವ ಚ ಯೇ ಮೂರ್ಖಾಃ ಶ್ಲಾಘಯಾಽವಜ್ಞಯಾಪಿ ವಾ ॥
ಏವಂ ಯುಕ್ತಸಮಾಚಾರಾಃ ಪುನರ್ಜನ್ಮನಿ ಶೋಭನೇ ।
ಕುದೇಶೇ ಮ್ಲೇಚ್ಛಭೂಯಿಷ್ಠೇ ದುರ್ಗಮೇ ವನಸಂಕಟೇ ॥
ಮ್ಲೇಚ್ಛಾಧಿಪತ್ಯಂ ಸಂಪ್ರಾಪ್ಯ ಜಾಯಂತೇ ತತ್ರ ತತ್ರ ವೈ ॥

ಉಮೆ ಹೇಳಿದಳು– ಪೂಜ್ಯರೇ! ಕೆಲವು ಮನುಷ್ಯರು ಐಶ್ವರ್ಯ, ಜ್ಞಾನಗಳಿಂದ ಕೂಡಿದವರಾಗಿ ಮ್ಲೇಚ್ಛಭೂಮಿಗಳಲ್ಲಿ ಮ್ಲೇಚ್ಛರ ಐಶ್ವರ್ಯವನ್ನು ಹೊಂದಿದವರಾಗಿರುವುದು ಕಾಣುತ್ತೇವೆ. ಕಾರಣವೇನು?

ಮಹೇಶ್ವರ ಮಾರ್ನುಡಿದನು– ದೇವಿ! ಹಿಂದಿನ ಜನ್ಮದಲ್ಲಿ ಧನ ಧಾನ್ಯಸಂಪದ್ಭರಿತರಾಗಿರುವಾಗ ಶಾಸ್ತ್ರಾನುಸಾರವಲ್ಲದ ರೀತಿಯಲ್ಲಿ ಹಾಗೂ ಅಶ್ರದ್ಧೆಯಿಂದ ಮತ್ತು ಅಪಾತ್ರರಿಗೆ, ಶೌಚ, ಮಾಂಗಲ್ಯವಿಲ್ಲದೆಲೆ, ಆತ್ಮ ಪ್ರಶಂಸೆ ಗೈಯುತ್ತ, ತಿರಸ್ಕಾರ ಮಾಡುತ್ತ ದಾನ ಕೊಟ್ಟ ಮೂರ್ಖರು ಮುಂದಿನ ಜನ್ಮದಲ್ಲಿ ಮ್ಲೇಚ್ಛರೇ ತುಂಬಿದ ಕೆಟ್ಟ ದೇಶದಲ್ಲಿ, ದುರ್ಗಮವಾದ ಗೊಂಡಾರಣ್ಯದಲ್ಲಿ ಮ್ಲೇಚ್ಛಾಧಿಪತ್ಯವನ್ನು ಹೊಂದಿ ಸಿರಿವಂತರಾಗಿ ಹುಟ್ಟುತ್ತಾರೆ.

ಅಂತ್ಯಕಾಲದ ದಾನಗಳು

ಗರುಡಪುರಾಣದಲ್ಲಿ
ಅಂತೇ ಜನೋ ಯದ್ದದಾತಿ ಸ್ವಲ್ಪಂ ವಾ ಯದಿ ವಾ ಬಹು ।
ತದಕ್ಷಯಂ ಭವೇತ್ ತಾರ್ಕ್ಷ್ಯ ಯತ್ಪುತ್ರಶ್ಚಾನುಮೋದತೇ ॥

ಅಂತ್ಯಕಾಲದಲ್ಲಿ ಬಹಳವಾಗಲೀ, ಸ್ವಲ್ಪವಾಗಲೀ ಏನನ್ನು ದಾನ ಕೊಡುವನೋ ಅದು ಅಕ್ಷಯ ಫಲ ನೀಡುವುದು. ದಾನವನ್ನು ಅನುಮೋದಿಸಿದ ಪುತ್ರನಿಗೂ ಅಕ್ಷಯ ಫಲ ಬರುವುದು.

ಅಂತಕಾಲೇ ತು ಸತ್ಪುತ್ರಃ ಸರ್ವದಾನಾನಿ ದಾಪಯೇತ್ ।
ಯತ್ತದರ್ಥಂ ಸುತೋ ಲೋಕೇ ಪ್ರಾರ್ಥ್ಯತೇ ಧರ್ಮಕೋವಿದೈಃ ॥

ಸತ್ಪುತ್ರನು ತನ್ನ ಮಾತಾ-ಪಿತೃಗಳಿಂದ ಅವರ ಅಂತ್ಯಕಾಲದಲ್ಲಿ ಎಲ್ಲ ದಾನಗಳನ್ನು ಕೊಡಿಸಬೇಕು. ಅದಕ್ಕಾಗಿಯೇ ಧರ್ಮಕುಶಲರು ಪುತ್ರನಿರಬೇಕೆಂದು ಬಯಸುವುದು.

ಭೂಮಿಷ್ಠಂ ಪಿತರಂ ದೃಷ್ಟ್ವಾ ಅರ್ಧೋನ್ಮೀಲಿತಲೋಚನಮ್ ।
ಪುತ್ರೈಸ್ತೃಷ್ಣಾ ನ ಕರ್ತವ್ಯಾ ತದ್ಧನೇ ಪೂರ್ವಸಂಚಿತೇ ॥

ತಂದೆ ನೆಲದ ಮೇಲೆ ಅರೆಗಣ್ಣು ತೆರೆದು ಮರಣೋನ್ಮುಖನಾಗಿರುವಾಗ ಅವನು ಸಂಪಾದಿಸಿಟ್ಟ ಹಣದ ವಿಷಯದಲ್ಲಿ ಮಕ್ಕಳು ಆಸೆ ಪಡಬಾರದು.

ಅಷ್ಟಮಹಾದಾನಗಳು

ಆತುರೇ ಚೋಪರಾಗೇ ಚ ದ್ವಯಂ ದಾನಂ ವಿಶಿಷ್ಯತೇ ।
ಅತೋಽವಶ್ಯಂ ಪ್ರದಾತವ್ಯಮಷ್ಟದಾನಂ ತಿಲಾದಿಕಮ್ ॥

ಮರಣದಲ್ಲಿ ಹಾಗೂ ಗ್ರಹಣದಲ್ಲಿ ದಾನ ನೀಡುವುದು ವಿಶೇಷ. ಆದ್ದರಿಂದ ಮರಣಕಾಲದಲ್ಲಿ ಎಂಟು ದಾನವನ್ನು ಕೊಡಬೇಕು.

ತಿಲಾ ಲೋಹಂ ಹಿರಣ್ಯಂ ಚ ಕಾರ್ಪಾಸೋ ಲವಣಂ ತಥಾ ।
ಸಪ್ತಧಾನ್ಯಂ ಕ್ಷಿತಿರ್ಗಾವಃ ಏಕೈಕಂ ಪಾವನಂ ಸ್ಮೃತಮ್ ॥

ಎಳ್ಳು, ಕಬ್ಬಿಣ, ಬಂಗಾರ, ಹತ್ತಿ, ಉಪ್ಪು, ಸಪ್ತಧಾನ್ಯ, ಭೂಮಿ, ಗೋ, ಇವು ಎಂಟು ದಾನ ಕೊಡಬೇಕಾದ ವಸ್ತುಗಳು. ಒಂದೊಂದೂ ಪಾವನವೆನಿಸಿದೆ.

ಮಮ ಸ್ವೇದಸಮುದ್ಭೂತಾಃ ಪವಿತ್ರಾಸ್ತ್ರಿವಿಧಾಸ್ತಿಲಾಃ ।
ಅಸುರಾ ದಾನವಾ ದೈತ್ಯಾಃ ತೃಪ್ಯಂತಿ ತಿಲದಾನತಃ ॥

ಶ್ರೀಯಜ್ಞವರಾಹನ ಮೈ ಬೆವರಿನಿಂದ ಉತ್ಪನ್ನವಾದ ಮೂರು ಬಗೆಯ ಎಳ್ಳು ಪವಿತ್ರವಾದವು. ಮೂರು ಬಗೆಯ ಈ ಎಳ್ಳು ದಾನಗಳಿಂದ ಅಸುರರು, ದೈತ್ಯರು, ದಾನವರು ತೃಪ್ತಿ ಪಡುತ್ತಾರೆ.

ತಿಲಾಃ ಶ್ವೇತಾಸ್ತಥಾ ಕೃಷ್ಣಾ ದಾನೇನ ಕಪಿಲಾಸ್ತಿಲಾಃ ।
ಸಂಹರಂತಿ ತ್ರಿಧಾ ಪಾಪಂ ವಾಙ್ಮನಃಕಾಯಸಂಚಿತಮ್ ॥

ಬಿಳಿ, ಕಪ್ಪು, ಕಂದುಬಣ್ಣಗಳ ಮೂರು ಬಗೆಯ ಎಳ್ಳಿನ ದಾನದಿಂದ ವಾಕ್, ಮನಸ್ಸು, ದೇಹಗಳಿಂದ ಮಾಡಿದ ಪಾಪಗಳು ಪರಿಹಾರವಾಗುತ್ತವೆ.

ಲೋಹದಾನಂ ಪ್ರದಾತವ್ಯಂ ಭೂಮಿಯುಕ್ತೇನ ಪಾಣಿನಾ ।
ಯಮಸೀಮಾಂ ನ ಚಾಪ್ನೋತಿ ನ ಗಚ್ಛೇತ್ತಸ್ಯ ವರ್ತ್ಮನಿ ॥

ಕಬ್ಬಿಣದ ದಾನವನ್ನು ನೆಲದಲ್ಲಿ ಕೈಯಿಟ್ಟು ಕೊಡಬೇಕು. ಅದರಿಂದ ಯಮ ಮಾರ್ಗದ ಸೀಮೆಗೇ ಹೋಗುವುದಿಲ್ಲ. ಆ ಮಾರ್ಗದಲ್ಲಿ ಸಂಚರಿಸುವುದೂ ಇಲ್ಲ.

ಕುಠಾರೋ ಮುಸಲೋ ದಂಡಃ ಖಡ್ಗಶ್ಚ ಛುರಿಕಾ ತಥಾ ।
ಶಸ್ತ್ರಾಣಿ ಯಮಹಸ್ತೇ ಚ ನಿಗ್ರಹೇ ಪಾಪಕರ್ಮಣಾಮ್ ॥
ಯಮಾಯುಧಾನಾಂ ಸಂತುಷ್ಟ್ಯೈ ದಾನಮೇತದುದಾಹೃತಮ್ ।

ಕೊಡಲಿ, ಹಾರೆ, ಕಬ್ಬಿಣದ ಕೋಲು, ಖಡ್ಗ, ಚೂರಿ, ಈ ಕಬ್ಬಿಣದ ಆಯುಧಗಳನ್ನು ದಾನ ಕೊಡಬೇಕು. ಪಾಪಿಗಳ ನಿಗ್ರಹಕ್ಕಾಗಿ ಯಮನ ಕೈಯಲ್ಲಿರುವ ಆಯುಧದೇವತೆಗಳು ಸಂತೋಷ ಪಡುತ್ತಾರೆ. ಅದರಿಂದಾಗಿ ಹಿಂಸೆಯಾಗುವುದಿಲ್ಲ.

ಊರ್ಣಾಃ ಶ್ಯಾಮಸೂತ್ರಶ್ಚ ಶುಂಡಾಮರ್ಕೋಽಪ್ಯುದಂಭರಃ ।
ಶೇಷಬಲೋ ಮಹಾದೂತಾಃ ಲೋಹದಾನಾತ್ ಸುಖಪ್ರದಾಃ ॥

ಊರ್ಣ, ಶ್ಯಾಮಸೂತ್ರ, ಶುಂಡಾಮರ್ಕ, ಉದಂಭರ, ಶೇಷಬಲ ಮುಂತಾದ ಯಮನ ಮಹಾದೂತರು ಲೋಹದಾನದಿಂದ ಸುಖಪ್ರದರಾಗುವರು.

ಶೃಣು ತಾರ್ಕ್ಷ್ಯ! ಪರಂ ಗುಹ್ಯಂ ದಾನಾನಾಂ ದಾನಮುತ್ತಮಮ್ ।
ದತ್ತೇನ ತೇನ ತುಷ್ಯಂತಿ ಭೂರ್ಭುವಃ ಸ್ವರ್ಗಕಾಮಿನಃ ॥

ಕೇಳು ಗರುಡ! ಬಹಳ ಗುಹ್ಯವಾದ ದಾನಗಳಲ್ಲೇ ಉತ್ತಮ ದಾನವಿದು (ಸುವರ್ಣದಾನ)..... ಈ ದಾನದಿಂದ ಭೂ, ಭುವಃ, ಸ್ವರ್ಗಗಳನ್ನು ಬಯಸುವವರೆಲ್ಲ ಮುದಗೊಳ್ಳುವರು.

ಬ್ರಹ್ಮಾದ್ಯಾ ಋಷಯೋ ದೇವಾಃ ಧರ್ಮರಾಜಸಭಾಸದಃ ।
ಸ್ವರ್ಣದಾನೇನ ಸಂತುಷ್ಟಾ ಭವಂತಿ ವರದಾಯಕಾಃ ॥
ತಸ್ಮಾದ್ದೇಯಂ ಸ್ವರ್ಣದಾನಂ ಪ್ರೇತೋದ್ಧಾರಣಹೇತವೇ ।
ನ ಯಾತಿ ಯಮಲೋಕಂ ಸಃ ಸ್ವರ್ಗತಿಂ ತಾತ ಗಚ್ಛತಿ ॥
ಚಿರಂ ವಸೇತ್ ಸತ್ಯಲೋಕೇ ತತೋ ರಾಜಾ ಭವೇದಿಹ ।
ರೂಪವಾನ್ ಧಾರ್ಮಿಕೋ ವಾಗ್ಮೀ ಶ್ರೀಮಾನತುಲವಿಕ್ರಮಃ ॥

ಬ್ರಹ್ಮಾದಿ ದೇವತೆಗಳು, ಋಷಿಗಳು, ಧರ್ಮರಾಜನ ಸಭಾಸದರು ಸುವರ್ಣ ದಾನದಿಂದ ಸಂತಸಗೊಂಡು, ವರಪ್ರದರಾಗುವರು. ಆದ್ದರಿಂದ ಪ್ರೇತೋದ್ಧಾರಕ್ಕಾಗಿ ಸುವರ್ಣ ದಾನವನ್ನು ನೀಡಬೇಕು. ಅವನು ಯಮಲೋಕ ಸೇರದೆ, ಸ್ವರ್ಗಕ್ಕೆ ಹೋಗುವನು. ಬಹುಕಾಲ ಸತ್ಯಲೋಕದಲ್ಲಿ ವಾಸ ಮಾಡಿ ಬಳಿಕ, ಈ ಲೋಕದಲ್ಲಿ ರೂಪವಂತನು, ಧಾರ್ಮಿಕನು, ವಾಗ್ಮಿಯು, ಸಿರಿವಂತನು, ಅತುಲ ಪರಾಕ್ರಮಿಯೂ ಆದ ರಾಜನಾಗುವನು.

ಕಾರ್ಪಾಸಸ್ಯ ಚ ದಾನೇನ ದೂತೇಭ್ಯೋ ನ ಭಯಂ ಭವೇತ್ ।
ಲವಣಂ ದೀಯತೇ ಯಚ್ಚ ತೇನ ನೈವ ಭಯಂ ಯಮಾತ್ ॥

ಹತ್ತಿಯ ದಾನದಿಂದ ಯಮದೂತರಿಂದ, ಉಪ್ಪಿನ ದಾನದಿಂದ ಯಮನಿಂದ ಭಯವಿಲ್ಲ.

ಅಯೋಲವಣ ಕಾರ್ಪಾಸ ತಿಲಕಾಂಚನದಾನತಃ ।
ಚಿತ್ರಗುಪ್ತಾದಯಸ್ತುಷ್ಟಾ ಯಮಸ್ಯ ಪುರವಾಸಿನಃ ॥

ಕಬ್ಬಿಣ, ಉಪ್ಪು, ಹತ್ತಿ, ತಿಲ, ಸುವರ್ಣ ದಾನಗಳಿಂದ ಯಮನ ಪುರನಿವಾಸಿಗಳಾದ ಚಿತ್ರಗುಪ್ತಾದಿಗಳೆಲ್ಲ ತುಷ್ಟರಾಗುವರು.

ಸಪ್ತಧಾನ್ಯಪ್ರದಾನೇನ ಪ್ರೀತೋ ಧರ್ಮಧ್ವಜೋ ಭವೇತ್ ।
ತುಷ್ಟಾ ಭವಂತಿ ಯೇಽನ್ಯೇಪಿ ತ್ರಿಷು ದ್ವಾರೇಷ್ವಧಿಷ್ಠಿತಾಃ ॥
ವ್ರೀಹಯೋ ಯವಗೋಧೂಮಾಃ ಮುದ್ಗಾ ಮಾಷಾಃ ಪ್ರಿಯಂಗವಃ ।
ಚಣಕಾಃ ಸಪ್ತಮಾಃ ಯಾಃ ಸಪ್ತಧಾನ್ಯಮುದಾಹೃತಮ್ ॥

ಸಪ್ತ ಧಾನ್ಯಗಳ ದಾನದಿಂದ ದಕ್ಷಿಣ ದ್ವಾರಪಾಲಕ ಧರ್ಮಧ್ವಜ ಹಾಗೂ ಇತರೆ ಮೂರು ಬಾಗಿಲುಗಳ ದ್ವಾರಪಾಲಕರೂ ಸಂತುಷ್ಟರಾಗುವರು. ನೆಲ್ಲು, (ಭತ್ತ) ಜವೆ ಗೋಧಿ, ಗೋಧಿ, ಹೆಸರು, ಉದ್ದು, ಅವರೆ, ಕಡಲೆ – ಇವು ಏಳು ಧಾನ್ಯಗಳು.

ಗೋಚರ್ಮಮಾತ್ರಂ ವಸುಧಾ ದತ್ತಾ ಪಾತ್ರೇ ವಿಧಾನತಃ ।
ಪುನಾತಿ ಬ್ರಹ್ಮಹತ್ಯಾಯಾ ದೃಷ್ಟಮೇತನ್ಮುನೀಶ್ವರೈಃ ॥

ಗೋಚರ್ಮಮಾತ್ರದಷ್ಟು ಭೂಮಿಯನ್ನು ಪಾತ್ರನಲ್ಲಿ ಯಾರು ವಿಧ್ಯುಕ್ತವಾಗಿ ದಾನ ಮಾಡುವರೋ ಅವರು ಬ್ರಹ್ಮಹತ್ಯೆಯಿಂದ ಮುಕ್ತರಾಗಿ ಪವಿತ್ರರಾಗುವರು.

ಪೃಥಿವೀಂ ಸಸ್ಯಸಂಪೂರ್ಣಾಂ ಯೋ ದದಾತಿ ದ್ವಿಜನ್ಮನೇ ।
ಸ ಪ್ರಯಾತೀಂದ್ರಭುವನೇ ಪೂಜ್ಯಮಾನಃ ಸುರಾಸುರೈಃ ॥

ಸಸ್ಯಸಂಪೂರ್ಣವಾದ ಭೂಮಿಯನ್ನು ಯಾವನು ಬ್ರಾಹ್ಮಣನಿಗೆ ದಾನ ಮಾಡುವನೊ ಅವನು ಇಂದ್ರಲೋಕದಲ್ಲಿ ಸುರಾಸುರರಿಂದ ಆದರಣೀಯನಾಗುವನು.

ಅತ್ಯಲ್ಪ ಫಲದಾನಾನಿ ಸ್ಯುಃ ಅನ್ಯದ್ದಾನಾನಿ ಕಾಶ್ಯಪ ।
ಪೃಥಿವೀದಾನಜಂ ಪುಣ್ಯಮಹನ್ಯಹನಿ ವರ್ಧತೇ ॥

ಇತರ ದಾನಗಳ ಫಲ ಅಲ್ಪ. ಭೂಮಿದಾನದಿಂದುಟಾದ ಪುಣ್ಯ ಪ್ರತಿ ನಿತ್ಯ ಅಭಿವೃದ್ಧಿಯಾಗುವುದು.

ತಸ್ಮಾದ್ಭೂಮೀಶ್ವರೋ ಭೂಮಿದಾನಮೇವ ಪ್ರದಾಪಯೇತ್ ।
ಅನ್ಯೇಷಾಂ ಭೂಮಿದಾನಾರ್ಥಂ ಗೋದಾನಂ ಕಥಿತಂ ಮಯಾ ॥
ತತೋಽಂತಧೇನುರ್ದಾತವ್ಯಾ ರುದ್ರಧೇನುಂ ಪ್ರದಾಪಯೇತ್ ।
ಋಣಧೇನುಂ ತತೋ ದತ್ತ್ವಾ ಮೋಕ್ಷಧೇನುಂ ಪ್ರದಾಪಯೇತ್ ॥

ಭೂಮಿಪಾಲನಾದವನು ಭೂದಾನ ಮಾಡದಿದ್ದರೆ ಮುಂದೆ ದರಿದ್ರನಾಗುವುದರಿಂದ ಭೂಮಿಗೊಡೆಯನು ಭೂದಾನವನ್ನೇ ಮಾಡಿಸಬೇಕು. ಭೂಮಿಯಿಲ್ಲದವರಿಗೆ ಭೂಮಿದಾನದ ಪ್ರತಿನಿಧಿಯಾಗಿ ಗೋದಾನವನ್ನು ಹೇಳಲಾಗಿದೆ. ಆದ್ದರಿಂದ ಅಂತಧೇನು ದಾನವನ್ನು, ರುದ್ರಧೇನು ದಾನವನ್ನು, ಋಣಧೇನು, ಮೋಕ್ಷಧೇನುಗಳ ದಾನವನ್ನು ಮಾಡಬೇಕು.

ದದ್ಯಾದ್ ವೈತರಣೀಂ ಧೇನುಂ ವಿಶೇಷವಿಧಿನಾ ಖಗ!
ತಾರಯಂತಿ ನರಂ ಗಾವಃ ತ್ರಿವಿಧಾಚ್ಚೈವ ಪಾತಕಾತ್ ॥
ಬಾಲತ್ವೇ ಯಚ್ಚ ಕೌಮಾರೇ ಯತ್ಪಾಪಂ ಯೌವನೇ ಕೃತಮ್ ।
ವಯಃ ಪರಿಣತೌ ಯಚ್ಚ ಯಚ್ಚ ಜನ್ಮಾಂತರೇಷ್ವಪಿ ॥

ವಿಶೇಷವಿಧಿಗೆ ಅನುಸಾರವಾಗಿ ವೈತರಣೀ ಧೇನುದಾನವನ್ನು ನೀಡಬೇಕು. ತ್ರಿವಿಧ ಪಾತಕಗಳಿಂದ, ಬಾಲ್ಯ, ಕೌಮಾರ, ಯೌವನ, ವೃದ್ಧಾಪ್ಯಗಳಲ್ಲಿ ಹಾಗೂ ಜನ್ಮಾಂತರಗಳಲ್ಲಿ ಮಾಡಿದ ಪಾಪಗಳಿಂದ ಗೋವುಗಳು ಪುರುಷನನ್ನು ಉದ್ಧಾರ ಮಾಡುತ್ತವೆ.

ಯನ್ನಿಶಾಯಾಂ ತಥಾ ಪ್ರಾತಃ ಯನ್ಮಧ್ಯಾಹ್ನ- ಅಪರಾಹ್ಣಯೋಃ ।
ಸಂಧ್ಯಯಾ ಯತ್ಕೃತಂ ಪಾಪಂ ಕಾಯೇನ ಮನಸಾ ಗಿರಾ ॥
ದತ್ತ್ವಾ ಧೇನುಂ ಸಕೃದ್ವಾಪಿ ಕಪಿಲಾಂ ಕ್ಷೀರಸಂಯುತಾಮ್ ।
ಸೋಪಸ್ಕರಾಂ ಸವತ್ಸಾಂ ಚ ತಪೋವೃತ್ತಿ ಸಮನ್ವಿತೇ ॥
ಬ್ರಾಹ್ಮಣೇ ವೇದವಿದುಷೇ ಸರ್ವಪಾಪೈಃ ಪ್ರಮುಚ್ಯತೇ ।
ಉದ್ಧರೇದಂತಕಾಲೇ ಸಾ ದಾತಾರಂ ಪಾಪಸಂಚಯಾತ್ ॥

ರಾತ್ರಿ, ಬೆಳಿಗ್ಗೆ, ಮಧ್ಯಾಹ್ನ, ಅಪರಾಹ್ನ, ಸಂಧ್ಯಾದಿ ಕಾಲಗಳಲ್ಲಿ, ಕಾಯ (ದೇಹ), ಮನಸ್ಸು, ಮಾತುಗಳಿಂದ ಮಾಡಿದ ಎಲ್ಲ ಪಾಪಗಳನ್ನು ಕಪಿಲವರ್ಣದ ಹಾಲು ತುಂಬಿದ ಗೋವನ್ನು ಕರುವಿನೊಂದಿಗೆ ಹಾಲಿನ ಪಾತ್ರೆ, ವಸ್ತ್ರ ಮುಂತಾದ ಪರಿಕರಗಳೊಂದಿಗೆ ವೇದವೇತ್ತನಾದ ತಪಸ್ವಿ ಬ್ರಾಹ್ಮಣನಿಗೆ, ದಾನ ಕೊಡುವುದರಿಂದ ಕಳೆದುಕೊಳ್ಳಬಹುದಾಗಿದೆ. ಅಂತಕಾಲದಲ್ಲಿ ದಾನಿಯನ್ನು ಪಾಪಸಮೂಹದಿಂದ ಗೋವು ಬಿಡುಗಡೆಗೊಳಿಸುತ್ತದೆ.

ಏಕಾ ಗೌಃ ಸ್ವಸ್ಥಚಿತ್ತಸ್ಯ ಹ್ಯಾತುರಸ್ಯ ಚ ಗೋಶತಮ್ ।
ಸಹಸ್ರಂ ಮ್ರಿಯಮಾಣಸ್ಯ ದತ್ತಂ ಚಿತ್ತವಿವರ್ಜಿತಮ್ ॥
ಮೃತಸ್ಯೈತತ್ಪುನರ್ಲಕ್ಷಂ ವಿಧಿಪೂತಂ ಚ ತತ್ಸಮಮ್ ।
ತೀರ್ಥ ಪಾತ್ರ ಸಮೋಪೇತಂ ದಾನಮೇಕಂ ಚ ಲಕ್ಷಧಾ ॥
ಪಾತ್ರೇ ದತ್ತಂ ಚ ಯದ್ದಾನಂ ತಲ್ಲಕ್ಷಗುಣಿತಂ ಭವೇತ್ ।
ದಾತುಃ ಫಲಮನಂತಂ ಸ್ಯಾತ್ ನ ಪಾತ್ರಸ್ಯ ಪ್ರತಿಗ್ರಹಃ ॥

ಆರೋಗ್ಯವಂತನಾದವನು ಕೊಡುವ ಒಂದು ಗೋದಾನ, ವ್ಯಾಧಿ ಪೀಡಿತನಾದವನು ಕೊಡುವ ನೂರು ಗೋದಾನ, ಸಾಯುತ್ತಿರುವವನು ಕೊಡುವ ಸಾವಿರ ಗೋದಾನ, ಸತ್ತ ಬಳಿಕ ಕೊಡುವ ಲಕ್ಷ ಗೋದಾನ, ವಿಧಿಬದ್ಧವಾಗಿ ನೀಡಿದ ಗೋದಾನ ಸಮಫಲವನ್ನು ಕೊಡುವುದು. ಸತ್ಪಾತ್ರನಲ್ಲಿ ಕೊಟ್ಟ ದಾನ ಲಕ್ಷಪಟ್ಟು ಕೊಟ್ಟಂತಾಗುವುದು. ಕೊಟ್ಟವನಿಗೆ ಅನಂತಫಲ. ತೆಗೆದುಕೊಂಡವರಿಗೆ ಪ್ರತಿಗ್ರಹದ ದೋಷವಿಲ್ಲ.

ಏಕಾ ಹ್ಯೇಕಸ್ಯ ದಾತವ್ಯಾ ಬಹೂನಾಂ ನ ಕದಾಚನ ।
ಸಾ ವಿಕ್ರೀತಾ ವಿಭಕ್ತಾ ವಾ ದಹತ್ಯಾಸಪ್ತಮಂ ಕುಲಮ್ ॥

ಒಂದು ಗೋವನ್ನು ಒಬ್ಬನಿಗೇ ದಾನ ಕೊಡಬೇಕು. ಬಹುಮಂದಿಗೆ ಸೇರಿ ಕೊಡಬಾರದು. ದಾನ ಪಡೆದ ಗೋವನ್ನು ಮಾರಿದರೆ, ಮಾರಿ ಹಣವನ್ನು ಹಂಚಿಕೊಂಡರೆ ಏಳು ಕುಲವನ್ನು ಸುಡುತ್ತದೆ.

ವೈತರಣೀಗೋದಾನದ ಕ್ರಮ

ಸ್ವರ್ಣಶೃಂಗೀಂ ರೌಪ್ಯಖುರೀಂ ಕಾಂಸ್ಯಪಾತ್ರೋಪದೋಹಿನೀಮ್ ।
ಕೃಷ್ಣವಸ್ತ್ರಯುಗಚ್ಛನ್ನಾಂ ಕಂಠಘಂಟಾಸಮನ್ವಿತಾಮ್ ॥
ಕಾರ್ಪಾಸೋಪರಿ ಸಂಸ್ಥಾಪ್ಯ ತಾಮ್ರಪಾತ್ರಂ ಸಚೈಲಕಮ್ ।
ಕಾಂಸ್ಯಪಾತ್ರೇ ಘೃತಂ ಕೃತ್ವಾ ಸರ್ವಂ ತಸ್ಯೋಪರಿ ನ್ಯಸೇತ್ ॥

ಯಮಂ ಹೈಮಂ ನ್ಯಸೇತ್ ತತ್ರ ಲೋಹದಂಡಸಮನ್ವಿತಮ್ ।

ನಾವಮಿಕ್ಷುಮಯೀಂ ಕೃತ್ವಾ ಪಟ್ಟಸೂತ್ರೇಣ ವೇಷ್ಟಯೇತ್ ॥
ಗರ್ತಂ ವಿಧಾಯ ಸಜಲಂ ಕೃತ್ವಾ ತಸ್ಮಿನ್ನಿಕ್ಷಿಪೇತ್ತರಿಮ್ ।
ತಸ್ಯೋಪರಿ ಸ್ಥಿತಾಂ ಕೃತ್ವಾ ಸೂರ್ಯದೇಹಸಮುದ್ಭವಾಮ್ ॥
ಧೇನುಂ ಸಂಕಲ್ಪಯೇತ್ತತ್ರ ಯಥಾಶಾಸ್ತ್ರವಿಧಾನತಃ ।

ಸಾಲಂಕಾರಾಣಿ ವಸ್ತ್ರಾಣಿ ಬ್ರಾಹ್ಮಣಾಯ ಪ್ರಕಲ್ಪಯೇತ್ ॥
ಪೂಜಾಂ ಕುರ್ಯಾದ್ ವಿಧಾನೇನ ಗಂಧಪುಷ್ಪಾಕ್ಷತಾದಿಭಿಃ ।
ಪುಚ್ಛಂ ಸಂಗೃಹ್ಯ ಧೇನೋಸ್ತು ನಾಮಮಾಶ್ರಿತ್ಯ ಪಾದತಃ ॥
ಪುರಸ್ಕೃತ್ಯ ತತೋ ವಿಪ್ರಮಿಮಂ ಮಂತ್ರಮುದೀರಯೇತ್ ।

'ಭವಸಾಗರಮಗ್ನಾನಾಂ ಶೋಕತಾಪೋರ್ಮಿದುಃಖಿನಾಮ್ ॥
ತ್ರಾತಾ ತ್ವಂ ಹಿ ಜಗನ್ನಾಥ । ಶರಣಾಗತವತ್ಸಲ ।
ವಿಷ್ಣುರೂಪ ! ದ್ವಿಜಶ್ರೇಷ್ಠ ! ಮಾಮುದ್ಧರ ಮಹೀಸುರ ॥
ಸದಕ್ಷಿಣಾ ಮಯಾ ದತ್ತಾ ತುಭ್ಯಂ ವೈತರಣೀಂ ನಮಃ ।
ಯಮಮಾರ್ಗೇ ಮಹಾಘೋರೇ ತಾಂ ನದೀಂ ಶತಯೋಜನಾಮ್ ॥
ತರ್ತುಕಾಮೋ ದದಾಮ್ಯೇತಾಂ ತುಭ್ಯಂ ವೈತರಣೀಂ ನಮಃ ।
ಧೇನುಕೇ ಮಾಂ ಪ್ರತೀಕ್ಷಸ್ವ ಯಮದ್ವಾರಮಹಾಪಥೇ ॥
ಉತ್ತಾರಣಾರ್ಥಂ ದೇವೇಶಿ! ವೈತರಣ್ಯೈ ನಮೋಸ್ತು ತೇ ॥
ಗಾವೋ ಮೇ ಅಗ್ರತಃ ಸಂತು ಗಾವೋ ಮೇ ಸಂತು ಪೃಷ್ಠತಃ ।
ಗಾವೋ ಮೇ ಹೃದಯೇ ಸಂತು ಗವಾಂ ಮಧ್ಯೇ ವಸಾಮ್ಯಹಂ ॥
ಯಾ ಲಕ್ಷ್ಮೀಃ ಸರ್ವಭೂತಾನಾಂ ಯಾ ಚ ದೇವೇ ಪ್ರತಿಷ್ಠಿತಾ ।
ಧೇನುರೂಪೇಣ ಸಾ ದೇವೀ ಮಮ ಪಾಪಂ ವ್ಯಪೋಹತು ॥'

ಇತಿ ಮಂತ್ರೈಶ್ಚ ಸಂಪ್ರಾರ್ಥ್ಯ ಯಃ ಸಾಂಜಲಿರ್ಧೇನುಕಾಂ ಯಮಂ
ಸರ್ವಂ ಪ್ರದಕ್ಷಿಣೀಕೃತ್ಯ ಬ್ರಾಹ್ಮಣಾಯ ನಿವೇದಯೇತ್ ॥
ಏವಂ ದದ್ಯಾದ್ವಿಧಾನೇನ ಯೋ ಗಾಂ ವೈತರಣೀಂ ಖಗ ।
ಸ ಯಾತಿ ಧರ್ಮಮಾರ್ಗೇಣ ಧರ್ಮರಾಜಸಭಾಂತರೇ ॥

ಯಮಲೋಕಕ್ಕೆ ದಕ್ಷಿಣ ದಿಕ್ಕಿನ ಮಾರ್ಗದಿಂದ ಪ್ರಯಾಣ ಮಾಡುವಾಗ ವೈತರಣೀ ನದೀ ಬರುತ್ತದೆ. ವಿತರಣೆ–ದಾನದಿಂದ ದಾಟಬಹುದಾದ

ನದಿಯಾದುದರಿಂದ ವೈತರಣೀ ಎಂದು ಹೆಸರು. ಭಯಂಕರ ಜಲಜಂತುಗಳಿಂದ ತುಂಬಿ ಕುದಿಯುತ್ತಿರುವ ರಕ್ತ ಕೀವು ಮಾಂಸ ಅಸ್ಥಿಗಳಿಂದ ತುಂಬಿರುವ ಈ ವೈತರಣೀ ನದಿ ಯಮಮಾರ್ಗದ ಮಧ್ಯದಲ್ಲಿ ಬರುತ್ತದೆ. ಮೃತನಾದ ವ್ಯಕ್ತಿ ಆರನೇ ತಿಂಗಳಿನಲ್ಲಿ ಈ ನದಿಯ ಬಳಿಗೆ ಬರುತ್ತಾನೆ. ದಡದಲ್ಲಿ ಅಂಬಿಗರು ದೋಣಿಗಳನ್ನು ಹಿಡಿದು ನಿಂತಿರುತ್ತಾರೆ. ಗೋದಾನ ಕೊಟ್ಟಿದ್ದರೆ ಅದರಲ್ಲಿ ಕೂಡಿಸಿ ನದಿಯನ್ನು ದಾಟಿಸುತ್ತಾರೆ. ಇಲ್ಲದಿದ್ದರೆ ಕುತ್ತಿಗೆಗೆ ಕೊಕ್ಕೆ ಸಿಕ್ಕಿಸಿ ಯಮದೂತರು ನಮ್ಮನ್ನು ನದಿಯಲ್ಲಿ ತೇಲಿಸಿ ಮುಳುಗಿಸುತ್ತಾ ತಾವು ಆಕಾಶ ಮಾರ್ಗದಿಂದ ಮುಂದೆ ನಡೆಯುತ್ತಾರೆ. ಅದಕ್ಕೆಂದೇ ಮೃತನ ಬಂಧುಗಳು ಆರನೇ ತಿಂಗಳಿಗೆ ಗೋದಾನ ಕೊಡುವುದು. ಮನುಷ್ಯ ಬದುಕಿ ಆರೋಗ್ಯವಾಗಿರುವಾಗಲೇ ಪುಣ್ಯದೇಶ–ಕಾಲಗಳಲ್ಲಿ ಮುಂದೆ ವೈತರಣಿಯನ್ನು ದಾಟಲು ತಾನೇ ಕೈಯ್ಯಾರೆ ಈ ದಾನವನ್ನು ಕೊಡಬಹುದು.

ವೈತರಣೀಗೋದಾನ ಕ್ರಮ

ಶಕ್ತಿಯಿದ್ದವರು ಗೋವನ್ನು ಯಥಾಶಕ್ತಿ ಅಲಂಕರಿಸಿ ದಾನ ಕೊಡಬೇಕು. ಬಂಗಾರದ ಕಿರೀಟವನ್ನು ಕೊಂಬಿಗೆ ಹಾಕಿ, ಬೆಳ್ಳಿಯ ಕವಚವನ್ನು ಗೊರಸಿಗೆ ಹಾಕಿ ಸಿಂಗರಿಸಬೇಕು. ಹಾಲು ಕರೆಯಲು ಕಂಚಿನ ಪಾತ್ರೆಯನ್ನು ಇಡಬೇಕು. ಎರಡು ಕಪ್ಪು ಬಟ್ಟೆಯನ್ನು ಹಸುವಿಗೆ ಹಾಕಬೇಕು. ಕಂಠದಲ್ಲಿ ಘಂಟೆಯನ್ನು ಹಾಕಬೇಕು. ಹತ್ತಿಯ ವಸ್ತ್ರದ ಮೇಲೆ ವಸ್ತ್ರಸಹಿತ ತಾಮ್ರಪಾತ್ರೆಯನ್ನು ಇಡಬೇಕು. ಕಲಶದಲ್ಲಿ ಬಂಗಾರದ ಯಮನ ಪ್ರತಿಮೆಯನ್ನು ಕಬ್ಬಿಣದ ಕೋಲುಸಹಿತವಾಗಿಡಬೇಕು. ಕಂಚಿನ ಪಾತ್ರೆಯಲ್ಲಿ ತುಪ್ಪವನ್ನು ತುಂಬಿಡಬೇಕು. ಅದರ ಮೇಲೆ ಯಮಪ್ರತಿಮೆಯನ್ನು ಇಡಬೇಕು.

ಕಬ್ಬಿನ ಜಲ್ಲೆಯಿಂದ ದೋಣಿಯಾಕಾರವನ್ನು ಮಾಡಬೇಕು. ರೇಷ್ಮೆನೂಲಿನಿಂದ ಅದನ್ನು ಸುತ್ತಬೇಕು. ನೆಲದಲ್ಲಿ ಹಳ್ಳ ಮಾಡಿ ಅದರಲ್ಲಿ ನೀರು ತುಂಬಿ ಅದರಲ್ಲಿ ಆ ಕಬ್ಬಿನ ದೋಣಿಯನ್ನಿಡಬೇಕು. ಅದರ ಮೇಲೆ ಒಂದು ಕಾಲಿಟ್ಟಿರುವಂತೆ ಹಸುವನ್ನು ನಿಲ್ಲಿಸಬೇಕು. ಶಾಸ್ತ್ರವಿಹಿತ ರೀತಿಯಲ್ಲಿ

ದಾನದ ಸಂಕಲ್ಪವನ್ನು ಮಾಡಬೇಕು. ಗಂಧಪುಷ್ಪಾಕ್ಷತೆಗಳಿಂದ ಪೂಜೆ ಮಾಡಿ ಹಸುವಿನ ಬಾಲವನ್ನು ಹಿಡಿದು ದೋಣಿಯಲ್ಲಿ ಒಂದು ಪಾದವನ್ನಿಟ್ಟು ಬ್ರಾಹ್ಮಣನನ್ನು ಮುಂದಿರಿಸಿ ದಾನದ ಮಂತ್ರ ಹೇಳಬೇಕು.

ಶೋಕ-ತಾಪಗಳೆಂಬ ಅಲೆಗಳಿಂದ ದುಃಖಗೊಂಡು ಭವಸಾಗರದಲ್ಲಿ ಮುಳುಗಿದವರಿಗೆ ಜಗನ್ನಾಥ! ಶರಣಾಗತವತ್ಸಲ! ನೀನೇ ರಕ್ಷಕ.

ವಿಷ್ಣುಪ್ರತೀಕನಾದ ಬ್ರಾಹ್ಮಣೋತ್ತಮನೇ! ನಿನಗೆ ನಮಸ್ಕಾರ. ದಕ್ಷಿಣೆ ಸಹಿತವಾಗಿ ನಿನಗೆ ಈ ವೈತರಣೀಗೋವನ್ನು ನೀಡುತ್ತಿದ್ದೇನೆ.

ಮಹಾಘೋರವಾದ ಯಮಮಾರ್ಗದ ನಡುವೆ ಬರುವ ವೈತರಣೀ ನದಿಯನ್ನು ದಾಟಲು ಬಯಸಿ ಈ ಮಂಗಲ ಗೋವನ್ನು ನಿನಗೆ ನೀಡುತ್ತಿದ್ದೇನೆ.

ವೈತರಣೀಧೇನುವೇ! ಯಮಮಾರ್ಗದ ದ್ವಾರದಲ್ಲಿ ವೈತರಣೀಯನ್ನು ದಾಟಿಸಲು ನನ್ನ ಪ್ರತೀಕ್ಷೆಯಲ್ಲಿ ನಿಂದಿರು. ನಿನಗೆ ನಮಸ್ಕಾರ

ನನ್ನ ಮುಂದೆ ಹಿಂದೆ ಎಲ್ಲೆಡೆ ಹಸುಗಳಿರಲಿ. ನನ್ನ ಹೃದಯದಲ್ಲಿಯೂ ಹಸುಗಳಿರಲಿ. ಹಸುಗಳ ನಡುವೆ ನಾನು ವಾಸ ಮಾಡುತ್ತೇನೆ.

ಎಲ್ಲ ಪ್ರಾಣಿಗಳಲ್ಲಿ ನೆಲೆಸಿರುವ, ದೇವರೊಂದಿಗೆ ಇರುವ ಲಕ್ಷ್ಮೀ ದೇವಿಯೂ ಗೋರೂಪದಿಂದ ಸನ್ನಿಹಿತಳಾಗಿ ನನ್ನ ಪಾಪವನ್ನು ಕಳೆಯಲಿ.

ಈ ಮಂತ್ರಗಳಿಂದ ಪ್ರಾರ್ಥಿಸಿ ಕೈ ಮುಗಿದು ಗೋವನ್ನು ಯಮಪ್ರತಿಮೆಯನ್ನು ಸೇರಿಸಿ ಪ್ರದಕ್ಷಿಣೆ ಬಂದು ಬ್ರಾಹ್ಮಣನಿಗೆ ಅರ್ಪಣೆ ಮಾಡಬೇಕು. ಹೀಗೆ ವಿಧಾನೋಕ್ತ ಮಾರ್ಗದಿಂದ ವೈತರಣೀಗೋವನ್ನು ದಾನ ನೀಡುವುದರಿಂದ ಯಮಮಾರ್ಗದಲ್ಲಿ ಬರುವ ವೈತರಣಿಯನ್ನು ದಾಟುವನು.

ಗಂಗಾದಿ ಪುಣ್ಯತೀರ್ಥಗಳಲ್ಲಿ, ಬ್ರಾಹ್ಮಣರ ತಪೋಭೂಮಿಗಳಲ್ಲಿ, ಚಂದ್ರ-ಸೂರ್ಯಗ್ರಹ ಕಾಲಗಳಲ್ಲಿ, ಸಂಕ್ರಮಣದಂದು, ಅಮಾವಾಸ್ಯೆ,

ಅಯನಪರ್ವಕಾಲ–ಕರ್ಕಾಟಕ ಹಾಗೂ ಮಕರ ಸಂಕ್ರಮಣಕಾಲ, ಹಗಲು–ರಾತ್ರಿಗಳು ಸಮಪ್ರಮಾಣದಲ್ಲಿರುವ ವಿಷುವ ಕಾಲ, ಮೇಷ, ತುಲಾ ಸಂಕ್ರಮಣಕಾಲ, ವ್ಯತೀಪಾತಯೋಗವಿರುವ ದಿನ, ಅಕ್ಷಯತೃತೀಯಾ, ಯುಗಾದಿತಿಥಿಗಳಲ್ಲಿ, ಇವಲ್ಲದೆ ಬೇರಾವ ಪುಣ್ಯಕಾಲಗಳಲ್ಲಿಯೂ ಈ ವೈತರಣೀ ಗೋದಾನವನ್ನು ನಾವು ಸ್ವಸ್ಥರಾಗಿರುವಾಗಲೇ ಮಾಡಬಹುದಾಗಿದೆ. ಶ್ರದ್ಧೆ ಬಂದಾಗಲೇ, ಪಾತ್ರ ದೊರೆತಾಗಲೇ ಪುಣ್ಯಕಾಲ. ಏಕೆಂದರೆ ಸಂಪತ್ತು, ಈ ಶರೀರ ಎಲ್ಲವೂ ಅಸ್ಥಿರ.

ಹದಿಮೂರು ಪದದಾನಗಳು

ಛತ್ರಿ, ಚಪ್ಪಲಿ, ವಸ್ತ್ರ, ಉಂಗುರ, ಕಮಂಡಲು, ಆಸನ, ಪಂಚಪಾತ್ರೆಗಳು, ದಂಡ, ತಾಮ್ರಪಾತ್ರೆ, ಆಹಾರಸಾಮಗ್ರಿಗಳು, ಅನ್ನ, ಅರ್ಘ್ಯ, ಯಜ್ಞೋಪವೀತ ಹೀಗೆ ಹದಿಮೂರು ಪದ ದಾನಗಳನ್ನು ಮರಣದ ಸಂದರ್ಭದಲ್ಲಿ ವೈಕುಂಠ ಸಮಾರಾಧನೆಯಂದು ಮಾಡಬೇಕು. ಅದೆಲ್ಲವೂ ಮೃತ ವ್ಯಕ್ತಿಯ ಯಮಮಾರ್ಗದ ಪ್ರಯಾಣದಲ್ಲಿ ಉಪಕಾರಕವಾಗುತ್ತದೆ.

ಛತ್ರಿದಾನದಿಂದ ಯಮಮಾರ್ಗದಲ್ಲಿ ಮೈ ಸುಡುವ ಉರಿಬಿಸಿಲಿನಲ್ಲಿ ಪ್ರಯಾಣ ಮಾಡುವಾಗ ಒಳ್ಳೆಯ ನೆರಳು ಅವನ ನೆತ್ತಿಯ ಮೇಲೆ ಸುಖ ನೀಡುತ್ತದೆ.

ಚಪ್ಪಲಿ ಕೊಡುವುದರಿಂದ ಮುಳ್ಳು, ಕಲ್ಲುಗಳಿಂದ ಸಂಕೀರ್ಣವಾದ ಯಮಮಾರ್ಗದಲ್ಲಿ ಅಶ್ವಾರೂಢನಾಗಿ ಸುಖವಾಗಿ ಪಯಣಿಸಬಹುದು.

ವಸ್ತ್ರದಾನದ ಪ್ರಭಾವದಿಂದ ಶೀತ, ಉಷ್ಣ, ವಾತಗಳ ದುಃಖವನ್ನು ಯಮಲೋಕದ ದಾರಿಯಲ್ಲಿ ಪರಿಹರಿಸಿಕೊಳ್ಳಬಹುದಾಗಿದೆ.

ಉಂಗುರದ ದಾನದಿಂದ ದಾರಿಯಲ್ಲಿ ಯಮದೂತರಿಂದ ಆಗುವ ಹಿಂಸೆಯಿಂದ ಪಾರಾಗಬಹುದು.

ಕಮಂಡಲುವಿನ ದಾನದಿಂದ ನೀರಿಲ್ಲದ ದಾರಿಯಲ್ಲಿ ಬೇಗೆಯಿಂದ ಬಾಯಾರಿದಾಗ ನೀರು ದೊರೆಯುತ್ತದೆ.

ನೀರು ತುಂಬಿದ ತಾಮ್ರದ ತಂಬಿಗೆಯ ದಾನದಿಂದ ಸಾವಿರಾರು ಅರವಟ್ಟಿಗೆಗಳ ದಾನದ ಪುಣ್ಯ ಲಭಿಸುತ್ತದೆ.

ಆಸನ, ಭೋಜನ ಕೊಡುವುದರಿಂದ ದಾರಿಯಲ್ಲಿ ಸುಖವಾಗಿ ಊಟ ಮಾಡಿಕೊಂಡು ಹೋಗುವನು

ಶಯ್ಯಾದಾನ

ಶಕ್ತಿಯಿದ್ದವರು ಒಳ್ಳೆ ಕೆತ್ತನೆಯ ಚಿತ್ತಾರಗಳುಳ್ಳ ರಮ್ಯವಾದ ಮರದ ಮಂಚವನ್ನು ರೇಷ್ಮೆಯ ನೂಲಿನಿಂದ ಅಲಂಕೃತವಾದ ಮೇಲ್ಹಾವಣಿಯಿಂದ ಅಲಂಕರಿಸಬೇಕು. ಮೆತ್ತನೆಯ ಹಾಸಿಗೆ, ಹಿತವಾದ ದಿಂಬು, ಶುಭ್ರವಾದ ಮೇಲುಹಾಸುವಸ್ತ್ರ, ಮೃದುವಾದ ಹೊದ್ದಿಕೆಗಳನ್ನಿಟ್ಟು ಸುಗಂಧ ಪುಷ್ಪಗಳಿಂದ ಅಲಂಕರಿಸಬೇಕು. ಹೀಗೆ ಸುಖಪ್ರದವಾದ ಹಾಸಿಗೆಯನ್ನು ನೆಲದ ಮೇಲಿಟ್ಟು ಬದಿಯಲ್ಲಿ ಛತ್ರಿ, ಬೆಳ್ಳಿಯ ದೀಪ, ಬೀಸಣಿಗೆ, ಚಾಮರ, ಆಸನ, ಭೋಜನಪಾತ್ರ, ಸುಂದರವಾದ ಕನ್ನಡಿ ಮುಂತಾದವನ್ನು ಇಡಬೇಕು. ಹಾಸಿಗೆಯಲ್ಲಿ ಆಭರಣ, ಆಯುಧಗಳಿಂದ ಕೂಡಿರುವ ಬಂಗಾರದ ಲಕ್ಷ್ಮೀನಾರಾಯಣ ಪ್ರತಿಮೆಯನ್ನು ಇಡಬೇಕು. ಸುಮಂಗಲಿಯರಿಗೆ ಮತ್ತೊಂದು ಹಾಸಿಗೆಯನ್ನು ಇಟ್ಟು, ಕಾಡಿಗೆ, ಬಾಚಣಿಗೆ, ಅರಿಶಿನ, ಕುಂಕುಮ, ಕನ್ನಡಿ, ವಸ್ತ್ರ, ಆಭರಣಗಳನ್ನು ಇಡಬೇಕು. ಸೀರೆ, ಕುಪ್ಪಸ, ಎರಡು ಪಂಚೆ, ಕಿವಿ, ಕೈಬೆರಳಿಗೆ ಆಭರಣಗಳನ್ನು, ಮಾಂಗಲ್ಯಸೂತ್ರಗಳನ್ನಿಡಬೇಕು. ಪುರುಷರಿಗೆ ಪೇಟ, ಶಲ್ಯಗಳನ್ನಿಡಬೇಕು. ದಂಪತಿಗಳನ್ನು ಹಾಸಿಗೆಯಲ್ಲಿ ಲಕ್ಷ್ಮೀನಾರಾಯಣ ಪ್ರತಿಮೆಯ ಮುಂದೆ ಕೂಡಿಸಿ ಕುಂಕುಮ, ಹೂವುಗಳಿಂದ ಲಕ್ಷ್ಮಿಯನ್ನು ಅರ್ಚನೆ ಮಾಡಬೇಕು. ಲೋಕಪಾಲಕರನ್ನು ಪೂಜೆ ಮಾಡಬೇಕು. ಗ್ರಹಗಳನ್ನು, ದೇವಿಯನ್ನು ಪೂಜಿಸಿ, ಗಣೇಶನನ್ನೂ ಪೂಜಿಸಬೇಕು. ಉತ್ತರದಿಕ್ಕಿಗೆ ಅಭಿಮುಖವಾಗಿ ಕೈಯಲ್ಲಿ ಹೂವು ಹಿಡಿದು ಬ್ರಾಹ್ಮಣನ ಮುಂದೆ ನಿಂತು –

ಯಥಾ ಕೃಷ್ಣ ತ್ವದೀಯಾಸ್ತಿ ಶಯ್ಯಾ ಕ್ಷೀರೋದಸಾಗರೇ ।
ತಥಾ ಭೂಯಾದಶೂನ್ಯೇಯಂ ಮಮ ಜನ್ಮನಿ ಜನ್ಮನಿ ॥

ಶ್ರೀ ಕೃಷ್ಣ! ಕ್ಷೀರ ಸಮುದ್ರದಲ್ಲಿ ನಿನ್ನ ಹಾಸಿಗೆ ಹೇಗೆ ಅಶೂನ್ಯವಾಗಿದೆಯೋ ಹಾಗೆ ಈ ಹಾಸಿಗೆಯೂ ಜನ್ಮ ಜನ್ಮದಲ್ಲಿಯೂ ನನ್ನ ಪಾಲಿಗೆ ಶೂನ್ಯವಾಗದಿರಲೆಂದು ಪ್ರಾರ್ಥಿಸಿ ದಾನ ಕೊಡಬೇಕು. ಲಕ್ಷ್ಮೀನಾರಾಯಣ, ವಿಪ್ರದಂಪತಿಗಳಿಗೆ ಪ್ರದಕ್ಷಿಣೆ ಬಂದು ನಮಸ್ಕಾರ ಮಾಡಬೇಕು. ಇದರಿಂದ ದಾನ ಕೊಟ್ಟವನು ಸ್ವರ್ಗಲೋಕದಲ್ಲಿ ಸುಖದಿಂದಿರುತ್ತಾನೆ.

ಈ ಶಯ್ಯಾದಾನವನ್ನು ನಾವು ಬದುಕಿರುವಾಗಲೇ ಕೈಯಾರೆ ಕೊಡಬಹುದು. ಈ ಶಯ್ಯಾದಾನವನ್ನು ಅದರ ಎಲ್ಲ ಪರಿಕರಗಳೊಂದಿಗೆ ಒಬ್ಬರಿಗೆ ದಾನ ಕೊಡಬೇಕು. ದಿಂಬು, ಹೊದ್ದಿಗೆ, ಛತ್ರ, ದೀಪ ಮೊದಲಾದ ಒಂದೊಂದನ್ನು ಬೇರೆ ಬೇರೆಯವರಿಗೆ ಕೊಡಬಾರದು.

ದಾನ ಮಂತ್ರಗಳು

ಭೂದಾನ–

ಸರ್ವೇಷಾಮಾಶ್ರಯಾ ಭೂಮಿಃ ವರಾಹೇಣ ಸಮುದ್ಧೃತಾ ।
ಅನಂತಸಸ್ಯಫಲದಾ ಹ್ಯತಃ ಶಾಂತಿಂ ಪ್ರಯಚ್ಛ ಮೇ ॥

ತಿಲದಾನ–

ತಿಲಾಃ ಪಾಪಹರಾಃ ನಿತ್ಯಂ ವಿಷ್ಣೋಃ ದೇಹಸಮುದ್ಭವಾಃ ।
ತಿಲದಾನಾಚ್ಚ ಮೇ ತಸ್ಮಾತ್ ಪಾಪಂ ನಾಶಯ ಕೇಶವ ॥

ಸುವರ್ಣದಾನ–

ಹಿರಣ್ಯಗರ್ಭಗರ್ಭಸ್ಥಂ ಹೇಮಬೀಜಂ ವಿಭಾವಸೋಃ ।
ಅನಂತಪುಣ್ಯಫಲದಂ ಅತಃ ಶಾಂತಿಂ ಪ್ರಯಚ್ಛ ಮೇ ॥

ಆಜ್ಯದಾನ–

ಕಾಮಧೇನೋಃ ಸಮುದ್ಭೂತಂ ಸರ್ವಕ್ರತುಷು ಸಂಸ್ಥಿತಮ್ ।
ದೇವಾನಾಮಾಜ್ಯಮಾಹಾರಃ ಅತಃ ಶಾಂತಿಂ ಪ್ರಯಚ್ಛ ಮೇ ॥

ವಸ್ತ್ರದಾನ–

ಶೀತವಾತೋಷ್ಣಸಂತ್ರಾಣಂ ಲಜ್ಜಾಯಾಃ ರಕ್ಷಣಂ ಪರಮ್ ।
ದೇಹಾಲಂಕರಣಂ ವಸ್ತ್ರಂ ಅತಃ ಶಾಂತಿಂ ಪ್ರಯಚ್ಛ ಮೇ ॥

ಧಾನ್ಯದಾನ–

ಧನ್ಯಂ ಕರೋತಿ ದಾತಾರಂ ಇಹ ಲೋಕೇ ಪರತ್ರ ಚ।
ಯಸ್ಮಾತ್ತ್ವಮುಚ್ಯತೇ ಧಾನ್ಯ ! ಅತಃ ಶಾಂತಿಂ ಪ್ರಯಚ್ಛ ಮೇ ॥

ಗುಡದಾನ–

ಗುಡಮಿಕ್ಷುರಸೋದ್ಭೂತಂ ಮಂತ್ರಾಣಾಂ ಪ್ರಣವೋ ಯಥಾ ।
ದಾನೇನಾನೇನ ಮೇ ತಸ್ಯ ಪರಾ ಲಕ್ಷ್ಮೀಃ ಸ್ಥಿರಾ ಗೃಹೇ ॥
ಪ್ರಣವಾದಿರ್ಹಿ ವೇದಾನಾಂ ನಾರೀಣಾಂ ಪಾರ್ವತೀ ಯಥಾ ।
ತಥಾ ರಸಾನಾಂ ಪ್ರವರಃ ಸದೈವೇಕ್ಷುರಸೋಽಮೃತಮ್ ।
ತಸ್ಮಾನ್ಮಮ ಪರಾಂ ಲಕ್ಷ್ಮೀಂ ಪ್ರಯಚ್ಛ ಗುಡ ಸರ್ವದಾ ॥

ರೂಪ್ಯದಾನ–

ಪ್ರೀತಿರ್ಯತಃ ಪಿತೃಣಾಂ ಚ ವಿಷ್ಣುಶಂಕರಯೋಃ ಸದಾ।
ಶಿವನೇತ್ರೋದ್ಭವಂ ರೂಪ್ಯಮತಃ ಶಾಂತಿಂ ಪ್ರಯಚ್ಛ ಮೇ॥

ಲವಣದಾನ–

ಯಸ್ಮಾದನ್ನರಸಾಃ ಸರ್ವೇ ನೋತ್ಕೃಷ್ಟಾ ಲವಣಂ ವಿನಾ ।
ಶಂಭೋಃ ಪ್ರೀತಿಕರಂ ಯಸ್ಮಾದ್ ಅತಃ ಶಾಂತಿಂ ಪ್ರಯಚ್ಛ ಮೇ ॥

ಸಾಲಗ್ರಾಮದಾನ–

ಮಹಾಕೋಶನಿವಾಸೇನ ಚಕ್ರಾದ್ಯೈರುಪಶೋಭಿತಮ್ ।
ಶಾಲಗ್ರಾಮಪ್ರದಾನೇನ ಮಮ ಸಂತು ಮನೋರಥಾಃ ॥

ಶಾಲಗ್ರಾಮಶಿಲಾಚಕ್ರಂ ಯೋ ದದ್ಯಾದ್ದಾನಮುತ್ತಮಮ್ ।
ಭೂ ಚಕ್ರಂ ತೇನ ದತ್ತಂ ಸ್ಯಾತ್ ಸಶೈಲವನಕಾನನಮ್ ॥

ಶಂಖದಾನ–

ಪುಣ್ಯಸ್ತ್ವಂ ಶಂಖ ಪುಣ್ಯಾನಾಂ ಮಂಗಲಾನಾಂ ಚ ಮಂಗಲಮ್ ।
ವಿಷ್ಣುನಾ ವಿಧೃತೋ ಯಸ್ಮಾತ್ ಅತಃ ಶಾಂತಿಂ ಪ್ರಯಚ್ಛ ಮೇ ॥

ಶಂಖಃ ಶುಭಕರೋ ನಿತ್ಯಂ ಸರ್ವಮಂಗಲದಾಯಕಃ ।
ತಸ್ಮಾದಸ್ಯ ಪ್ರದಾದೇನ ಶಾಂತಿರಸ್ತು ಸದಾ ಮಮ ॥

ಘಂಟಾದಾನ–

ಘಂಟಾ ದೇವಪ್ರಿಯಾ ನಿತ್ಯಂ ದೈತ್ಯತ್ರಾಸಕರೀ ಸದಾ ।
ಸಂಪ್ರದಾನೇನ ಚೈತಸ್ಯಾಃ ವಿಜಯೋಽಸ್ತು ಸದಾ ಮಮ ॥

ಸರ್ವವಾದ್ಯಮಯೀ ಘಂಟಾ ದೇವತಾಹ್ವಾನಕಾರಿಣೀ ।
ತಸ್ಮಾತ್ತವ ಪ್ರದಾನೇನ ಅತಃ ಶಾಂತಿಂ ಪ್ರಯಚ್ಛ ಮೇ ॥

ಗೋಪೀಚಂದನ ದಾನ–

ಗೋಪೀಚಂದನ ಪಾಪಘ್ನ ವಿಷ್ಣುದೇಹಸಮುದ್ಭವ ।
ಚಕ್ರಾಂಕಿತ ನಮಸ್ತುಭ್ಯಂ ಧಾರಣಾನ್ಮುಕ್ತಿದೋ ಭವ ॥

ಅಪಿ ಸರ್ಷಪಮಾತ್ರೇಣ ಗೋಪೀಚಂದನದಾನತಃ ।
ಮೇರುತುಲ್ಯಂ ಭವೇತ್ಪುಣ್ಯಂ ಪಿತೃಣಾಂ ಕುಲಸಪ್ತಕಮ್ ॥

ಜಲಕ್ರೀಡಾಸು ಗೋಪೀನಾಂ ದ್ವಾರವತ್ಯಾಂ ಜಲಾರ್ಪಿತಮ್ ।
ಗೋಪೀಚಂದನಮಿತ್ಯುಕ್ತಂ ಮುನೀಂದ್ರೈಃ ಕಲ್ಮಷಾಪಹಮ್ ॥
ತಸ್ಮಾದಸ್ಯ ಪ್ರದಾನೇನ ಮಮ ವಿಷ್ಣುಃ ಪ್ರಸೀದತು ॥

ಶರ್ಕರಾದಾನ– (ಕಲ್ಲುಸಕ್ಕರೆ, ಸಕ್ಕರೆ)

ಅಮೃತಸ್ಯ ಕುಲೋತ್ಪನ್ನಾ ಇಷವೋಽಪ್ಯಥ ಶರ್ಕರಾ ।
ಸೂರ್ಯಪ್ರೀತಿಕರಾ ನಿತ್ಯಮತಃ ಶಾಂತಿಂ ಪ್ರಯಚ್ಛ ಮೇ ॥
ಶರ್ಕರೇಕ್ಷುರಸೋದ್ಭೂತಾ ಸದಾ ಸ್ವಾದುಕರೀ ಪ್ರಿಯಾ ।
ದಾನೇನಾಸ್ಯಾಸ್ತು ಮೇ ನಿತ್ಯಂ ತುಷ್ಟಾಸ್ಸ್ಯುರ್ದ್ವಿಜದೇವತಾಃ ॥
ಶರ್ಕರಾ ಪುಷ್ಟಿದಾ ನಿತ್ಯಂ ಬಾಲಾನಾಂ ಪ್ರೀತಿದಾಯಿನೀ ।
ರಾಮಪ್ರೀತಿಕರೀ ಯಸ್ಮಾತ್ ಅತಃ ಶಾಂತಿಂ ಪ್ರಯಚ್ಛ ಮೇ ॥

ಮಧುದಾನ– (ಜೇನುತುಪ್ಪ)–

ಯಸ್ಮಾತ್ಪಿತೃಣಾಂ ಶ್ರಾದ್ಧೇಷು ಪೀತಂ ಮಧ್ವಮೃತೋದ್ಭವಮ್ ।
ಸದಾ ತಸ್ಯ ಪ್ರದಾನೇನ ಮೋಕ್ಷಃ ಸ್ಯಾದ್ ದುಃಖಸಾಗರಾತ್ ॥

ಕ್ಷೀರದಾನ–

ಶಿಶೂನಾಂ ಜೀವನಂ ಕ್ಷೀರಂ ಪಿತೃದೇವಪ್ರಿಯಂ ಸದಾ ।
ಕಾಂತಿದಂ ಪುಷ್ಟಿದಂ ನಿತ್ಯಂ ಅತಃ ಶಾಂತಿಂ ಪ್ರಯಚ್ಛ ಮೇ ॥
ಅಲಕ್ಷ್ಮೀಹರಣಂ ನಿತ್ಯಂ ಸರ್ವಸೌಭಾಗ್ಯವರ್ಧನಮ್ ।
ಕ್ಷೀರಂ ಮಂಗಲಮಾಯುಷ್ಯಮತಃ ಶಾಂತಿಂ ಪ್ರಯಚ್ಛ ಮೇ ॥

ದಧಿದಾನ–

ಕ್ಷೀರೇಣಾಮ್ಲಂ ಸಮುದ್ಭೂತಂ ದೇವರ್ಷಿಪಿತೃ ತೃಪ್ತಿದಮ್ ।
ದಧಿ ಸ್ಯಾನ್ಮೇಽಮೃತಂ ನಿತ್ಯಮತಃ ಶಾಂತಿಂ ಪ್ರಯಚ್ಛ ಮೇ ॥

ಶರಚ್ಚಂದ್ರಸಮಂ ಶುದ್ಧಂ ಶಿವಪ್ರೀತಿಕರಂ ದಧಿ ।
ಅಜೀರ್ಣನಾಶಕಂ ಚೈವ ತಸ್ಮಾತ್ ಪ್ರೀತಿಂ ಪ್ರಯಚ್ಛ ಮೇ ॥

ನವನೀತದಾನ–

ಕಾಮಧೇನೋಃ ಸಮುದ್ಭೂತಂ ವಿಷ್ಣೋಃ ಪ್ರೀತಿಕರಂ ಪರಮ್ ।
ನವನೀತಪ್ರದಾನೇನ ವಾಂಛಿತಂ ಚಾಸ್ತು ಮೇ ಸದಾ ॥

ತಕ್ರದಾನ–

ತಕ್ರಂ ದಧಿಸಮುದ್ಭೂತಂ ಪ್ರಾಣಿನಾಂ ತೃಪ್ತಿದಂ ಪರಮ್ ।
ಅತಸ್ತಸ್ಯ ಪ್ರದಾನೇನ ಶಾಂತಿರಸ್ತು ಸದಾ ಮಮ ॥

ಫಲದಾನ–

ಮನೋಹರಾಣಿ ರಮ್ಯಾಣಿ ನಿತ್ಯಂ ಸ್ವಾದುಕರಾಣಿ ಚ ।
ಫಲಾನಾಂ ಸಂಪ್ರದಾನೇನ ಮಮ ಸಂತು ಸುರಾಃ ಪ್ರಿಯಾಃ ॥

ಕೂಷ್ಮಾಂಡದಾನ–

ಬ್ರಹ್ಮಹತ್ಯಾದಿಪಾಪಘ್ನಂ ಬ್ರಹ್ಮಣಾ ನಿರ್ಮಿತಂ ಪುರಾ।
ಕೂಷ್ಮಾಂಡಂ ಬಹುಬೀಜಾಢ್ಯಂ ಪುತ್ರಪೌತ್ರಾದಿವೃದ್ಧಿದಮ್ ॥
ಮುಕ್ತಾ ಪ್ರವಾಲ ಹೇಮಾದಿ ಯುಕ್ತಂ ದತ್ತಂ ತವ ದ್ವಿಜ ।
ಅನಂತಪುಣ್ಯಫಲದಮ್ ಅತಃ ಶಾಂತಿಂ ಪ್ರಯಚ್ಛ ಮೇ ॥

ತಾಂಬೂಲದಾನ–

ಸೋಪಸ್ಕರಂ ಚ ತಾಂಬೂಲಂ ಸರ್ವದಾ ಮಂಗಲಪ್ರಿಯಮ್ ।
ಪ್ರಿಯಂ ಚೈವ ತು ದೇವಾನಾಂ ಸೌಗಂಧ್ಯಂ ವದನೇಽಸ್ತು ಮೇ॥

ಸೌಭಾಗ್ಯ ಶೂರ್ಪದಾನ– (ಮೊರದ ಬಾಗಿನದಾನ)

ಸಕಂಚುಕಂ ವಸ್ತ್ರಯುಗ್ಮಂ ತಥಾ ಕರ್ಣಾವತಂಸಕೈಃ ।
ಕಂಠಸೂತ್ರೈಶ್ಚ ಶೂರ್ಪಸ್ಯ ದಾನಾತ್ ಪಾತು ಶಿವಾ ಚ ಮಾಮ್ ॥

ಕರ್ಣಭೂಷಣದಾನ– (ಓಲೆಯ ದಾನ)

ಕರ್ಣಪತ್ರಂ ಸದಾ ಸ್ತ್ರೀಣಾಂ ಭೂಷಣಂ ಮಂಗಲಪ್ರದಮ್ ।
ದಾನೇನಾಸ್ಯ ಸುಖಂ ಶಾಂತಿಃ ಸೌಭಾಗ್ಯಂ ಚ ಸದಾऽಸ್ತು ಮೇ ॥

ಶಾಕದಾನ– (ತರಕಾರಿ)

ಶಾಕಂ ಶೋಕವಿನಾಶಾಯ ಪುತ್ರಪೌತ್ರಪ್ರವರ್ಧನಮ್ ।
ತಸ್ಮಾತ್ ಶಾಕಪ್ರದಾನೇನ ಪ್ರೀತೋ ಭವ ಜನಾರ್ದನ ॥

ಸತಿಲಗುಡಪಿಷ್ಟಗ್ರಾಸ ದಾನ– (ಎಳ್ಳು, ಬೆಲ್ಲ–ಮಕರಸಂಕ್ರಾಂತಿಯಂದು)

ಮಕರೇ ಕೇತುಸಂಪ್ರಾಪ್ತೇ ಗ್ರಾಸಾಸ್ತಿಲಗುಡೋದ್ವಿಜೇ ।
ದಾನೇನ ಪುತ್ರಸೌಭಾಗ್ಯಂ ಧನಧಾನ್ಯಂ ಸದಾऽಸ್ತು ಮೇ ॥

ವ್ಯಜನದಾನ (ಬೀಸಣಿಗೆ)–

ವ್ಯಜನಂ ವಾಯುದೈವತ್ಯಂ ಗ್ರೀಷ್ಮಕಾಲೇ ಸುಖಪ್ರದಮ್ ।
ಅಸ್ಯ ದಾನೇನ ವೈ ಶಾಂತಿಃ ಸರ್ವದಾऽಸ್ತು ಗೃಹೇ ಮಮ ॥

ಚೂತಫಲದಾನ (ಮಾವಿನ ಹಣ್ಣು)

ಚೂತಂ ಸ್ವಾದುಕರಂ ನಿತ್ಯಫಲಂ ದತ್ತಂ ಮನೋಹರಮ್ ।
ತೇನ ಮೇ ಸಫಲಾವಾಪ್ತಿಃ ಭವೇಜ್ಜನ್ಮನಿ ಜನ್ಮನಿ ॥

ಚಂದನಕಾಷ್ಠದಾನ– (ಗಂಧದ ಕಾಷ್ಠ)

ಕಾಷ್ಠಾನಾಮುತ್ತಮಂ ಶೈತ್ಯಂ ಸರ್ವಕಾಲೇ ಸುಖಪ್ರದಮ್ ।
ಅಸ್ಯ ದಾನೇನ ವೈ ಶಾಂತಿಃ ಸರ್ವದಾऽಸ್ತು ಗೃಹೇ ಮಮ ॥

ಪುಷ್ಪದಾನ–

ಮನೋಹರಾಣಿ ಪುಷ್ಪಾಣಿ ಸದಾ ದೇವಪ್ರಿಯಾಣಿ ಚ ।
ಅತಸ್ತಾನಿ ಪ್ರದಾಸ್ಯಾಮಿ ಶಾಂತಿರಸ್ತು ಸದಾ ಮಮ ॥

ಕುಂಕುಮದಾನ–

ಕುಂಕುಮಂ ಶೋಭನಂ ರಮ್ಯಂ ಸರ್ವಮಂಗಲದಾಯಕಮ್ ।
ದಾನೇನಾಸ್ಯ ಮಹತ್ ಸೌಖ್ಯಂ ಸೌಭಾಗ್ಯಂ ಸ್ಯಾತ್ ಸದಾ ಮಮ ॥

ಕಸ್ತೂರಿದಾನ–

ಕಸ್ತೂರೀ ಭೋಗದಾ ಭವ್ಯಾ ದೇವಮರ್ತ್ಯಜನಪ್ರಿಯಾ ।
ದಾನೇನಾಸ್ಯಾಃ ಸುಖಂ ಭೋಗಃ ಶಾಂತಿರಸ್ತು ಸದಾ ಮಮ ॥

ಕರ್ಪೂರದಾನ–

ಕರ್ಪೂರಂ ಶೀತಲಂ ಚಾರು ದೇವರ್ಷಿಗುರುಸೇವಿತಮ್ ।
ತಸ್ಮಾದಸ್ಯ ಪ್ರದಾನೇನ ಲಕ್ಷ್ಮೀಸ್ತಿಷ್ಠತು ಮದ್ಗೃಹೇ ॥

ಸುಗಂಧದ್ರವ್ಯದಾನ–

ಗಂಧೋ ಮನೋಹರೋ ದಿವ್ಯಃ ಶಾಂತಿದಃ ಸುಖದಸ್ತಥಾ ।
ತಸ್ಮಾದಸ್ಯ ಪ್ರದಾನೇನ ಸುಗಂಧಃ ಸ್ಯಾತ್ ಸದಾ ಮಮ ॥

ಪ್ರವಾಲದಾನ (ಹವಳ)

ಪ್ರವಾಲಂ ಪುಷ್ಟಿದಂ ಚೈವ ಕಾಂತಿದಂ ಶುಭದಂ ತಥಾ ।
ದಾನೇನಾಸ್ಯ ಮಹತ್ ಸೌಖ್ಯಂ ಶಾಂತಿರಸ್ತು ಸದಾ ಮಮ ॥

ಮೌಕ್ತಿಕದಾನ (ಮುತ್ತು)–

ಮೌಕ್ತಿಕಂ ಭೂಷಣಂ ವಿಷ್ಣೋಃ ಶ್ರಿಯೋ ಗೌರ್ಯಾಃ ಶಿವಸ್ಯ ಚ ।
ದಾನೇನಾಸ್ಯ ಸುಖಂ ಚಾಸ್ತು ಐಹಿಕಾಮುಷ್ಮಿಕಂ ಮಮ ॥

ರತ್ನದಾನ–

ಯಸ್ಮಾದ್ರತ್ನೇಷು ಸರ್ವೇಷು ಸರ್ವೇ ದೇವಾ ವ್ಯವಸ್ಥಿತಾಃ ।
ತಸ್ಮಾದ್ರತ್ನಪ್ರದಾನೇನ ವಾಂಛಿತಂ ಫಲಮಶ್ನುತೇ ॥

ಪುಸ್ತಕದಾನ–

ಸರಸ್ವತಿ ನಮಸ್ತುಭ್ಯಂ ಜಗಜ್ಜಾಡ್ಯಾಪಹಾರಿಣಿ ।
ಪುಸ್ತಕಂ ಸಂಪ್ರಯಚ್ಛಾಮಿ ಭಾರತಿಃ ಸ್ಯಾತ್ ಸದಾ ಮಮ ॥

ಗೃಹದಾನ–

ಇದಂ ಗೃಹಂ ಗೃಹಾಣ ತ್ವಂ ಸರ್ವೋಪಸ್ಕರಸಂಯುತಮ್ ।
ವಿಷ್ಣುಪ್ರೀತಿಕರಂ ದಾನಂ ಮಮ ಪಾಪಂ ವ್ಯಪೋಹತು ॥

ಚಕ್ರಾಂಕಿತದಾನ–

ಚಕ್ರಾಂಕಿತ! ನಮಸ್ತುಭ್ಯಂ ಸದಾ ದ್ವಾರವತೀಪ್ರಿಯ ।
ತಸ್ಮಾದಸ್ಯ ಪ್ರದಾನೇನ ಮಮಂ ಪಾಪಂ ವ್ಯಪೋಹತು ॥

ಕೃಷ್ಣಾಜಿನದಾನ–

ಕೃಷ್ಣಾಜಿನಂ ಚ ಮಹಿಷೀ ಮೇಷೀ ಚ ದಶಧೇನವಃ ।
ಬ್ರಹ್ಮಲೋಕಪ್ರದಾಯೀ ಸ್ಯಾತ್ ತುಲಾಪುರುಷ ಏವ ಚ ॥

ಇಕ್ಷುರಸದಾನ (ಕಬ್ಬಿನ ರಸ)–

ಪ್ರಣವಃ ಸರ್ವಮಂತ್ರಾಣಾಂ ನಾರೀಣಾಂ ಪಾರ್ವತೀ ಯಥಾ ।
ತಥಾ ರಸಾನಾಂ ಪ್ರವರಃ ಸದೈವ ಇಕ್ಷುರಸೋ ಮತಃ ॥

ರಜತಪಾತ್ರದಾನ– (ಬೆಳ್ಳಿಪಾತ್ರೆ)

ಕನ್ಯಾದೂಷಣತಃ ಪಾಪಂ ಪರದಾರಾಭಿಮರ್ಶನಾತ್ ।
ರೌಪ್ಯಪಾತ್ರಪ್ರದಾನೇನ ತಾನಿ ನಶ್ಯಂತು ಮೇ ಸದಾ ॥

ತಾಮ್ರಪಾತ್ರದಾನ–

ಅಥಾತಃ ಸಂಪ್ರವಕ್ಷ್ಯಾಮಿ ಪಾತ್ರದಾನಮನುತ್ತಮಮ್ ।
ಕೃತ್ವಾ ತಾಮ್ರಮಯಂ ಪಾತ್ರಂ ಯಥಾ ವಿಭವವಿಸ್ತರಮ್ ॥

ಸೂರ್ಯಪ್ರೀತಿಕರಂ ತಾಮ್ರಮಾರೋಗ್ಯಬಲವರ್ಧನಮ್ ।
ತಸ್ಮಾದಸ್ಯ ಪ್ರದಾನೇನ ಶಾಂತಿರಸ್ತು ಸದಾ ಮಮ ॥

ಕಾಂಸ್ಯಪಾತ್ರದಾನ– (ಕಂಚಿನ ಪಾತ್ರೆ)

ಕಾಂಸ್ಯೇ ಬ್ರಹ್ಮಶಿವೌ ಸಾಕ್ಷಾತ್ ಕಾಂಸ್ಯಮೇತದ್ವಿಭಾವಸುಃ ।
ಕಾಂಸ್ಯಂ ವಿಷ್ಣುಮಯಂ ಯಸ್ಮಾದತಃ ಶಾಂತಿಂ ಪ್ರಯಚ್ಛ ಮೇ ॥

ಲೋಹದಾನ (ಕಬ್ಬಿಣಪಾತ್ರೆ)

ಜ್ಞಾನಾಜ್ಞಾನಕೃತಂ ಪಾಪಂ ಮಯಾ ಲೋಭಾತ್ ಕೃತಂ ಚಿರಾತ್ ।
ಲೋಹಪಾತ್ರಪ್ರದಾನೇನ ತಾನಿ ನಶ್ಯಂತು ಮೇ ಸದಾ ॥

ಅಶ್ವದಾನ–

ಉಚ್ಚೈಃಶ್ರವಸಮಶ್ವಾನಾಂ ಯಜ್ಞೇ ವಿಜಯಕಾರಕಃ ।
ಶ್ರೀಸೂರ್ಯವಾಹನಂ ತಸ್ಮಾದತಃ ಶಾಂತಿಂ ಪ್ರಯಚ್ಛ ಮೇ ॥

ಗಜದಾನ–

ಐರಾವತಶ್ಚತುರ್ದಂತೋ ಗಜಾನಾಂ ನಾಯಕಸ್ತು ಯಃ ।
ದಿಗ್ದಂತಿನಾಂ ಪೂಜ್ಯತಮಃ ಪಾಪಂ ಕ್ಷಯತು ನಃ ಪ್ರಭುಃ ॥

ಪ್ರಪಾದಾನ–

ಪ್ರಪೇಯಂ ಸರ್ವಸಾಮಾನ್ಯ ಭೂತೇಭ್ಯಃ ಪ್ರತಿಪಾದಿತಾ ।
ಅಸ್ಯಾಃ ಪ್ರದಾನಾತ್ ಸಕಲಾ ಮಮ ಸಂತು ಮನೋರಥಾಃ ॥

ಕುಂಭದಾನ–

ಉದಕುಂಭೋ ಮಯಾ ದತ್ತೋ ಗ್ರಿಷ್ಮಕಾಲೇ ದಿನೇ ದಿನೇ ।
ಶೀತೋದಕಪ್ರದಾನೇನ ಪ್ರೀಯತಾಂ ಮಧುಸೂದನಃ ॥

ದೀಪದಾನ–

ದೇವಾಗಾರೇ ದ್ವಿಜಾಗಾರೇ ದೀಪಂ ದತ್ವಾ ಚತುಷ್ಪಥೇ ।
ಮೇಧಾವೀ ಜ್ಞಾನಸಂಪನ್ನಃ ಚಕ್ಷುಷ್ಮಾಂಶ್ಚ ಸದಾ ಭವೇತ್ ॥

ದೀಪದಾನಪ್ರದೋ ನಿತ್ಯಂ ದೇವತಾನಾಂ ಪ್ರಿಯಃ ಸದಾ ।
ದಾನೇನಾಸ್ಯಾಃ ಭವೇತ್ ಸೌಖ್ಯಂ ಶಾಂತಿರ್ಮೇ ವಾಂಛಿತಃ ಫಲಮ್ ॥

ಯಜ್ಞೋಪವೀತದಾನ–

ಯಜ್ಞೋಪವೀತದಾನೇನ ಜಾಯತೇ ಬ್ರಹ್ಮವರ್ಚಸಮ್ ।
ತಸ್ಮಾತ್ತಾನಿ ಪ್ರದೇಯಾನಿ ಬ್ರಾಹ್ಮಣೇಭ್ಯೋ ವಿಪಶ್ಚಿತಾ ॥

ಛತ್ರದಾನ–

ಇಹಾಮುತ್ರಾತಪತ್ರಾಣಂ ಕುರು ಮೇ ಕೇಶವ ಪ್ರಭೋ ।
ಛತ್ರಂ ತ್ವತ್ಪ್ರೀತಯೇ ದತ್ತಂ ಮಮಾಸ್ತು ಚ ಸದಾ ಶುಭಮ್ ॥

ಪರಮಾನ್ನದಾನ (ಪಾಯಸ)–

ಸುವರ್ಣಪಾತ್ರೇ ಸಂಪೂರ್ಯ ಪಾಯಸಂ ಸಘೃತಂ ತಥಾ ।
ಸಕ್ಷೀರಶರ್ಕರಾಯುಕ್ತಂ ಬ್ರಾಹ್ಮಣಾಯ ನಿವೇದಯೇತ್ ॥

ದರ್ಪಣದಾನ (ಕನ್ನಡಿ)–

ದರ್ಶನೇನ ತ್ವಮಾದರ್ಶ ನೃಣಾಂ ಮಂಗಲದಾಯಕಃ ।
ಸರ್ವಸೌಭಾಗ್ಯಸತ್ಕೀರ್ತೀ ನಿರ್ಮಲಂ ಜ್ಞಾನಮಸ್ತು ಮೇ ॥

ಉಪಾನಹದಾನ– (ಪಾದರಕ್ಷೆ)

ಉಪಾನಹೌ ಪ್ರದಾಸ್ಯಾಮಿ ಕಂಟಕಾದಿನಿವಾರಣೇ ।
ಸರ್ವಮಾರ್ಗೇಷು ಸುಖದೌ ಅತಃ ಶಾಂತಿಂ ಪ್ರಯಚ್ಛ ಮೇ ॥

ಊರ್ಣವಸ್ತ್ರದಾನ– (ಉಣ್ಣೆಯ ಬಟ್ಟೆ, ಕಂಬಳಿ, ಧಾವಳಿ)

ಊರ್ಣವಸ್ತ್ರಂ ಚಾರುಚಿತ್ರಂ ದೇವಾನಾಂ ಪ್ರೀತಿವರ್ಧನಮ್ ।
ಸುಖಸ್ಪರ್ಶಕರಂ ಯಸ್ಮಾದ್ ಅತಃ ಶಾಂತಿಂ ಪ್ರಯಚ್ಛ ಮೇ ॥

ತೈಲದಾನ–

ನರಾಣಾಂ ಮಂಗಲಾರ್ಥಾಯ ಬ್ರಹ್ಮಣಾ ನಿರ್ಮಿತಂ ಪುರಾ ।
ತೈಲದಾನೇನ ಮೇ ಪಾಪಂ ವಿಲಯಂ ಯಾಂತು ತತ್ ಸದಾ ॥

ಗೋಧೂಮದಾನ– (ಗೋಧಿ)

ಧಾನ್ಯಂ ಚೂಡಾಮಣಿಃ ಜಂಬೂದ್ವೀಪೇ ಗೋಧೂಮಸಂಜ್ಞಿತಮ್ ।
ಗಂಧವರ್ಧನದಂ ಸೌಮ್ಯಮತಃ ಶಾಂತಿಂ ಪ್ರಯಚ್ಛ ಮೇ ॥

ತಂಡುಲದಾನ– (ಅಕ್ಕಿ)

ಪ್ರಾಣಿನಾಂ ಜೀವನೋಪಾಯಾಃ ಸೋಮೇನಾರಾಧಿತಾಃ ಪುರಾ ।
ತಸ್ಮಾದೇಷಾಂ ಪ್ರದಾನೇನ ಶಾಂತಿರಸ್ತು ಸದಾ ಮಮ ॥

ಆಢಕದಾನ– (ತೊಗರಿ)

ಅಗ್ನಿಗರ್ಭೋದ್ಭವಾಃಖ್ಯಾತಾಃ ಆಯುರಾರೋಗ್ಯಪುಷ್ಟಿದಾಃ ।
ಆಢಕಾಃ ಸರ್ವಪಾಪಘ್ನಾಃ ತಸ್ಮಾತ್ ಶಾಂತಿಂ ಪ್ರಯಚ್ಛ ಮೇ ॥

ಮುದ್ಗದಾನ– (ಹೆಸರು)

ಮುದ್ಗಬೀಜಾನಿ ವೈ ಯಸ್ಮಾತ್ ಪ್ರಿಯಾಣಿ ಪರಮೇಷ್ಠಿನಃ ।
ತಸ್ಮಾದೇಷಾಂ ಪ್ರದಾನೇನ ಶುಭಾಃ ಸಿದ್ಧ್ಯಂತು ಮೇ ಸದಾ ॥

ಚಣಕದಾನ– (ಕಡಲೆ)

ಗೋವರ್ಧನಾಚಲೋದ್ಧಾರಸಮಯೇ ಹರಿರಕ್ಷಿತಾಃ (ಭಕ್ಷಿತಾಃ) ।
ಚಣಕಾಃ ಸರ್ವಪಾಪಘ್ನಾಃ ತಸ್ಮಾತ್ ಶಾಂತಿಂ ಪ್ರಯಚ್ಛ ಮೇ ॥

ಕುಲಸ್ಥದಾನ– (ಹುರುಳಿ)

ಅಗ್ನಿಗರ್ಭೋದ್ಭವಾ ಸೌಮ್ಯಾ ಬಲಾರೋಗ್ಯಯಶಃಪ್ರದಾಃ ।
ಕುಲಸ್ಥಾಃ ಸರ್ವಪಾಪಘ್ನಾಃ ಅತಃ ಶಾಂತಿಂ ಪ್ರಯಚ್ಛ ಮೇ ॥

ಚಿತ್ರವಸ್ತ್ರದಾನ–

ಷಣ್ಮುಖಸ್ಯ ಪ್ರಿಯಂ ನಿತ್ಯಂ ಚಿತ್ರವಸ್ತ್ರಂ ಮನೋಹರಮ್ ।
ತಸ್ಮಾದಸ್ಯ ಪ್ರದಾನೇನ ಪ್ರೀಯತಾಂ ಮಧುಸೂದನಃ ॥

ಹರಿದ್ರಾದಾನ– (ಅರಿಷಿಣ)

ಗೌರ್ಯಾಃ ಪ್ರೀತಿಕರಾ ನಿತ್ಯಂ ಹರಿದ್ರಾ ಸರ್ವಕಾಮದಾ ।
ತಸ್ಮಾದಸ್ಯಾಃ ಪ್ರದಾನೇನ ಸೌಭಾಗ್ಯಂ ಜನ್ಮಜನ್ಮನಿ ॥

ಮೃತ್ಯುಂಜಯಹೋಮದಲ್ಲಿ ದಾನ ಕೊಡಬೇಕಾದ ಏಳು ವಸ್ತುಗಳ ದಾನ ಮಂತ್ರಗಳು:

1. ತೈಲದಾನ– (ಸದ್ಯೋಜಾತ)
ಕಟಾಹಮೇತತ್ ತಿಲತೈಲಪೂರಿತಂ
ಸಮೃತ್ಯುರೂಪಂ ಚ ಸಧಾನ್ಯಪೀಠಕಮ್ ।
ಕಾಲ– ಅಪಮೃತ್ಯುದ್ವಯಮೋಚನಾಯ
ತುಭ್ಯಂ ಪ್ರದಾಸ್ಯಾಮಿ ವರ ಪ್ರಸೀದ ಭೋಃ ॥

ಲೋಹದಾನ– (ವಾಮದೇವ)

ಯಸ್ಮಾತ್ ಆಯಸಕರ್ಮಾಣಿ ತ್ವದಧೀನಾನಿ ಸರ್ವಶಃ ।
ಲಾಂಗಲಾದೀನಿ ಸರ್ವಾಣಿ ಅತಃ ಶಾಂತಿಂ ಪ್ರಯಚ್ಛ ಮೇ ॥

ಕಾರ್ಪಾಸದಾನ (ಅಘೋರ ರುದ್ರ) – (ಹತ್ತಿ)

ಕಾರ್ಪಾಸಂ ಮೃತ್ಯುದೈವತ್ಯಂ ಮೃತ್ಯುಪ್ರೀತಿಕರಂ ಶುಭಮ್ ।
ಯಸ್ಮಾತ್ ಅಸ್ಯ ಪ್ರದಾನೇನ ಅತಃ ಶಾಂತಿಂ ಪ್ರಯಚ್ಛ ಮೇ ॥

ಕೂಷ್ಮಾಂಡದಾನ– (ತತ್ಪುರುಷ)

ಕೂಷ್ಮಾಂಡಂ ಬಹುಬೀಜಾಢ್ಯಂ ಬ್ರಹ್ಮಣಾ ನಿರ್ಮಿತಂ ಪುರಾ ।
ಯಸ್ಮಾತ್ ಅಸ್ಯ ಪ್ರದಾನೇನ ಅತಃ ಶಾಂತಿಂ ಪ್ರಯಚ್ಛ ಮೇ ॥

ಲವಣದಾನ– (ಈಶಾನರುದ್ರ)

ಯಸ್ಮಾದನ್ನರಸಾಃ ಸರ್ವೇ ನೋತ್ಕೃಷ್ಟಾ ಲವಣಂ ವಿನಾ ।
ದದಾಮಿ ಶಿವತುಷ್ಟ್ಯರ್ಥಮ್ ಅತಃ ಶಾಂತಿಂ ಪ್ರಯಚ್ಛ ಮೇ ॥

(ಭಾಗ)– ಕಂಬಲದಾನ– (ತ್ರ್ಯಂಬಕ)

ಕಂಬಲಂ ಮೃತ್ಯುದೈವತ್ಯಂ ಶೀತವಾತನಿವಾರಣಮ್ ।
ತಸ್ಮಾದಸ್ಯ ಪ್ರದಾನೇನ ಮಮ ಪಾಪಂ ವ್ಯಪೋಹತು ॥

ತಿಲದಾನ– (ಮೃತ್ಯುಂಜಯ)

ತಿಲಾಃ ಕಾಶ್ಯಪಸಂಭೂತಾಃ ತಿಲಾಃ ಪಾಪಹರಾಃ ಶುಭಾಃ ।
ತಿಲದಾನೇನ ತುಷ್ಟಸ್ತು ಸ ಮೇ ಮೃತ್ಯುಃ ಪ್ರಸೀದತಾಮ್ ॥

ನವಗ್ರಹದಾನ ಮಂತ್ರಗಳು:

ಆಚಮ್ಯ, ಪ್ರಾಣಾನಾಯಮ್ಯ, ದೇಶ–ಕಾಲೌ ಸಂಕೀರ್ತ್ಯ, ಆದಿತ್ಯಾದಿ ನವಗ್ರಹಾಂತರ್ಗತ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀಲಕ್ಷ್ಮೀನೃಸಿಂಹ ಪ್ರೇರಣಯಾ ಶ್ರೀಲಕ್ಷ್ಮೀನೃಸಿಂಹ ಪ್ರೀತ್ಯರ್ಥಂ ಆದಿತ್ಯಾದಿ ನವಗ್ರಹಾಣಾಂ ತತ್ತದ್ಧಾನ್ಯ ದಾನಾತ್ಮಕಂ ಕರ್ಮ ಕರಿಷ್ಯೇ ।

ಆದಿತ್ಯಪ್ರೀತಯೇ ಗೋಧೂಮದಾನಮ್ (ಗೋಧಿ)

ಗೋಧೂಮಾಃ ಸರ್ವಜಂತೂನಾಂ ಬಲಪುಷ್ಟಿವಿವರ್ಧನಾಃ ।
ಮುಖ್ಯಾಶ್ಚ ಹವ್ಯಕವ್ಯೇಷು ತಸ್ಮಾಚ್ಛಾಂತಿಂ ಪ್ರಯಚ್ಛ ಮೇ ॥
ಗೋಧೂಮಾಃ ಸೂರ್ಯದೈವತ್ಯಾಃ ಸೂರ್ಯಪ್ರೀತಿಕರಾಃ ಸದಾ ।
ತಸ್ಮಾದೇಷಾಂ ಪ್ರದಾನೇನ ಸ ಮೇ ಸೂರ್ಯಃ ಪ್ರಸೀದತು ।

ಇದಂ ಸಹಿರಣ್ಯದಕ್ಷಿಣಾಕಂ ಸತಾಂಬೂಲಂ ಗೋಧೂಮದಾನಂ ಆದಿತ್ಯ ಗ್ರಹಪೀಡಾಪರಿಹಾರದ್ವಾರಾ ಆದಿತ್ಯಾಂತರ್ಗತ ಶ್ರೀಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀಲಕ್ಷ್ಮೀನೃಸಿಂಹಪ್ರೀತಿಂ ಕಾಮಯಮಾನಃ ತುಭ್ಯಮಹಂ ಸಂಪ್ರದದೇ ದತ್ತಂ । ನ ಮಮ ನ ಮಮ ॥ ಎಂದು ಹೇಳಿ ದಾನ ಕೊಡಬೇಕು.

ಅನೇನ ಸದಕ್ಷಿಣಾಕ ಸತಾಂಬೂಲಗೋಧೂಮದಾನೇನ ಆದಿತ್ಯಗ್ರಹ ಪ್ರೀಡಾಪರಿಹಾರದ್ವಾರಾ ಆದಿತ್ಯಾಂತರ್ಗತ ಭಾರತೀರಮಣ ಮುಖ್ಯ ಪ್ರಾಣಾಂತರ್ಗತ ಶ್ರೀಲಕ್ಷ್ಮೀನೃಸಿಂಹಃ ಸುಪ್ರೀತೋऽಸ್ತು ಇತಿ ಭವಂತೊ ಬ್ರುವಂತು ಎಂದು ಪ್ರಾರ್ಥನೆ ಮಾಡಬೇಕು.

ದಾನ ಪಡೆದವರು – ಆದಿತ್ಯಗ್ರಹಪ್ರೀಡಾಪರಿಹಾರದ್ವಾರಾ ಆದಿತ್ಯಾಂತರ್ಗತ ಶ್ರೀಭಾರತೀರಮಣಮುಖ್ಯಪ್ರಾಣಾಂತರ್ಗತಃ ಶ್ರೀಲಕ್ಷ್ಮೀನೃಸಿಂಹಃ ಸುಪ್ರೀತೋ ಅಸ್ತು ॥ ಎಂದು ಹೇಳಬೇಕು.

ಚಂದ್ರಪ್ರೀತಯೇ ತಂಡುಲದಾನಮ್ (ಅಕ್ಕಿ)

ವ್ರೀಹಿಜಾಸ್ತಂಡುಲಾಃ ಶುದ್ಧಾಃ ಪಿತೃದೇವದ್ವಿಜಪ್ರಿಯಾಃ ।
ತಸ್ಮಾದೇಷಾಂ ಪ್ರದಾನೇನ ಸರ್ವಕಾಮಾಶ್ಚ ಮೇ ಸದಾ ॥
ತಂಡುಲಾಶ್ಚಂದ್ರದೈವತ್ಯಾಃ ಚಂದ್ರಪ್ರೀತಿಕರಾಃ ಶುಭಾಃ ।
ತಸ್ಮಾದೇಷಾಂ ಪ್ರದಾನೇನ ಸ ಮೇ ಚಂದ್ರಃ ಪ್ರಸೀದತು ॥

ಯವಾಃ ಸಮಸ್ತಧಾನ್ಯಾನಾಂ ರಾಜಾನಃ ಪರಿಕೀರ್ತಿತಾಃ ।
ತಸ್ಮಾದೇಷಾಂ ಪ್ರದಾನೇನ ಮಮಾಸ್ತ್ವಭಿಮತಂ ಫಲಮ್ ॥

ಇದಂ ಸಹಿರಣ್ಯದಕ್ಷಿಣಾಕಂ ಸತಾಂಬೂಲಂ ತಂಡುಲ(ಯವ) ದಾನಂ

ಚಂದ್ರಗ್ರಹಪೀಡಾಪರಿಹಾರದ್ವಾರಾ ಚಂದ್ರಾಂತರ್ಗತ ಶ್ರೀಭಾರತೀರಮಣ ಮುಖ್ಯ ಪ್ರಾಣಾಂತರ್ಗತ ಶ್ರೀನೃಸಿಂಹಪ್ರೀತಿಂ ಕಾಮಯಮಾನಃ ತುಭ್ಯಮಹಂ ಸಂಪ್ರದದೇ । ದತ್ತಂ ನ ಮಮ ನ ಮಮ ॥

ಅನೇನ ಸದಕ್ಷಿಣಾಕ ಸತಾಂಬೂಲ ತಂಡುಲ (ಯವ) ದಾನೇನ ಚಂದ್ರಗ್ರಹಪೀಡಾ ಪರಿಹಾರದ್ವಾರಾ ಚಂದ್ರಾಂತರ್ಗತ ಶ್ರೀಭಾರತೀರಮಣಮುಖ್ಯ ಪ್ರಾಣಾಂತರ್ಗತ ಶ್ರೀಲಕ್ಷ್ಮೀನೃಸಿಂಹಃ ಸುಪ್ರೀತೋ ಅಸ್ತು ಇತಿ ಭವಂತೋ ಬ್ರುವಂತು ॥

ಬ್ರಾಹ್ಮಣರು– ಚಂದ್ರಗ್ರಹ ಪೀಡಾಪರಿಹಾರದ್ವಾರಾ ಚಂದ್ರಾಂತರ್ಗತ ಶ್ರೀಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀಲಕ್ಷ್ಮೀನೃಸಿಂಹಃ ಸುಪ್ರೀತೋ ಅಸ್ತು ॥

ಅಂಗಾರಕ ಪ್ರೀತಯೇ ಸಗುಡಾಢಕ (ಬೆಲ್ಲ–ತೊಗರಿ) ದಾನಮ್

ಅಗ್ನಿಗರ್ಭೋದ್ಭವಾಃ ಖ್ಯಾತಾಃ ಸರ್ವಮಂಗಲಕಾರಕಾಃ ।
ಆಢಕಾಃ ಸರ್ವಪಾಪಘ್ನಾಃ ತಸ್ಮಾಚ್ಛಾಂತಿಂ ಪ್ರಯಚ್ಛ ಮೇ ॥
ಆಢಕಾಃ ಭೌಮದೈವತ್ಯಾಃ ಭೌಮಪ್ರೀತಿಕರಾಃ ಶುಭಾಃ ।
ತಸ್ಮಾದೇಷಾಂ ಪ್ರದಾನೇನ ಸ ಮೇ ಭೌಮಃ ಪ್ರಸೀದತು ॥

ಇದಂ ಸಹಿರಣ್ಯದಕ್ಷಿಣಾಕಂ ಸತಾಂಬೂಲಂ ಸಗುಡಾಢಕದಾನಂ ಅಂಗಾರಕಗ್ರಹಾಂತರ್ಗತ ಶ್ರೀಭಾರತೀರಮಣ ಮುಖ್ಯ ಪ್ರಾಣಾಂತರ್ಗತ ಶ್ರೀಲಕ್ಷ್ಮೀನೃಸಿಂಹಪ್ರೀತಿಂ ಕಾಮಯಮಾನಃ ತುಭ್ಯಮಹಂ ಸಂಪ್ರದದೇ । ದತ್ತಂ ನ ಮಮ, ನ ಮಮ ॥

ಅನೇನ ಸದಕ್ಷಿಣಾಕಸತಾಂಬೂಲಸಗುಡಾಢಕದಾನೇನ ಅಂಗಾರಕಗ್ರಹಪೀಡಾ- ಪರಿಹಾರದ್ವಾರಾ ಅಂಗಾರಕಾಂತರ್ಗತ ಶ್ರೀಭಾರತೀರಮಣಮುಖ್ಯ ಪ್ರಾಣಾಂತರ್ಗತ ಶ್ರೀಲಕ್ಷ್ಮೀನೃಸಿಂಹಃ ಸುಪ್ರೀತೋ ಅಸ್ತು ಇತಿ ಭವಂತೋ ಬ್ರುವಂತು ।

ಬ್ರಾಹ್ಮಣ- ಅಂಗಾರಕಪೀಡಾಪರಿಹಾರದ್ವಾರಾ ಅಂಗಾರಕಾಂತರ್ಗತ ಶ್ರೀಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀಲಕ್ಷ್ಮೀನೃಸಿಂಹಃ ಸುಪ್ರೀತೋಽಸ್ತು॥

ಬುಧಪ್ರೀತಯೇ ಮುದ್ಗದಾನಮ್ (ಹೆಸರು)

ಮುದ್ಗಬೀಜಾನಿ ಶುದ್ಧಾನಿ ಪ್ರಿಯಾಣಿ ಪರಮೇಷ್ಠಿನಃ ।
ಯಸ್ಮಾದೇಷಾಂ ಪ್ರದಾನೇನ ಹ್ಯತಃ ಶಾಂತಿಂ ಪ್ರಯಚ್ಛ ಮೇ ॥
ಮುದ್ಗಾಶ್ಚ ಸೌಮ್ಯದೈವತ್ಯಾಃ ಸೌಮ್ಯ ಪ್ರೀತಿಕರಾಃ ಶುಭಾಃ ।
ತಸ್ಮಾದೇಷಾಂ ಪ್ರದಾನೇಸ ಸ ಮೇ ಸೌಮ್ಯಃ ಪ್ರಸೀದತು ॥

ಇದಂ ಸಹಿರಣ್ಯ ದಕ್ಷಿಣಾಕಂ ಸತಾಂಬೂಲಂ ಮುದ್ಗದಾನಂ ಬುಧಗ್ರಹ ಪೀಡಾ ಪರಿಹಾರದ್ವಾರಾ ಬುಧಗ್ರಹಾಂತರ್ಗತ ಶ್ರೀಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀಲಕ್ಷ್ಮೀನೃಸಿಂಹಪ್ರೀತಿಂ ಕಾಮಯಮಾನಃ ತುಭ್ಯಮಹಂ ಸಂಪ್ರದದೇ । ದತ್ತಂ ನ ಮಮ ನ ಮಮ ।

ಅನೇನ ಸದಕ್ಷಿಣಾಕ ಸತಾಂಬೂಲ ಮುದ್ಗದಾನೇನ ಬುಧಾಂತರ್ಗತ ಶ್ರೀಭಾರತೀರಮಣ ಮುಖ್ಯಪ್ರಾಣಾಂಗರ್ತತ ಶ್ರೀಲಕ್ಷ್ಮೀನೃಸಿಂಹಃ ಸುಪ್ರೀತೋಽಸ್ತು ಇತಿ ಭವಂತೋ ಬ್ರುವಂತು ।

ಬ್ರಾಹ್ಮಣ- ಬುಧಗ್ರಹಪೀಡಾ ಪರಿಹಾರದ್ವಾರಾ ಬುಧಾಂತರ್ಗತ ಶ್ರೀಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀಲಕ್ಷ್ಮೀನೃಸಿಂಹಃ ಸುಪ್ರೀತೋಽಸ್ತು॥

ಬೃಹಸ್ಪತಿಪ್ರೀತಯೇ ಚಣಕದಾನಮ್ (ಕಡಲೆ)

ಗೋವರ್ಧನಾಚಲೋದ್ಧಾರಸಮಯೇ ಹರಿರಕ್ಷಿತಾಃ (ಭಕ್ಷಿತಾಃ)
ಚಣಕಾಃ ಸರ್ವಪಾಪಘ್ನಾಃ ತಸ್ಮಾಚ್ಛಾಂತಿಂ ಪ್ರಯಚ್ಛ ಮೇ ॥
ಚಣಕಾಃ ಗುರುದೈವತ್ಯಾಃ ಗುರುಪ್ರಿಯಕರಾಃ ಶುಭಾಃ ।
ತಸ್ಮಾದೇಷಾಂ ಪ್ರದಾನೇನ ಸ ಮೇ ಜೀವಃ ಪ್ರಸೀದತು ॥

ಇದಂ ಸಹಿರಣ್ಯದಕ್ಷಿಣಾಕಂ ಸತಾಂಬೂಲಂ ಚಣಕದಾನಂ ಬೃಹಸ್ಪತಿಗ್ರಹ–ಪೀಡಾಪರಿಹಾರದ್ವಾರಾ ಬೃಹಸ್ಪತಿಗ್ರಹಾಂತರ್ಗತ ಶ್ರೀಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀಲಕ್ಷ್ಮೀನೃಸಿಂಹಪ್ರೀತಿಂ ಕಾಮಯಮಾನಃ ತುಭ್ಯಮಹಂ ಸಂಪ್ರದದೇ । ದತ್ತಂ ನ ಮಮ ನ ಮಮ।

ಅನೇನ ಸದಕ್ಷಿಣಾಕ ಸತಾಂಬೂಲ ಚಣಕದಾನೇನ ಬೃಹಸ್ಪತಿಗ್ರಹ ಪೀಡಾ ಪರಿಹಾರ ದ್ವಾರಾ ಬೃಹಸ್ಪತಿಗ್ರಹಾಂತರ್ಗತ ಶ್ರೀಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀಲಕ್ಷ್ಮೀನೃಸಿಂಹಃ ಸುಪ್ರೀತೋಽಸ್ತು ಇತಿ ಭವಂತೋ ಬ್ರುವಂತು ।

ಬ್ರಾಹ್ಮಣ – ಬೃಹಸ್ಪತಿಗ್ರಹಪೀಡಾ ಪರಿಹಾರದ್ವಾರಾ ಬೃಹಸ್ಪತಿ ಗ್ರಹಾಂತರ್ಗತ ಶ್ರೀಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀಲಕ್ಷ್ಮೀನೃಸಿಂಹಃ ಸುಪ್ರೀತೋಽಸ್ತು ।

ಶುಕ್ರಪ್ರೀತಯೇ ನಿಷ್ಪಾವದಾನಮ್ (ಅವರೆ)

ಜನ್ಮತ್ರಯಕೃತಂ ಪಾಪಂ ಅವಸ್ಥಾತ್ರಿತಯೇ ಕೃತಮ್ ।
ನಿಷ್ಪಾವಾಶ್ಚ ವಿನಾಶ್ಯಾಶು ಶಾಂತಿಂ ಯಚ್ಛಂತು ಮೇ ಸದಾ ॥
ನಿಷ್ಪಾವಾಃ ಶುಕ್ರದೈವತ್ಯಾಃ ಶುಕ್ರ ಪ್ರೀತಿಕರಾಃ ಶುಭಾಃ ।
ತಸ್ಮಾದೇಷಾಂ ಪ್ರದಾನೇನ ಸ ಮೇ ಶುಕ್ರಃ ಪ್ರಸೀದತು ॥

ಇದಂ ಸಹಿರಣ್ಯದಕ್ಷಿಣಾಕಂ ಸತಾಂಬೂಲಂ ನಿಷ್ಪಾವದಾನಂ ಶುಕ್ರಗ್ರಹಪೀಡಾ ಪರಿಹಾರ ದ್ವಾರಾ ಶುಕ್ರಗ್ರಹಾಂತರ್ಗತ ಶ್ರೀ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀಲಕ್ಷ್ಮೀನೃಸಿಂಹಪ್ರೀತಿಂ ಕಾಮಯಮಾನಃ ತುಭ್ಯಮಹಂ ಸಂಪ್ರದದೇ । ದತ್ತಂ ನ ಮಮ ನ ಮಮ ।

ಅನೇನ ಸದಕ್ಷಿಣಾಕ ಸತಾಂಬೂಲ ನಿಷ್ಪಾವದಾನೇನ ಶುಕ್ರಗ್ರಹ ಪೀಡಾ ಪರಿಹಾರದ್ವಾರಾ ಶುಕ್ರಗ್ರಹಾಂತರ್ಗತ ಶ್ರೀಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀಲಕ್ಷ್ಮೀನೃಸಿಂಹಃ ಸುಪ್ರೀತೋಽಸ್ತು ಇತಿ ಭವಂತೋ ಬ್ರುವಂತು ।

ಬ್ರಾಹ್ಮಣ – ಶುಕ್ರಗ್ರಹಪೀಡಾ ಪರಿಹಾರದ್ವಾರಾ ಶುಕ್ರಗ್ರಹಾಂತರ್ಗತ ಶ್ರೀಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀಲಕ್ಷ್ಮೀನೃಸಿಂಹಃ ಸುಪ್ರೀತೋಽಸ್ತು ॥

ಶನೈಶ್ಚರಪ್ರೀತಯೇ ತಿಲದಾನಮ್ (ಎಳ್ಳು)

ತಿಲಾಃ ಕಾಶ್ಯಪಸಂಭೂತಾಃ ತಿಲಾಃ ಪಾಪಹರಾಃ ಶುಭಾಃ ।
ತಿಲದಾನಪ್ರದಾನೇನ ಸ ಮೇ ಮಂದಃ ಪ್ರಸೀದತು ॥

ಇದಂ ಸಹಿರಣ್ಯದಕ್ಷಿಣಾಕಂ ಸತಾಂಬೂಲಂ ತಿಲದಾನಂ ಶನೈಶ್ಚರ ಗ್ರಹ ಪೀಡಾ ಪರಿಹಾರದ್ವಾರಾ ಶನೈಶ್ಚರಾಂತರ್ಗತ ಶ್ರೀಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀಲಕ್ಷ್ಮೀನೃಸಿಂಹ ಪ್ರೀತಿಂ ಕಾಮಯಮಾನಃ ತುಭ್ಯ ಮಹಂ ಸಂಪ್ರದದೇ । ದತ್ತಂ ನ ಮಮ ನ ಮಮ ॥

ಅನೇನ ಸದಕ್ಷಿಣಾಕಸತಾಂಬೂಲ ತಿಲದಾನೇನ ಶನೈಶ್ಚರಗ್ರಹಪೀಡಾ–ಪರಿಹಾರದ್ವಾರಾ ಶನೈಶ್ಚರಾಂತರ್ಗತ ಶ್ರೀಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀಲಕ್ಷ್ಮೀನೃಸಿಂಹಃ ಸುಪ್ರೀತಃ ಅಸ್ತು ಇತಿ ಭವಂತೋ ಬ್ರುವಂತು ।

ಬ್ರಾಹ್ಮಣ – ಶನೈಶ್ಚರಗ್ರಹ ಪೀಡಾಪರಿಹಾರದ್ವಾರಾ ಶನೈಶ್ಚರಾಂತರ್ಗತ

ಶ್ರೀಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀಲಕ್ಷ್ಮೀನೃಸಿಂಹಃ ಸುಪ್ರೀತೋಽಸ್ತು

ರಾಹುಪ್ರೀತಯೇ ಮಾಷದಾನಮ್ (ಉದ್ದು)

ಯಸ್ಮಾನ್ಮಧುವಧೇ ಕಾಲೇ ವಿಷ್ಣುದೇಹಸಮುದ್ಭವಾಃ ।
ಪಿತೃಣಾಂ ತೃಪ್ತಿದಾ ಮಾಷಾ ಅತಃ ಶಾಂತಿಂ ಪ್ರಯಚ್ಛ ಮೇ ॥
ಮಾಷಾಸ್ತು ರಾಹುದೈವತ್ಯಾಃ ರಾಹೋಃ ಪ್ರೀತಿಕರಾಃ ಶುಭಾಃ ।
ತಸ್ಮಾದೇಷಾಂ ಪ್ರದಾನೇನ ಸ ಮೇ ರಾಹುಃ ಪ್ರಸೀದತು ॥

ಇದಂ ಸಹಿರಣ್ಯ ದಕ್ಷಿಣಾಕಂ ಸತಾಂಬೂಲಂ ಮಾಷದಾನಂ ರಾಹುಗ್ರಹ ಪೀಡಾ ಪರಿಹಾರದ್ವಾರಾ ರಾಹು ಅಂತರ್ಗತ ಶ್ರೀಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀಲಕ್ಷ್ಮೀನೃಸಿಂಹಪ್ರೀತಿಂ ಕಾಮಯಮಾನಃ ತುಭ್ಯಮಹಂ ಸಂಪ್ರದದೇ । ದತ್ತಂ ನ ಮಮ ನ ಮಮ ।

ಅನೇನ ಸದಕ್ಷಿಣಾಕ ಸತಾಂಬೂಲ ಮುದ್ಗದಾನೇನ ರಾಹುಗ್ರಹಪೀಡಾ ಪರಿಹಾರದ್ವಾರಾ ರಾಹು ಅಂತರ್ಗತ ಶ್ರೀಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀಲಕ್ಷ್ಮೀನೃಸಿಂಹಃ ಸುಪ್ರೀತೋಽಸ್ತು ಇತಿ ಭವಂತೋ ಬ್ರುವಂತು ।

ಬ್ರಾಹ್ಮಣ – ರಾಹುಗ್ರಹಪೀಡಾ ಪರಿಹಾರದ್ವಾರಾ ರಾಹುಗ್ರಹ ಅಂತರ್ಗತ ಶ್ರೀಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀಲಕ್ಷ್ಮೀನೃಸಿಂಹಃ ಸುಪ್ರೀತೋಽಸ್ತು

ಕೇತುಪ್ರೀತಯೇ ಕುಲತ್ಥದಾನಮ್ (ಹುರಳಿ)

ಅಗ್ನಿದೇಹಸಮುದ್ಭೂತಾ ಬಲಪುಷ್ಟಿವಿವರ್ಧನಾಃ ।
ಕುಲತ್ಥಾಃ ಸರ್ವಪಾಪಘ್ನಾಃ ತಸ್ಮಾಚ್ಛಾಂತಿಂ ಪ್ರಯಚ್ಛ ಮೇ ॥
ಕುಲತ್ಥಾಃ ಕೇತುದೈವತ್ಯಾಃ ಕೇತುಪ್ರೀತಿಕರಾಃ ಸದಾ ।
ತಸ್ಮಾದೇಷಾಂ ಪ್ರದಾನೇನ ಸ ಮೇ ಕೇತುಃ ಪ್ರಸೀದತು ॥

ಇದಂ ಸಹಿರಣ್ಯ ದಕ್ಷಿಣಾಕಂ ಸತಾಂಬೂಲಂ ಕುಲತ್ಥದಾನಂ ಕೇತು ಗ್ರಹಪೀಡಾಪರಿಹಾರದ್ವಾರಾ ಕೇತು ಅಂತರ್ಗತ ಶ್ರೀಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀಲಕ್ಷ್ಮೀನೃಸಿಂಹಪ್ರೀತಿಂ ಕಾಮಯಮಾನಃ ತುಭ್ಯಂ ಸಂಪ್ರದದೇ । ದತ್ತಂ ನ ಮಮ ನ ಮಮ ॥

ಅನೇನ ಸದಕ್ಷಿಣಾಕ ಸತಾಂಬೂಲ ಕುಲತ್ಥದಾನೇನ ಕೇತುಗ್ರಹಪೀಡಾ ಪರಿಹಾರದ್ವಾರಾ ಕೇತು ಅಂತರ್ಗತ ಶ್ರೀ ಭಾರತೀರಮಣ ಮುಖ್ಯ ಪ್ರಾಣಾಂತರ್ಗತ ಶ್ರೀ ಲಕ್ಷ್ಮೀನೃಸಿಂಹಃ ಸುಪ್ರೀತೋಽಸ್ತು ಇತಿ ಭವಂತೋ ಬ್ರುವಂತು ।

ಬ್ರಾಹ್ಮಣ– ಕೇತುಗ್ರಹಪೀಡಾ ಪರಿಹಾರದ್ವಾರಾ ಕೇತು ಗ್ರಹಾಂತರ್ಗತ ಶ್ರೀಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀ ಲಕ್ಷ್ಮೀನೃಸಿಂಹಃ ಸುಪ್ರೀತೋಽಸ್ತು ॥

'ಸರ್ವೇಷಾಮೇವ ವರ್ಣಾನಾಂ ಬ್ರಾಹ್ಮಣಃ ಪರಮೋ ಗುರುಃ ।
ತಸ್ಮೈ ದಾನಾನಿ ದೇಯಾನಿ ದತ್ತಸ್ಯಾನಂತ್ಯಮಿಚ್ಛತಾ ॥
ಬ್ರಾಹ್ಮಣಃ ಪ್ರತಿಗೃಹ್ಣೀಯಾತ್ ಸರ್ವತೋ ಭಯವರ್ಜಿತಃ ।
ನ ಕದಾಪಿ ಕ್ಷತ್ರವಿಶೌ ಗೃಹ್ಣೀಯಾತಾಂ ಪ್ರತಿಗ್ರಹಮ್ ॥'
(ನಾರದೀಯಪುರಾಣ, ಅ–12 । ಶ್ಲೋ–2–3)

ಅಧ್ಯಾಪನವೆಂಬುದು ಬ್ರಾಹ್ಮಣರ ಮುಖ್ಯ ವೃತ್ತಿಯಾದುದರಿಂದ ಎಲ್ಲ ವರ್ಣದವರಿಗೂ ಮುಖ್ಯ ಗುರುಸ್ಥಾನೀಯನು ಬ್ರಾಹ್ಮಣ. ಹಾಗಾಗಿ ಎಲ್ಲರಿಗೂ ಉತ್ತಮನಾದುದರಿಂದ, ದಾನದ ಫಲವು ಅನಂತವಾಗಬೇಕಾದರೆ ದಾನಿಗಳು ಬ್ರಾಹ್ಮಣರಿಗೆ ದಾನ ಮಾಡಬೇಕು. ಬ್ರಾಹ್ಮಣನು ಯಾವುದೇ ಭಯವಿಲ್ಲದೇ ದಾನ ತೆಗೆದುಕೊಳ್ಳಬಹುದು. ಕ್ಷತ್ರಿಯ ಮತ್ತು ವೈಶ್ಯರು ಎಂದೂ ದಾನ ತೆಗೆದುಕೊಳ್ಳಬಾರದು. ಇನ್ನು ಇತರರಂತೂ ತೆಗೆದುಕೊಳ್ಳಲೇ ಬಾರದು ಎಂಬುದು ಕೈಮುತ್ಯ ಸಿದ್ಧ.

ಗೋದಾನವಿಧಿಃ

ಸಂಕಲ್ಪ–ಮಮ ಪಿತುಃ ಜನ್ಮಪ್ರಭೃತಿ ಅದ್ಯ ಯಾವತ್ ಆಚರಿತ–ಸಮಸ್ತ ಪಾತಕಸ್ಯ ಅಕೃತಪ್ರಾಯಶ್ಚಿತ್ತಸ್ಯ ಪರಿಹಾರಾರ್ಥಂ (ದೇಹಾಂತೇ ಶಾಶ್ವತ–ವಿಷ್ಣುಲೋಕಾವಾಪ್ತ್ಯರ್ಥಂ) ಜ್ಞಾನಾಜ್ಞಾನಕಾಮಾಕಾಮಸ್ಸಕೃದಸಕೃತ್–ಕಾಯಿಕವಾಚಿಕ ಸಾಂಸರ್ಗಿಕಮಾನಸಿಕ ಸ್ಪೃಷ್ಟಾಸ್ಪೃಷ್ಟಭುಕ್ತಾಭುಕ್ತ ಪೀತಾಪೀತ ಸಕಲ ಪಾತಕಾತಿಪಾತಕೋಪಪಾತಕ ಲಘುಪಾತಕ ಸಂಕಲೀಕರಣಮಲಿನೀ–ಕರಣಾಪಾತ್ರೀಕರಣ ಜಾತಿಭ್ರಂಶಕರಣ ಪ್ರಕೀರ್ಣಕ ಪಾತಕಾನಾಂ ಮಧ್ಯೇ ಸಂಭಾವಿತಾಶೇಷಪಾಪಕ್ಷಯಾರ್ಥಂ (**ವೈತರಣೀಗೋದಾನದಲ್ಲಿ** – ಪಿತುಃ ಭೂಲೋಕಾತ್ ಪಿತೃಲೋಕಗಮನಕಾಲೇ ಸುಖೇನ ಮಧ್ಯ ಮಾರ್ಗಸ್ಥಿತ ಮಹಾಘೋರವೈತರಣೀನದ್ಯುತ್ತಾರಣಾರ್ಥಂ) ಗವಾಂತರ್ಗತ ಶ್ರೀಗೋಪಾಲಕೃಷ್ಣ ಪ್ರೇರಣಯಾ ಶ್ರೀಗೋಪಾಲಕೃಷ್ಣ ಪ್ರೀತ್ಯರ್ಥಂ ಸಾಲಂಕೃತ ಗೋದಾನಂ ಕರಿಷ್ಯೇ ॥ ತದಂಗತ್ವೇನ ಗವಾಂತರ್ಗತ ಗೋಪಾಲ–ಕೃಷ್ಣಪೂಜಾಂ ಕರಿಷ್ಯೇ ॥

ಓಂ ಆ ಗಾವೋ ಅಗ್ಮನ್ನುತ ಭದ್ರಮಕ್ರನ್ ತ್ಸೀದಂತು ಗೋಷ್ಠೇ ರಣಯಂತ್ವಸ್ಮೇ। ಪ್ರಜಾವತೀಃ ಪುರುರೂಪಾ ಇಹ ಸ್ಯುರಿಂದ್ರಾಯ ಪೂರ್ವೀರುಷಸೋ ದುಹಾನಾಃ॥

ಪಂಚಗಾವಃ ಸಮುತ್ಪನ್ನಾಃ ಮಥ್ಯಮಾನೇ ಮಹೋದಧೌ ।
ತಾಸಾಂ ಮಧ್ಯೇ ತು ಯಾ ನಂದಾ ತಸ್ಯೈದೇವ್ಯೈ ನಮೋ ನಮಃ ॥

ನಮೋ ಗೋಭ್ಯಃ ಶ್ರೀಮತೀಭ್ಯಃ ಸೌರಭೇಯೀಭ್ಯ ಏವ ಚ ।
ನಮೋ ಬ್ರಹ್ಮಸೂತ್ರಾಭ್ಯಶ್ಚ ಪವಿತ್ರಾಭ್ಯೋ ನಮೋ ನಮಃ ॥
ಗವಾಮಂಗೇಷು ತಿಷ್ಠಂತಿ ಭುವನಾನಿ ಚತುರ್ದಶ ।
ಯಸ್ಮಾತ್ ತಸ್ಮಾತ್ ಶಿವಂ ಮೇ ಸ್ಯಾದಿಹ ಲೋಕೇ ಪರತ್ರ ಚ॥
ಗವಾಂತರ್ಗತ ಗೋಪಾಲಕೃಷ್ಣಾಯ ನಮಃ । ಧ್ಯಾನಂ ಸಮರ್ಪಯಾಮಿ

ಆವಾಹಯಾಮ್ಯಹಂ ದೇವೀಂ ಗಾಂ ತ್ವಾಂ ತ್ರೈಲೋಕ್ಯಮಾತರಮ್।
ಯಸ್ಯಾಃ ಸ್ಮರಣಮಾತ್ರೇಣ ಸರ್ವಪಾಪಪ್ರಣಾಶನಮ್ ॥
ತ್ವಂ ದೇವೀ ತ್ವಂ ಜಗನ್ಮಾತಾ ತ್ವಮೇವಾಸಿ ವಸುಂಧರಾ ।
ಗಾಯತ್ರೀ ತ್ವಂ ಚ ಸಾವಿತ್ರೀ ಗಂಗಾ ತ್ವಂ ಚ ಸರಸ್ವತೀ ।
ಆಗಚ್ಛ ದೇವಿ ಕಲ್ಯಾಣಿ ಶುಭಾಂ ಪೂಜಾಂ ಗೃಹಾಣ ಚ ॥
ವತ್ಸೇನ ಸಹಿತಾಂ ತ್ವಾಹಂ ದೇವೀಮಾವಾಹಯಾಮ್ಯಹಮ್ ॥

ಓಂ ಸುರಭ್ಯೈ ನಮಃ । ಸುರಭೀಮ್ ಆವಾಹಯಾಮಿ । ಆವಾಹನಾರ್ಥೇ ಅಕ್ಷತಾನ್ ಸಮರ್ಪಯಾಮಿ ॥ ಗವಾಂತರ್ಗತ ಶ್ರೀ ಗೋಪಾಲಕೃಷ್ಣಮ್ ಆವಾಹಯಾಮಿ ॥ ಶೃಂಗಮೂಲಯೋಃ ಬ್ರಹ್ಮವಿಷ್ಣುಭ್ಯಾಂ ನಮಃ । ಬ್ರಹ್ಮವಿಷ್ಣೂ ಆವಾಹಯಾಮಿ । ಅಗ್ರಯೋಃ ಸರ್ವತೀರ್ಥದೇವತಾಭ್ಯೋ ನಮಃ । ಸರ್ವದೇವತಾಃ ಆವಾಹಯಾಮಿ। ಶಿರೋಮಧ್ಯೇ ಶಿವಾಯ ನಮಃ। ಶಿವಮ್ ಆವಾಹಯಾಮಿ । ಲಲಾಟೇ ಮಹಾದೇವಾಯ ನಮಃ । ಮಹಾದೇವಮ್ ಆವಾಹಯಾಮಿ । ಲಲಾಟಾಗ್ರೇ ಮಹಾದೇವ್ಯೈ ನಮಃ । ಮಹಾದೇವೀಮಾವಾಹಯಾಮಿ । ನಾಸಿಕಾವಂಶೀ? ಷಣ್ಮುಖಾಯ ನಮಃ। ಷಣ್ಮುಖಮಾವಾಹಯಾಮಿ । ಅಶ್ವಿಭ್ಯಾಂ ನಮಃ । ಕರ್ಣಯೋಃ ನಾಸಿಕಾ ಪುಟಯೋಃ ಕಂಬಲಾಶ್ವತರಾಭ್ಯಾಂ ನಮಃ । ಕಂಬಲಾಶ್ವತರೌ ಆವಾಹಯಾಮಿ। ಅಶ್ವಿನೌ ಆವಾಹಯಾಮಿ । ಚಕ್ಷುಷೋಃ ಶಶಿಭಾಸ್ಕರಾಭ್ಯಾಂ ನಮಃ । ಶಶಿಭಾಸ್ಕರೌ ಆವಾಹಯಾಮಿ । ದಂತೇಷು ವಾಯವೇ ನಮಃ । ವಾಯುಮಾವಾಹಯಾಮಿ । ಜಿಹ್ವಾಯಾಂ ವರುಣಾಯ ನಮಃ । ವರುಣಮಾವಾಹಯಾಮಿ । ಹೂಂಕಾರೇ ಸರಸ್ವತ್ಯೈ ನಮಃ । ಸರಸ್ವತೀಮ್ ಆವಾಹಯಾಮಿ । ಗಂಡಯೋಃ ಯಮದಕ್ಷಾಭ್ಯಾಂ ನಮಃ (ಮಾಸಪಕ್ಷಾಭ್ಯಾಂ ನಮಃ ಮಾಸಪಕ್ಷೌ ಆವಾಹಯಾಮಿ) ಯಮದಕ್ಷೌ ಆವಾಹಯಾಮಿ । ಗಲೇ ವಿಷ್ಣವೇ ನಮಃ। ವಿಷ್ಣುಮಾವಾಹಯಾಮಿ । ಓಷ್ಠಯೋಃ ಸಂಧ್ಯಾದ್ವಯಾಯ ನಮಃ । ಸಂಧ್ಯಾದ್ವಯ ಮಾವಾಹಯಾಮಿ । ಗ್ರೀವಾಯಾಮ್ ಇಂದ್ರಾಯ ನಮಃ । ಇಂದ್ರಮ್ ಆವಾಹಯಾಮಿ । ಉರಸಿ ಸಾಧ್ಯೇಭ್ಯೋ ನಮಃ । ಸಾಧ್ಯಾನ್ ಆವಾಹಯಾಮಿ

। ಉದರೇ ಪೃಥಿವ್ಯೈ ನಮಃ । ಪೃಥಿವೀಮಾವಾಹಯಾಮಿ । ಕುಕ್ಷಿದೇಶೇ ರಕ್ಷೋಭ್ಯೋ ನಮಃ । ರಕ್ಷಾಂಸಿ ಆವಾಹಯಾಮಿ । ಊಧಸಿ ಸಾಧ್ಯೇಭ್ಯೋ ನಮಃ । ಸಾಧ್ಯಾನ್ ಆವಾಹಯಾಮಿ। ಪಯೋಧರೇಷು ಚತುಸ್ಸಾಗರೇಭ್ಯೋ ನಮಃ । ಚತುಸ್ಸಾಗರಾನ್ ಆವಾಹಯಾಮಿ। ಚತುಃಪಾದೇಷು ಧರ್ಮಜ್ಞಾನವೈರಾಗ್ಯೈಶ್ವರ್ಯೇಭ್ಯೋ ನಮಃ । ಧರ್ಮಜ್ಞಾನವೈರಾಗ್ಯೈಶ್ವರ್ಯಾನ್ ಆವಾಹಯಾಮಿ । ಜಂಘಯೋಃ ಧರ್ಮಾಯ ನಮಃ । ಧರ್ಮಮ್ ಆವಾಹಯಾಮಿ। ಖುರಮಧ್ಯೇ ಗಂಧರ್ವೇಭ್ಯೋ ನಮಃ । ಗಂಧರ್ವಾನ್ ಆವಾಹಯಾಮಿ । ಖುರಾಗ್ರೇಷು ಪನ್ನಗೇಭ್ಯೋ ನಮಃ । ಪನ್ನಗಾನ್ ಆವಾಹಯಾಮಿ । ಖುರಪಾರ್ಶ್ವೇಷು ಅಪ್ಸರೋಗಣೇಭ್ಯೋ ನಮಃ। ಅಪ್ಸರೋಗಣಾನ್ ಆವಾಹಯಾಮಿ । ಪೃಷ್ಠೇ ಏಕಾದಶ ರುದ್ರೇಭ್ಯೋ ನಮಃ। ಏಕಾದಶರುದ್ರಾನ್ ಆವಾಹಯಾಮಿ । ಲಾಂಗೂಲೇ ಸೋಮಾಯ ನಮಃ। ಸೋಮಮ್ ಆವಾಹಯಾಮಿ । ಸರ್ವಸಂಧಿಷು ವಸುಭ್ಯೋ ನಮಃ । ವಸೂನ್ ಆವಾಹಯಾಮಿ । ಶ್ರೋಣೀತಟೇ ಪಿತೃಭ್ಯೋ ನಮಃ । ಪಿತೃನ್ ಆವಾಹಯಾಮಿ । ಫಾಲೇ ಆದಿತ್ಯೇಭ್ಯೋ ನಮಃ । ಆದಿತ್ಯಾನ್ ಆವಾಹಯಾಮಿ । ಕೇಶೇಷು (ಗುಹ್ಯೇ) ಸೂರ್ಯರಶ್ಮಿಭ್ಯೋ ನಮಃ । ಸೂರ್ಯರಶ್ಮೀನ್ ಆವಾಹಯಾಮಿ । ಗೋಮೂತ್ರೇ ಗಂಗಾಯೈ ನಮಃ । ಗಂಗಾಮಾವಾಹಯಾಮಿ । ಗೋಮಯೇ ಯಮುನಾಯೈ ನಮಃ । ಯಮುನಾಮಾವಾಹಯಾಮಿ । ಕ್ಷೀರೇ ಸರಸ್ವತ್ಯೈ ನಮಃ । ಸರಸ್ವತೀಮಾವಾಹಯಾಮಿ । ದಧ್ನಿ ನರ್ಮದಾಯೈ ನಮಃ । ನರ್ಮದಾಮಾವಾಹಯಾಮಿ । ಘೃತೇ ಹುತಾಶನಾಯ ನಮಃ । ಹುತಾಶನಮಾವಾಹಯಾಮಿ। ರೋಮಸು ತ್ರಯಸ್ತ್ರಿಂಶತ್ ಕೋಟಿದೇವತಾಭ್ಯೋ ನಮಃ । ತ್ರಯಸ್ತ್ರಿಂಶತ್‌ಕೋಟಿದೇವತಾಃ ಆವಾಹಯಾಮಿ । ಸರ್ವಶರೀರೇ ಕಾಮಧೇನವೇ ನಮಃ । ಕಾಮಧೇನುಮಾವಾಹಯಾಮಿ । ಏವಂ ದೇವತಾ ಆವಾಹ್ಯ ಪಾದಾನ್ ಪ್ರಕ್ಷಾಲ್ಯ ಅಲಂಕುರ್ಯಾತ್॥

ಕುಂಕುಮಂ ಫಾಲೇ, ಶೃಂಗೇ ಸುವರ್ಣಂ, ಖುರೇ ರೌಪ್ಯಂ, ಪೃಷ್ಠೇ ತಾಮ್ರಂ, ಫಾಲೇ ಆದರ್ಶಂ, ನೇತ್ರಯೋಃ ರತ್ನದ್ವಯಂ, ಕಂಠೇ ಘಂಟಾಂ, ಪೃಷ್ಠೇ ಅಂಶುಕಂ, ಪುಚ್ಛೇ ಮುಕ್ತಾಫಲಾನಿ, ಪುಷ್ಪಮಾಲಾಂ ಚ ನಿಧಾಯ ಅಂಗಪೂಜಾಂ ಕುರ್ಯಾತ್॥

ಅಂಗಪೂಜಾ–

ಓಂ ನಂದಿನ್ಯೈ ನಮಃ। ಪಾದಾನ್ ಪೂಜಯಾಮಿ ॥ ಓಂ ಜಗದುತ್ಪತ್ತಿಕಾರಿಣ್ಯೈ ನಮಃ । ಜಾನೂನಿ ಪೂಜಯಾಮಿ ॥ ಓಂ ಶ್ರೀಮತ್ಯೈ ನಮಃ । ಕಂಠಂ ಪೂಜಯಾಮಿ॥ ಓಂ ಪವಿತ್ರಾಯೈ ನಮಃ । ಉದರಂ ಪೂಜಯಾಮಿ ॥ ಓಂ ಯಜ್ಞಸಾಧನಾಯೈ ನಮಃ । ಮುಖಂ ಪೂಜಯಾಮಿ ॥ ಓಂ ಅಘನಾಶಿನ್ಯೈ ನಮಃ । ಶಿರಃ ಪೂಜಯಾಮಿ॥ ಓಂ ಸರ್ವೇಶ್ವರ್ಯೈ ನಮಃ । ಸರ್ವಾಂಗಂ ಪೂಜಯಾಮಿ ॥

ಉಪಹ್ವಯೇ ದೀರ್ಘತಮಾ ಔಚತ್ಥ್ಯಃ ವಿಶ್ವೇದೇವಾಃ ತ್ರಿಷ್ಟುಪ್ ।

ಉಪಹ್ವಯೇ ಸುದುಘಾಂ ಧೇನುಮೇತಾಂ

ಸುಹಸ್ತೋ ಗೋಧುಗುತ ದೋಹದೇನಾಮ್ ।

ಶ್ರೇಷ್ಠಂ ಸವಂ ಸವಿತಾ ಸಾ ವಿಕ್ಷನ್ನೋಭೀದ್

ಧೋಘಮಾಸ್ತದುಷು ಪ್ರವೋಚಮ್ ॥

ನಾನಾ ರಕ್ತ ಸಮಾಯುಕ್ತಂ ಕಾರ್ತಸ್ವರವಿಭೂಷಿತಮ್ ।
ಆಸನಂ ತೇ ಮಯಾ ದತ್ತಂ ಗೃಹಾಣ ಜಗದಂಬಿಕೇ ॥
ಓಂ ಗವಾಂತರ್ಯಾಮಿ ಶ್ರೀಗೋಪಾಲಕೃಷ್ಣಾಯ ನಮಃ ।
ಆವಾಹಯಾಮಿ, ಆಸನಾರ್ಥೇ ಪುಷ್ಪಾಣಿ ಸಮರ್ಪಯಾಮಿ ॥

ಸೌರಭೇಯಿ ! ಸರ್ವಹಿತೇ ! ಪವಿತ್ರೇ ಪಾಪನಾಶಿನಿ ।
ಗೃಹ್ಣೀಷ್ವೇದಂ ಮಯಾ ದತ್ತಂ ಪಾದ್ಯಂ ತ್ರೈಲೋಕ್ಯವಂದಿತೇ ॥

ಪಾದ್ಯಂ ಸಮರ್ಪಯಾಮಿ । ಇತಿ ಪಾದಾನ್ ಪ್ರಕ್ಷಾಲ್ಯ ।

ದೇಹೇ ಸ್ಥಿತಾಽಸಿ ರುದ್ರಾಣಿ ಶಂಕರಸ್ಯ ಸದಾ ಪ್ರಿಯೇ ।
ಧೇನುರೂಪೇಣ ಸಾ ದೇವೀ ಮಮಂ ಪಾಪಂ ವ್ಯಪೋಹತು ॥

ಗವಾಂತರ್ಯಾಮಿ ಶ್ರೀಗೋಪಾಲಕೃಷ್ಣಾಯ ನಮಃ । ಅರ್ಘ್ಯಂ ಸಮರ್ಪಯಾಮಿ।

ಯಾ ಲಕ್ಷ್ಮೀಃ ಸರ್ವಭೂತೇಷು ಯಾ ಚ ದೇವೇಷ್ವವಸ್ಥಿತಾ ।
ಧೇನುರೂಪೇಣ ಸಾ ದೇವೀ ಮಮ ಪಾಪಂ ವ್ಯಪೋಹತು ॥

ಗವಾಂತರ್ಯಾಮಿ ಶ್ರೀಗೋಪಾಲಕೃಷ್ಣಾಯ ನಮಃ । ಆಚಮನೀಯಂ ಸಮರ್ಪಯಾಮಿ ।

ಸರ್ವದೇವಮಯೀ ಮಾತಃ ಸರ್ವದೇವನಮಸ್ಕೃತೇ ।
ತೋಯಮೇತತ್ ಸುಖಸ್ಪರ್ಶಂ ಸ್ನಾನಾರ್ಥಂ ಗೃಹ್ಣ ಧೇನುಕೇ ॥

ಗವಾಂತರ್ಯಾಮಿ ಶ್ರೀಗೋಪಾಲಕೃಷ್ಣಾಯ ನಮಃ। ಸ್ನಾನಂ ಸಮರ್ಪಯಾಮಿ।

ಯುವಾ ಸುವಾಸಾಃ ಪರಿವೀತ ಆಗಾತ್ ಸ ಉ ಶ್ರೇಯಾನ್ ಭವತಿ ಜಾಯಮಾನಃ।
ತಂ ಧೀರಾಸಃ ಕವಯ ಉನ್ನಯಂತಿ ಸ್ವಾಧ್ಯೋ3 ಮನಸಾ ದೇವಯಂತಃ॥

ಆಚ್ಛಾದನಂ ಗವೇ ದದ್ಯಾಂ ಸಮ್ಯಕ್ ರುದ್ಧಂ ಸುಶೋಭನಮ್ ।
ಸುರಭಿರ್ವಸ್ತ್ರದಾನೇನ ಪ್ರೀಯತಾಂ ಪರಮೇಶ್ವರೀ ॥
ಇತಿ ವಸ್ತ್ರಂ ಸಮರ್ಪಯಾಮಿ ।

ಸಕ್ತುಮಿವ ತಿತ ಉನಾ ಪುನಂತೋ ಯತ್ರ ಧೀರಾ ಮನಸಾ ವಾಚಮಕೃತ ।
ಅತ್ರಾ ಸಖಾಯಃ ಸಖ್ಯಾನಿ ಜಾನತೇ ಭದ್ರೈಷಾಂ ಲಕ್ಷ್ಮೀರ್ನಿಹಿತಾಧಿ ವಾಚಿ॥

ಇತಿ ಕುಂಕುಮಂ ಸಮರ್ಪಯಾಮಿ ।

ಗಂಧದ್ವಾರಾಂ ದುರಾಧರ್ಷಾಂ ನಿತ್ಯ ಪುಷ್ಟಾಂ ಕರಿಷಿಣೀಮ್ ।
ಈಶ್ವರೀಂ ಸರ್ವಭೂತಾನಾಂ ತಾಮಿಹೋಪಹ್ವಯೇ ಶ್ರಿಯಮ್ ॥

ಜಗನ್ಮಾತರ್ಜಗತ್ಪೂಜ್ಯೇ ಜಗದ್ಧಾತ್ರಿ ಜಗನ್ಮಯೇ ।
ಗಂಧಂ ಗೃಹಾಣ ಸುರಭಿ ಮಯಾ ದತ್ತಂ ಸುರಪ್ರಿಯೇ ॥

ಇತಿ ಗಂಧಂ ಸಮರ್ಪಯಾಮಿ ।

ಅಕ್ಷತಾಶ್ಚ ಸುರಶ್ರೇಷ್ಠ ಕುಂಕುಮಾಕ್ತಾಃ ಸುಶೋಭಿತಾಃ ।
ಮಯಾ ನಿವೇದಿತಾ ಭಕ್ತ್ಯಾ ಗೃಹಾಣ ಪರಮೇಶ್ವರೀ ॥

ಅಕ್ಷತಾನ್ ಸಮರ್ಪಯಾಮಿ ।

ಜಾತೀ ಕುಂಕುಮಸಂಯುಕ್ತಾನ್ ಕರವೀರಾದಿಭಿರ್ಯುತಾನ್ ।
ಅಕ್ಷತಾಂಶ್ಚ ಸುವರ್ಣಾಭಾನ್ ಗೃಹಾಣ ಸುರವಲ್ಲಭೇ ॥

ಪುಷ್ಪಾಕ್ಷತಾನ್ ಸಮರ್ಪಯಾಮಿ ।

ಆಯನೇತೇ ಸ್ತಂಭಮಿತ್ರಋುಷಿಃ ಅನುಷ್ಟುಪ್ ಅಗ್ನಿರ್ದೇವತಾ ।

ಓಂ ಆಯನೇತೇ ಪರಾಯಣೇ ದೂರ್ವಾ ರೋಹಂತು ಪುಷ್ಪಿಣೀಃ ।
ಹ್ರದಾಶ್ಚ ಪುಂಡರೀಕಾಣಿ ಸಮುದ್ರಸ್ಯ ಗೃಹಾ ಇಮೇ ॥

ಇತಿ ಪುಷ್ಪಮಾಲಾಂ ಸಮರ್ಪಯಾಮಿ ।

ಚಂದನಾಗರು ಕಸ್ತೂರಿ ಕರ್ಪೂರೇಣ ಸಮನ್ವಿತಃ ।
ಕಪಿಲಾಘೃತಸಂಯುಕ್ತೋ ಗೌರ್ಧೂಪಃಪ್ರತಿಗೃಹ್ಯತಾಮ್ ॥

ಧೂಪಮಾಘ್ರಾಪಯಾಮಿ ।

ಆನಂದಕೃತ್ ಸರ್ವಲೋಕೇ ದೇವಾನಾಂ ಚ ಸದಾ ಪ್ರಿಯೇ ।
ಗೌಸ್ತ್ವಂ ಹಿ ಜಗನ್ಮಾತಃ ದೀಪೋಽಯಂ ಪ್ರತಿಗೃಹ್ಯತಾಮ್ ॥

ದೀಪಂ ದರ್ಶಯಾಮಿ ।

ಓಂ ಹಿರಣ್ಯರೂಪಃ ಸಹಿರಣ್ಯ ಸಂದೃಗಪಾಂ ನ ಪಾತ್ಸೇದುಹಿರಣ್ಯವರ್ಣಃ।
ಹಿರಣ್ಯಯಾತ್ಪರಿಯೋನೇರ್ನಿಷದ್ಯಾ ಹಿರಣ್ಯದಾದದತ್ಯನ್ನಮಸ್ಮೈ ॥

ಇತಿ ಚತುಷ್ಪಾದೇಷು ಸುವರ್ಣದಕ್ಷಿಣಾಂ ಸಮರ್ಪಯಾಮಿ ।

ಗಾವೋ ಮೇ ಮಾತರಃ ಸರ್ವಾಃ ಪಿತರಶ್ಚಾಪಿ ಗೋವೃಷಾಃ ।
ಗ್ರಾಸಮುಷ್ಟಿಪ್ರದಾನೇನ ಸ ಮೇ ವಿಷ್ಣುಃ ಪ್ರಸೀದತು ॥

ಸೌರಭೇಯ್ಯಃ ಸರ್ವಹಿತಾಃ ಪವಿತ್ರಾಃ ಪುಣ್ಯರಾಶಯಃ ।
ಪ್ರತಿಗೃಹ್ಣಂತ್ವಿಮಂ ಗ್ರಾಸಂ ಗಾವಸ್ತ್ರೈಲೋಕ್ಯಮಾತರಃ ॥

ಇತಿ ನೈವೇದ್ಯಾರ್ಥೇ ಗೋಗ್ರಾಸಂ ತೃಣಫಲಾದಿಕಂ ಸಮರ್ಪಯಾಮಿ । ಇತಿ ಸರ್ವೋಪಚಾರಪೂಜಾಃ ಸಮರ್ಪ್ಯ ।

ಗೋಭ್ಯೋ ಯಜ್ಞಾಃ ಪ್ರವರ್ತಂತೇ ಗೋಭ್ಯೋ ದೇವಾಃ ಸಮುತ್ಥಿತಾಃ ।
ಗೋಭ್ಯೋ ವೇದಾಃ ಸಮುತ್ತಿಷ್ಠನ್ ಸಷಡಂಗ ಪದಕ್ರಮಾಃ ॥

ಮಂತ್ರಪುಷ್ಪಾಂಜಲಿಂ ಸಮರ್ಪಯಾಮಿ ॥

ಗವಾಮಂಗೇಷು ತಿಷ್ಠಂತಿ ಭುವನಾನಿ ಚತುರ್ದಶ ।
ಯಸ್ಮಾತ್ ತಸ್ಮಾತ್ ಶಿವಂ ಮೇ ಸ್ಯಾತ್ ಇಹ ಲೋಕೇ ಪರತ್ರ ಚ ॥

'ಆಗಾವೋ ಆಗ್ಮನ್' ಇತಿ ಮಂತ್ರೇಣ ತ್ರಿಃ ಪ್ರದಕ್ಷಿಣೀಕೃತ್ಯ ಪ್ರಾರ್ಥಯೇತ್।

ಗೋಸೂಕ್ತಮ್

ಆಗಾವೋ ಅಗ್ಮನ್ನುತ ಭದ್ರಮಕ್ರನ್ । ಸೀದಂತು ಗೋಷ್ಠೇ ರಣಯಂತ್ವಸ್ಮೇ । ಪ್ರಜಾವತೀಃ ಪುರುರೂಪಾ ಇಹಸ್ಯುಃ । ಇಂದ್ರಾಯ ಪೂರ್ವೀರುಷಸೋ ದುಹಾನಾಃ।

ಇಂದ್ರೋ ಯಜ್ವನೇ ಪೃಣತೇ ಚ ಶಿಕ್ಷತಿ । ಉಪೇದ್ದದಾತಿ ನ ಸ್ವಂಮುಷಾಯತಿ।

ಭೂಯೋ ಭೂಯೋ ರಯಿಮಿದಸ್ಯ ವರ್ಧಯನ್ ।
ಅಭಿನ್ನೇ ಖಿಲ್ಯೇ ನಿದಧಾತಿ ದೇವಯುಮ್ ।
ನ ತಾ ನಶಂತಿ ನದ ಭಾತಿ ತಸ್ಕರಃ । ನಾಸಾಮಾಮಿತ್ರೋ ವ್ಯಥಿರಾದಧರ್ಷತಿ ।
ದೇವಾಂಶ್ಚ ಯಾಭಿರ್ಯಜತೇ ದದಾತಿ ಚ ।
ಜ್ಯೋಗಿತ್ತಾಭಿಃ ಚ ತೇ ಗೋಪತಿಸ್ಸಹ ।
ನ ತಾ ಅರ್ವಾರೇಣುಕಕಾಟೋ ಅಶ್ನುತೇ । ನಸಂಸ್ಕೃತತ್ರಮುಪಯಂತಿ ತಾ ಅಭಿ।
ಉರುಗಾಯಮಭಯಂ ತಸ್ಯ ತಾ ಅನು। ಗಾವೋ ಮರ್ತಸ್ಯ ವಿಚರಂತಿ ಯಜ್ವನಃ।
ಗಾವೋ ಭಗೋ ಗಾವ ಇಂದ್ರೋ ಮೇ ಅಚ್ಛಾತ್ ।
ಗಾವಸ್ಸೋಮಸ್ಯ ಪ್ರಥಮಸ್ಯ ಭಕ್ಷಃ ।
ಇಮಾ ಯಾ ಗಾವಃ ಸ ಜನಾ ಸ ಇಂದ್ರಃ ।
ಇಚ್ಛಾಮೀದ್ಧೃದಾ ಮನಸಾ ಚಿದಿಂದ್ರಮ್ ।
ಯೂಯಂ ಗಾವೋ ಮೇದಯಥಾ ಕೃಶಂಚಿತ್ ।
ಅಶ್ರೀಲಂ ಚಿತ್ಕೃಣುಥಾ ಸುಪ್ರತೀಕಮ್ ।
ಭದ್ರಂ ಗೃಹಂ ಕೃಣುಥ ಭದ್ರವಾಚಃ । ಬೃಹದ್ವೋ ವಯ ಉಚ್ಯತೇ ಸಭಾಸು ।
ಪ್ರಜಾವತೀಃ ಸೂಯವಸಂ ರಿಶಂತೀಃ । ಶುದ್ಧಾ ಅಪಃ ಸುಪ್ರಪಾಣೇ ಪಿಬಂತೀಃ।
ಮಾವಸ್ತೇನ ಈಶತ ಮಾಽಘಶಂಸಃ। ಪರಿವೋ ಹೇತೀ ರುದ್ರಸ್ಯ ವೃಜ್ಯಾಃ ।
ಉಪೇದಮುಪ ಪರ್ಚನಮ್ । ಆಸು ಗೋಷೂಪಪೃಚ್ಯತಾಮ್ ।
ಉಪಷಭಸ್ಯ ರೇತಸಿ । ಉಪೇಂದ್ರ ತವ ವೀರ್ಯೇ ॥–(ಋ.ಮಂ.6, ಸೂ.28)

ಯಾ ಲಕ್ಷ್ಮೀಃ ಸರ್ವಭೂತಾನಾಂ ಯಾ ಚ ದೇವೇಷ್ವವಸ್ಥಿತಾ ।
ಧೇನುರೂಪೇಣ ದೇವೀ ಮಮ ಪಾಪಂ ವ್ಯಪೋಹತು ॥

ದೇಹಸ್ಥಾ ಯಾ ಚ ರುದ್ರಾಣೀ ಶಂಕರಸ್ಯ ಪ್ರಿಯಾ ಸದಾ ।
ಧೇನುರೂಪೇಣ ಸಾ ದೇವೀ ಮಮ ಪಾಪಂ ವ್ಯಪೋಹತು ॥

ವಿಷ್ಣೋರ್ವಕ್ಷಸಿ ಯಾ ಲಕ್ಷ್ಮೀಃ ಸ್ವಾಹಾ ಯಾ ಚ ವಿಭಾವಸೋಃ ।
ಚಂದ್ರಾರ್ಕಶಕ್ರಶಕ್ತಿರ್ಯಾ ಧೇನುರೂಪಾಸ್ತು ಸಾ ಪ್ರಿಯಾ ॥

ಚತುರ್ಮುಖಸ್ಯ ಯಾ ಲಕ್ಷ್ಮೀಃ ಯಾ ಲಕ್ಷ್ಮೀರ್ಧನದಸ್ಯ ಚ ।
ಲಕ್ಷ್ಮೀರ್ಯಾ ಲೋಕಪಾಲಾನಾಂ ಸಾ ಧೇನುರ್ವರದಾಽಸ್ತು ಮೇ ॥

ಸ್ವಧಾ ತ್ವಂ ಪಿತೃರೂಪಾಣಾಂ ಸ್ವಾಹಾ ಯಜ್ಞಭುಜಾಂ ತಥಾ ।
ಸರ್ವಪಾಪಹರಾ ಧೇನುಃ ತಸ್ಮಾಚ್ಛಾಂತಿಂ ಪ್ರಯಚ್ಛ ಮೇ ॥

ಇತಿ ಗಾಂ ಪ್ರದಕ್ಷಿಣೀಕೃತ್ಯ ನಮಸ್ಕೃತ್ಯ ಪ್ರಾರ್ಥಯೇತ್

ನಮೋ ಗೋಭ್ಯಃ ಶ್ರೀಮತೀಭ್ಯಃ ಸೌರಭೇಯೀಭ್ಯ ಏವ ಚ ।
ನಮೋ ಬ್ರಹ್ಮಸುತಾಭ್ಯಶ್ಚ ಪವಿತ್ರಾಭ್ಯೋ ನಮೋ ನಮಃ ॥

ತತಃ ಗೋಪುಚ್ಛಭಾಗೇ ಸ್ಥಿತ್ವಾ ಸಂಕಲ್ಪ್ಯ ದೇವಾನ್ ತರ್ಪಯೇತ್ ॥

ಬ್ರಹ್ಮಾ ತೃಪ್ಯತು । ವಿಷ್ಣುಸ್ತೃಪ್ಯತು । ರುದ್ರಸ್ತೃಪ್ಯತು । ರಾಕಾದ್ಯಾ ದೇವತಾಸ್ತೃಪ್ಯಂತು। ಮನವಸ್ತೃಪ್ಯಂತು । ಋಷಯಸ್ತೃಪ್ಯಂತು। ರುದ್ರಾಸ್ತೃಪ್ಯಂತು। ದಿತಿಜಾಸ್ತೃಪ್ಯಂತು । ಸಾಧ್ಯಾಸ್ತೃಪ್ಯಂತು । ಮರುದ್ಗಣಾಸ್ತೃಪ್ಯಂತು । ಗ್ರಹಾಸ್ತೃಪ್ಯಂತು। ನಕ್ಷತ್ರಾಣಿ ತೃಪ್ಯಂತು । ಯೋಗಾಸ್ತೃಪ್ಯಂತು । ರಾಶಯಸ್ತೃಪ್ಯಂತು । ವಸುಧಾ ತೃಪ್ಯತು । ಅಶ್ವಿನೌ ತೃಪ್ಯೇತಾಮ್। ಯಕ್ಷಾಸ್ತೃಪ್ಯಂತು । ರಕ್ಷಾಂಸಿ ತೃಪ್ಯಂತು । ಮಾತರಸ್ತೃಪ್ಯಂತು । ದೇವಮಾತರಸ್ತೃಪ್ಯಂತು। ಶ್ರೀಸ್ತೃಪ್ಯತು । ರುದ್ರಾಣೀ ತೃಪ್ಯತು। ಪಿಶಾಚಾಸ್ತೃಪ್ಯಂತು । ಸುಪರ್ಣಾಸ್ತೃಪ್ಯಂತು । ಪಶವಸ್ತೃಪ್ಯಂತು । ದಾನವಾಸ್ತೃಪ್ಯಂತು। ದೈತ್ಯಾಸ್ತೃಪ್ಯಂತು । ಯೋಗಿನಸ್ತೃಪ್ಯಂತು । ವಿದ್ಯಾಧರಾಸ್ತೃಪ್ಯಂತು । ಓಷಧಯಸ್ತೃಪ್ಯಂತು । ದಿಗ್ಗಜಾಸ್ತೃಪ್ಯಂತು । ದೇವತಾಗಣಾಸ್ತೃಪ್ಯಂತು। ಯಜ್ಞಾಸ್ತೃಪ್ಯಂತು । ದೇವಪತ್ನ್ಯಸ್ತೃಪ್ಯಂತು । ಲೋಕಪಾಲಾಸ್ತೃಪ್ಯಂತು । ಅನಿರುದ್ಧಸ್ತೃಪ್ಯತು। ಬಲದೇವಸ್ತೃಪ್ಯತು । ನಾರದಸ್ತೃಪ್ಯತು । ಜಂತವಸ್ತೃಪ್ಯಂತು। ಸ್ಥಾವರಾಣಿ ತೃಪ್ಯಂತು । ಜಂಗಮಾಃ ತೃಪ್ಯಂತು । (ನಿವೀತೀ) ಸನಕಸ್ತೃಪ್ಯತು। ಸನಂದನಸ್ತೃಪ್ಯತು । ಸನತ್ಸುಜಾತಸ್ತೃಪ್ಯತು । ಸನಾತನಸ್ತೃಪ್ಯತು । (ಸನತ್ಕುಮಾರಸ್ತೃಪ್ಯತು) ಕಪಿಲಸ್ತೃಪ್ಯತು । ಓಳ್ಹರಿಸ್ತೃಪ್ಯತು । ಆಸುರೀ ತೃಪ್ಯತು। ಪಂಚಶಿಖಾಸ್ತೃಪ್ಯಂತು ।

(ಅಪಸವ್ಯೇನ) ಕವ್ಯವಾಹನಸ್ತೃಪ್ಯತು । ಅನಲಸ್ತೃಪ್ಯತು । ಸೋಮಸ್ತೃಪ್ಯತು। ಯಮಸ್ತೃಪ್ಯತು । ಅರ್ಯಮಾ ತೃಪ್ಯತು । ಅಗ್ನಿಷ್ವಾತ್ತಾಸ್ತೃಪ್ಯಂತು । ಬರ್ಹಿಷದಸ್ತೃಪ್ಯಂತು। ಸೋಮಪಾಸ್ತೃಪ್ಯಂತು । ಆಜ್ಯಪಾಸ್ತೃಪ್ಯಂತು । ಪಿತರಸ್ತೃಪ್ಯಂತು । ಯಮಂ ತರ್ಪಯಾಮಿ। ಧರ್ಮರಾಜಂ ತರ್ಪಯಾಮಿ । ಮೃತ್ಯುಂ ತರ್ಪಯಾಮಿ । ಅಂತಕಂ ತರ್ಪಯಾಮಿ। ವೈವಸ್ವತಂ ತರ್ಪಯಾಮಿ। ಕಾಲಂ ತರ್ಪಯಾಮಿ । ಸರ್ವಭೂತಕ್ಷಯಂ ತರ್ಪಯಾಮಿ। ಔದುಂಬರಂ ತರ್ಪಯಾಮಿ । ದಧ್ನಂ ತರ್ಪಯಾಮಿ । ನೀಲಂ ತರ್ಪಯಾಮಿ । ಪರಮೇಷ್ಠಿನಂ ತರ್ಪಯಾಮಿ । ವೃಕೋದರಂ ತರ್ಪಯಾಮಿ । ಚಿತ್ರಂ ತರ್ಪಯಾಮಿ। ಚಿತ್ರಗುಪ್ತಂ ತರ್ಪಯಾಮಿ ॥

ವೈತರಣೀಗೋದಾನದಲ್ಲಿ ಪಿತೃತರ್ಪಣ –

ಮಾತೃಪಕ್ಷಾಶ್ಚ ಯೇ ಕೇಚಿದ್ಯೇ ಕೇಚಿತ್ಪಿತೃಪಕ್ಷಕಾಃ ।
ಗುರುಶ್ವಶುರಬಂಧೂನಾಂ ಯೇ ಕುಲೇಷು ಸಮುದ್ಭವಾಃ ॥

ಯೇ ಚಾನ್ಯೇ ಲುಪ್ತಪಿಂಡಾ ವೈ ಪುತ್ರದಾರವಿವರ್ಜಿತಾಃ ।
ತೇ ಸರ್ವೇ ತೃಪ್ತಿಮಾಯಾಂತು ಗೋಪುಚ್ಛೋದಕತರ್ಪಣೈಃ ॥

ಕ್ರಿಯಾಲೋಪಗತಾ ಯೇ ಚ ಜಾತ್ಯಂಧಾಃ ಪಂಗವಸ್ತಥಾ ।
ವಿರೂಪಾ ಆಮಗರ್ಭಾಶ್ಚ ಜ್ಞಾತಾಜ್ಞಾತಾಃ ಕುಲೇ ಮಮ ।
ತೇ ಸರ್ವೇ ತೃಪ್ತಿಮಾಯಾಂತು ಗೋಪುಚ್ಛೋದಕತರ್ಪಣೈಃ ॥

ವೃಕ್ಷಯೋನಿಗತಾ ಯೇ ಚ ಪರ್ವತತ್ವಂ ಗತಾಶ್ಚ ಯೇ ।
ಪಶುಯೋನಿಗತಾ ಯೇ ಚ ಕೀಟಪತಂಗಕಾಃ ।
ತೇ ಸರ್ವೇ ತೃಪ್ತಿಮಾಯಾಂತು ಗೋಪುಚ್ಛೋದಕತರ್ಪಣೈಃ ॥

ನರಕೇ ರೌರವೇ ಯೇ ಚ ಮಹಾರೌರವಸಂಸ್ಥಿತಾಃ ।
ಅಸಿಪತ್ರವನೇ ಘೋರೇ ಕುಂಭೀಪಾಕಸ್ಥಿತಾಶ್ಚ ಯೇ ।
ತೇ ಸರ್ವೇ ತೃಪ್ತಿಮಾಯಾಂತು ಗೋಪುಚ್ಛೋದಕತರ್ಪಣೈಃ ॥

ಸ್ವಾರ್ಥಬದ್ಧಾ ಮೃತಾ ಯೇ ಚ ಶಸ್ತ್ರಾಘಾತಮೃತಾಶ್ಚ ಯೇ ।
ಬ್ರಹ್ಮಹಸ್ತಮೃತಾ ಯೇ ಚ ನಾರೀಹಸ್ತಮೃತಾಶ್ಚ ಯೇ ।
ತೇ ಸರ್ವೇ ತೃಪ್ತಿಮಾಯಾಂತು ಗೋಪುಚ್ಛೋದಕತರ್ಪಣೈಃ ॥

ಪಾಶಮಧ್ಯೇ ಮೃತಾ ಯೇ ಚ ಸ್ವಲ್ಪಮೃತ್ಯುವಶಂ ಗತಾಃ ।
ಸರ್ವೇ ಚ ಮಾನವಾ ನಾಗಾಃ ಪಶವಃ ಪಕ್ಷಿಣಸ್ತಥಾ ।
ತೇ ಸರ್ವೇ ತೃಪ್ತಿಮಾಯಾಂತು ಗೋಪುಚ್ಛೋದಕತರ್ಪಣೈಃ ॥

ಆಬ್ರಹ್ಮಸ್ತಂಬಪರ್ಯಂತಂ ದೇವರ್ಷಿಪಿತೃಮಾನವಾಃ ।
ತೃಪ್ಯಂತು ಸರ್ವದಾ ಸರ್ವೇ ಗೋಪುಚ್ಛೋದಕತರ್ಪಣೈಃ ॥

ಗೋದಾನ ಸಂಕಲ್ಪ–

ಶುಭೇ ಶೋಭನೇ ಮುಹೂರ್ತೇ ವಿಷ್ಣೋರಾಜ್ಞಯಾ ಪವರ್ತಮಾನಸ್ಯ ಅದ್ಯ ಬ್ರಹ್ಮಣಃ ದ್ವಿತೀಯ ಪರಾರ್ಧೇ ಶ್ವೇತವರಾಹಕಲ್ಪೇ ವೈವಸ್ವತಮನ್ವಂತರೇ ಅಷ್ಟಾವಿಂಶತಿತಮೇ ಕಲಿಯುಗೇ ಪ್ರಥಮಪಾದೇ ಜಂಬೂದ್ವೀಪೇ ಭರತವರ್ಷೇ ಭರತ ಖಂಡೇ ದಂಡಕಾರಣ್ಯೇ ಗೋದಾವರ್ಯಾಃ ದಕ್ಷಿಣೇ ತೀರೇ ಶಾಲಿವಾಹನಶಕೇ ಬೌದ್ಧಾವತಾರೇ ರಾಮಕ್ಷೇತ್ರೇ ಅಸ್ಮಿನ್ ವರ್ತಮಾನೇ ಚಾಂದ್ರಮಾನೇ– ಸಂವತ್ಸರೇ– ಅಯನೇ– ಋತೌ– ಮಾಸೇ– ಪಕ್ಷೇ– ತಿಥೌ– ವಾಸರೇ– ನಕ್ಷತ್ರೇ– ಯೋಗೇ– ಕರಣೇ– ರಾಶಿಸ್ಥಿತೇ ಚಂದ್ರೇ– ರಾಶಿಸ್ಥಿತೇ ಸವಿತರಿ– ರಾಶಿಸ್ಥಿತೇ ದೇವಗುರೌ ಶೇಷೇಷು ಗ್ರಹೇಷು ಯಥಾ ಯಥಾಸ್ಥಾನ ಸ್ಥಿತೇಷು ಸತ್ಸು ಏವಂ ಗುಣವಿಶಿಷ್ಟೇ ದೇಶೇ ಕಾಲೇ– ಗೋತ್ರಃ– ನಾಮಾಹಂ ಮಮ ಶ್ರುತಿ ಸ್ಮೃತಿ ಪುರಾಣೇತಿಹಾಸೋಕ್ತ ಫಲಾವಾಪ್ತಯೇ ಜ್ಞಾತ– ಅಜ್ಞಾತ– ಅನೇಕ ಜನ್ಮಾರ್ಜಿತ ಮನೋವಾಕ್ ಕಾಯ ಕರ್ಮಜನ್ಯಪಾಪ– ಅಪನುತ್ತಯೇ ನಿಖಿಲ ದುಃಖ ದೌರ್ಭಾಗ್ಯ ದುಃಸ್ವಪ್ನ ದುರ್ನಿಮಿತ್ತ ದುಷ್ಟಗ್ರಹಬಾಧಾಶಾಂತಿಪೂರ್ವಕಂ ಧನ ಧಾನ್ಯ– ಆಯುರ್– ಆರೋಗ್ಯ– ದ್ವಿಪದ ಚತುಷ್ಪದ ಸಂತತಿ ಚತುರ್ವರ್ಗಾದಿ ನಿಖಿಲವಾಂಛಿತ ಸಿದ್ಧಯೇ ಗೋರೋಮ ಸಂಖ್ಯಾಕ ದಿವ್ಯವತ್ಸರಾವಿಚ್ಛಿನ್ನ ಸ್ವರ್ಗಲೋಕಸ್ಥಿತಿ

ಕಾಮಶ್ಚ ಪಿತೃಣಾಂ ನಿರತಿಶಯ ಆನಂದ ಬ್ರಹ್ಮಲೋಕ ಅವಾಪ್ತಯೇ ಚ ಗವಾಂತರ್ಗತ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಗೋಪಾಲಕೃಷ್ಣ ಪ್ರೇರಣಯಾ ಗವಾಂತರ್ಗತ ಗೋಪಾಲಕೃಷ್ಣಪ್ರೀತ್ಯರ್ಥಂ ಇಮಾಂ ಸುಪೂಜಿತಾಂ ಸಾಲಂಕಾರಾಂ ಸವತ್ಸಾಂ ಗಾಂ ವಿಷ್ಣುದೈವತ್ಯಾಂ ತಾಮ್ರಪೃಷ್ಠೀಂ ಸ್ವರ್ಣಶೃಂಗೀಂ ರೌಪ್ಯಖುರಾಂ ಘಂಟಾಗ್ರೈವೇಯಕಾಂ ಮುಕ್ತಾಲಾಂಗೂಲಾಂ ಕಾಂಸ್ಯದೋಹನಿಕಾಂ ವಸ್ತ್ರಾಭರಣಾ ದ್ಯುಪಸ್ಕರಯುತಾಂ– ಗೋತ್ರಾಯ– ಶರ್ಮಣೇ ಬ್ರಾಹ್ಮಣಾಯ ತುಭ್ಯಮಹಂ ಸಂಪ್ರದದೇ । ನ ಮಮ ನ ಮಮ।

ದಾನ ಸ್ವೀಕರಿಸಿದವರು ಹೇಳಬೇಕಾದ ಮಂತ್ರ–

ಕ ಇದಂ ಕಸ್ಮಾಽದಾತ್ । ಕಾಮಃ ಕಾಮಾಯಾದಾತ್ । ಕಾಮೋ ದಾತಾ।
ಕಾಮಃ ಪ್ರತಿಗ್ರಹೀತಾ । ಕಾಮಂ ಸಮುದ್ರಮಾವಿಶ । ಕಾಮೇನ ತ್ವಾ ಪ್ರತಿಗೃಹ್ಣಾಮಿ।
ಕಾಮೈತತ್ತೇ । ವೃಷ್ಟಿರಸಿ ದ್ಯೌಸ್ತ್ವಾದದಾತು । ಪೃಥಿವೀ ಪ್ರತಿಗೃಹ್ಣಾತು ॥

ಏವಂ ತರ್ಪಯಿತ್ವಾ, (ಉಪವೀತಿ) ಶ್ರೋತ್ರಿಯಂ ದಾಂತಂ ವಿಪ್ರಮ್ ಆಮಂತ್ರ್ಯ ಪಾದೌ ಪ್ರಕ್ಷಾಲ್ಯ ಜಲಪಾತ್ರ ಗಂಧವಸ್ತ್ರ ಪುಷ್ಪಾಕ್ಷತೈಃ ಸಂಪೂಜ್ಯ ದಾನಂ ದದ್ಯಾತ್ । ಬ್ರಾಹ್ಮಣಾಂತರ್ಯಾಮಿಶ್ರೀಲಕ್ಷ್ಮೀನಾರಾಯಣಾಯ ನಮಃ। ಇದಮಾಸನಮ್ । ಬ್ರಾಹ್ಮಣಾಂತರ್ಯಾಮಿ ಶ್ರೀಲಕ್ಷ್ಮೀನಾರಾಯಣಾಯ ನಮಃ ಪಾದ್ಯಂ ಸಮರ್ಪಯಾಮಿ । ಪಾದೌ ಪ್ರಕ್ಷಾಲ್ಯ, ಬ್ರಾಹ್ಮಣಾಂತರ್ಯಾಮಿ ಶ್ರೀಲಕ್ಷ್ಮೀ ನಾರಾಯಣಂ ಆವಾಹಯಾಮಿ। ಎಂದು ಬ್ರಾಹ್ಮಣರ ತಲೆಯ ಮೇಲೆ ಮಂತ್ರಾಕ್ಷತೆ ಹಾಕಬೇಕು.

ಭೂಮಿದೇವ ಅಗ್ರಜನ್ಮಾಸಿ ತ್ವಂ ವಿಪ್ರ ಪುರುಷೋತ್ತಮ ।
ಪ್ರತ್ಯಕ್ಷಯಜ್ಞಪುರುಷ ಹ್ಯರ್ಘ್ಯಮೇತತ್ ಪ್ರಗೃಹ್ಯತಾಮ್ ॥

ಇದಮರ್ಘ್ಯಂ ಸಮರ್ಪಯಾಮಿ ॥ ಬ್ರಾಹ್ಮಣಾಂತರ್ಯಾಮಿ ಶ್ರೀಲಕ್ಷ್ಮೀ ನಾರಾಯಣಾಯ ನಮಃ ।

ಗಂಧದ್ವಾರಾಂ ದುರಾಧರ್ಷಾಂ ನಿತ್ಯಪುಷ್ಟಾಂ ಕರಿಷಿಣೀಮ್ ।

ಈಶ್ವರೀಂ ಸರ್ವಭೂತಾನಾಂ ತಾಮಿಹೋಪಹ್ವಯೇ ಶ್ರಿಯಮ್ ॥

ಗಂಧಂ ಸಮರ್ಪಯಾಮಿ ॥

ಅರ್ಚತ ಪ್ರಾರ್ಚತ ಪ್ರಿಯಮೇಧಾಸೋ ಅರ್ಚತ ।

ಅರ್ಚಂತು ಪುತ್ರಕಾ ಉತ ಪುರಂ ನ ಧೃಷ್ಣ್ವರ್ಚತ ॥

ಬ್ರಾಹ್ಮಣಾಂತರ್ಯಾಮಿ ಶ್ರೀ ಲಕ್ಷ್ಮೀ ನಾರಾಯಣಾಯ ನಮಃ। ಅಕ್ಷತಾನ್ ಸಮರ್ಪಯಾಮಿ ।

ಓಂ ಆಯನೇತೇ ಪರಾಯಣೇ ದೂರ್ವಾ ರೋಹಂತು ಪುಷ್ಪಿಣೀಃ ।

ಹ್ರದಾಶ್ಚ ಪುಂಡರೀಕಾಣಿ ಸಮುದ್ರಸ್ಯ ಗೃಹಾ ಇಮೇ ॥

ಬ್ರಾಹ್ಮಣಾಂತರ್ಯಾಮಿ ಶ್ರೀ ಲಕ್ಷ್ಮೀನಾರಾಯಣಾಯ ನಮಃ । ಪುಷ್ಪಾಣಿ ಸಮರ್ಪಯಾಮಿ ।

ದಾನಕ್ರಮಃ– ಕಾಂಸ್ಯಪಾತ್ರೇ ಘೃತಂ ಸಂಪೂರ್ಯ ತಿಲದರ್ಭಪುಷ್ಪತುಲಸೀಸಹಿತ ಪಾತ್ರೇ ವಿಪ್ರಹಸ್ತಂ ನಿಧಾಯ ತದುಪರಿ ಗೋಪುಚ್ಛಂ ದತ್ವಾ ಜಲಧಾರಾಂ ಪುಚ್ಛೋಪರಿ ವಿಪ್ರಹಸ್ತೇ ದದ್ಯಾತ್ ॥ ಪ್ರಾಙ್ಮುಖೀಂ ಗಾಂ ಅವಸ್ಥಾಪ್ಯ ಸ್ವಯಂ ಪ್ರಾಙ್ಮುಖಸ್ತಿಷ್ಠನ್ ಉದಙ್ಮುಖಾಯ ಶ್ರೋತ್ರಿಯಾಯ ದದ್ಯಾತ್ ॥ .... ಗೋತ್ರೋತ್ಪನ್ನಃ, ... ಶರ್ಮಾಹಂ ವಿಷ್ಣುದೈವತ್ಯಾಂ ಸವತ್ಸಾಂ ತಾಮ್ರಪೃಷ್ಠೀಂ ಸ್ವರ್ಣಶೃಂಗೀಂ ರೌಪ್ಯಖುರಾಂ ಘಂಟಾಗ್ರೈವೇಯಕಾಂ ಮುಕ್ತಾಲಾಂಗೂಲಾಂ ಕಾಂಸ್ಯದೋಹನಿಕಾಂ ವಸ್ತ್ರಾಭರಣಾದ್ಯುಪಸ್ಕರಯುತಾಂ..... ಗೋತ್ರಾಯ .... ಶರ್ಮಣೇ ತುಭ್ಯಮಹಂ ಸಂಪ್ರದದೇ । ದತ್ತಂ ನ ಮಮ ॥

ಪ್ರತಿಗ್ರಹೀತಾ–

ಓಂ ದೇವಸ್ಯ ತ್ವಾ ಸವಿತುಃ ಪ್ರಸವೇಽಶ್ವಿನೋರ್ಬಾಹುಭ್ಯಾಂ ಪೂಷ್ಣೋ ಹಸ್ತಾಭ್ಯಾಮ್। ಪ್ರತಿಗೃಹ್ಣಾಮಿ ॥ ಇತ್ಯಂತಮುಕ್ತ್ವಾ ಗೃಹೀತ್ವಾ,

ಗೃಹ್ಣಾಮಿ ಸುರಭೀಂ ದೇವೀಂ ಸರ್ವದೇವಮಯೀಂ ಶುಭಾಮ್ ।

ಇತಿ ವದೇತ್ ।

ತತಃ ಯಜಮಾನಃ–

ಯಜ್ಞಸಾಧನಭೂತಾ ಯಾ ವಿಶ್ವಸ್ಯಾಘೌಘನಾಶಿನೀ ।
ವಿಶ್ವರೂಪಧರೋ ದೇವಃ ಪ್ರೀಯತಾಮನಯಾ ಗವಾ ॥

ಘೃತಕ್ಷೀರಪ್ರದಾ ಗಾವೋ ಘೃತಯೋನ್ಯೋ ಘೃತೋದ್ಭವಾಃ ।
ಘೃತನದ್ಯೋ ಘೃತಾವರ್ತಾಸ್ತಾ ಮೇ ಸಂತು ಸದಾ ಗೃಹೇ ॥

ಇತಿ ಜಲಮುತ್ಸೃಜೇತ್ ॥

ಗೋದಾನಾಂಗದಕ್ಷಿಣಾ–

ಗೋದಾನಾಂಗತ್ವೇನ ಯಥಾಶಕ್ತಿ ಹಿರಣ್ಯದಕ್ಷಿಣಾಂ ತುಭ್ಯಮಹಂ ಸಂಪ್ರದದೇ।

ಸರ್ವೇಷಾಮೇವ ಭೂತಾನಾಂ ಗಾವಃ ಶರಣಮುತ್ತಮಮ್ ।
ಗಾವಃ ಸರ್ವಸ್ಯ ಭೂತಸ್ಯ ಗಾವೋ ಧನ್ಯಾಃ ಸನಾತನಾಃ ॥
ಬ್ರಾಹ್ಮಣಾಶ್ಚೈವ ಗಾವಶ್ಚ ಕುಲಮೇಕಂ ದ್ವಿಧಾ ಕೃತಮ್ ।
ಏಕತ್ರ ಮಂತ್ರಾಸ್ತಿಷ್ಠಂತಿ ಹವಿರೇಕತ್ರ ತಿಷ್ಠತಿ ॥ ಇತಿ ಪಠಿತ್ವಾ

ಗೋಮತೀವಿದ್ಯಾ–

ಗಾವಸ್ಸುರಭಯೋ ನಿತ್ಯಂ ಗಾವೋ ಗುಗ್ಗುಲುಗಂಧಿಕಾಃ ।
ಗಾವಃ ಪ್ರತಿಷ್ಠಾ ಭೂತಾನಾಂ ಗಾವಃ ಸ್ವಸ್ತ್ಯಯನಂ ಮಹತ್ ॥

ಅನ್ನಮೇವ ಪರಂ ಗಾವಃ ದೇವಾನಾಂ ಹವಿರುತ್ತಮಮ್ ।
ಪಾವನಂ ಸರ್ವಭೂತಾನಾಂ ರಕ್ಷಂತಿ ಚ ವಹಂತಿ ಚ ॥

ಹವಿಷಾ ಮಂತ್ರಪೂತೇನ ತರ್ಪಯಂತ್ಯಮರಾನ್ ದಿವಿ ।
ಋಷೀಣಾಮಪಿ ಹೋತೄಣಾಂ ಗಾವೋ ಹೋಮೇ ಪ್ರಕೀರ್ತಿತಾಃ ।
ನಮೋ ಗೋಭ್ಯಃ ಶ್ರೀಮತೀಭ್ಯಃ ಸೌರಭೇಯೀಭ್ಯ ಏವ ಚ॥

ನಮೋ ಬ್ರಹ್ಮಸುತಾಭ್ಯಶ್ಚ ಪವಿತ್ರಾಭ್ಯೋ ನಮೋ ನಮಃ ।
ಗಾವೋ ಮಾಮುಪತಿಷ್ಠಂತು ಹೇಮಶೃಂಗ್ಯಃ ಪಯೋಮುಚಃ ।
ಸುರಭ್ಯಃ ಸೌರಭೇಯಾಶ್ಚ ಸರಿತಃ ಸಾಗರಂ ಯಥಾ ॥

ಗಾ ವೈ ಪಶ್ಯಾಮ್ಯಹಂ ನಿತ್ಯಂ ಗಾವಃ ಪಶ್ಯಂತು ಮಾಂ ಸದಾ ।
ಗಾವೋಽಸ್ಮಾಕಂ ವಯಂ ತಾಸಾಂ ಯತೋ ಗಾವಸ್ತತೋ ವಯಮ್ ॥

ಗಾವೋ ಮಮಾಗ್ರತಸ್ಸಂತು ಪೃಷ್ಠತಃ ಸಂತು ಗೋವೃಷಾಃ ।
ಗಾವೋ ಮೇ ಹೃದಯೇ ಸಂತು ಗವಾಂ ಮಧ್ಯೇ ವಸಾಮ್ಯಹಮ್ ॥

ಗವಾಮಂಗೇಷು ತಿಷ್ಠಂತಿ ಭುವನಾನಿ ಚತುರ್ದಶ ।
ಯಸ್ಮಾತ್ತಸ್ಮಾತ್ ಶಿವಂ ಮೇ ಸ್ಯಾದಿಹ ಲೋಕೇ ಪರತ್ರ ಚ ॥

ಇತಿ ಗೋಮತೀವಿದ್ಯಾಂ ಚ ಪಠೇತ್ ।

ಅನೇನ ಗೋದಾನೇನ ಗವಾಂತರ್ಗತ ಶ್ರೀಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀಗೋಪಾಲಕೃಷ್ಣಃ ಪ್ರೀಯತಾಮ್ ॥ ಇತಿ ಗಾಂ ಪ್ರದಕ್ಷಿಣೀಕೃತ್ಯ ಕೃಷ್ಣಾರ್ಪಣಂ ಕುರ್ಯಾತ್ ॥

॥ ಶ್ರೀಕೃಷ್ಣಾರ್ಪಣಮಸ್ತು ॥

ಅಧಿಕಮಾಸದ ಅಪೂಪ ದಾನವಿಧಿ

ಅಧಿಕ ಮಾಸದಲ್ಲಿ 'ಪುರುಷೋತ್ತಮನು' ಮಾಸನಿಯಾಮಕ ದೇವತೆ. ಈ ಮಾಸದಲ್ಲಿ ಅಷ್ಟವಸುಗಳು, ಏಕಾದಶರುದ್ರರು, ದ್ವಾದಶ ಆದಿತ್ಯರು ಮತ್ತು ಪ್ರಜಾಪತಿ ಮತ್ತು ವಷಟ್‌ಕಾರರನ್ನು ಉದ್ದೇಶಿಸಿ (8+11+12+2) 33 ಅಪೂಪಗಳ ದಾನವು ಮಹಾಪುಣ್ಯದಾಯಕವಾಗಿದೆ.

ಮೂವತ್ತಮೂರು ಅತಿರಸಗಳನ್ನು ಕಂಚಿನ ಪಾತ್ರೆಯಲ್ಲಿಟ್ಟು ಚಿಕ್ಕ ಪಾತ್ರೆಯಲ್ಲಿ ತುಪ್ಪವನ್ನು ಇಟ್ಟು, ಹಿರಣ್ಯದಕ್ಷಿಣೆಯೊಂದಿಗೆ ವಿಪ್ರನಿಗೆ ದಾನವೀಯಬೇಕು.

ತ್ರಯಸ್ತ್ರಿಂಶದಪೂಪಾನ್ನಂ ಕಾಂಸ್ಯಪಾತ್ರೆ ನಿಧಾಯ ಚ ।
ಸಘೃತಂ ಸಹಿರಣ್ಯಂ ಚ ಬ್ರಾಹ್ಮಣಾಯ ನಿವೇದಯೇತ್ ॥

ಅಧಿಕಮಾಸದ ಪ್ರತಿದಿನ ಈ ದಾನವನ್ನು ನೀಡುವುದು ಅಶಕ್ಯವಾದರೆ ಒಂದು ದಿನವಾದರೂ ನೀಡಬಹುದು. ಅದರಲ್ಲಿಯೂ ಅಧಿಕಮಾಸದ ಎರಡು ದ್ವಾದಶಿಗಳು, ಹುಣ್ಣಿಮೆ, ಅಮಾವಾಸ್ಯೆ, ಕೃಷ್ಣಚತುರ್ದಶೀ, ವೈಧೃತಿ ವ್ಯತೀಪಾತಗಳು ಈ ದಿನಗಳಲ್ಲಿ ನೀಡಿದ ದಾನ ಅತಿಶಯಫಲದಾಯಕ.

ಮೂವತ್ತಮೂರು ಅಪೂಪಗಳಲ್ಲಿ ಭಗವಂತನ ಮೂವತ್ತಮೂರು ರೂಪಗಳನ್ನು ಚಿಂತಿಸಬೇಕು. ಪದ್ಮಪುರಾಣವು ವಿಷ್ಣು ಜಿಷ್ಣು ಮೊದಲಾದ ಈ ರೂಪಗಳನ್ನು ಹೇಳಿದೆ. ಅಲ್ಲದೇ ಏಕಾದಶರುದ್ರರು, ಅಷ್ಟವಸುಗಳು, ದ್ವಾದಶಾದಿತ್ಯರು, ವಷಟ್ಕಾರ ದೇವತೆ ಮತ್ತು ಪ್ರಜಾಪತಿಯೆಂಬ ಮೂವತ್ತಮೂರು ದೇವತೆಗಳನ್ನು ಅಲ್ಲಿ ಚಿಂತಿಸಿ ದಾನವೀಯಬೇಕು.

ಸಂಕಲ್ಪವಿಧಾನ

ಶ್ರೀಲಕ್ಷ್ಮೀ ವೆಂಕಟೇಶಾಯ ನಮಃ । ಆಚಮ್ಯ ಓಂ ಕೇಶವಾಯ ನಮಃ। ನಾರಾಯಣಾಯ ನಮಃ । ಮಾಧವಾಯ ನಮಃ । ಗೋವಿಂದಾಯ

ನಮಃ। ವಿಷ್ಣವೇ ನಮಃ । ಮಧುಸೂದನಾಯ ನಮಃ । ತ್ರಿವಿಕ್ರಮಾಯ ನಮಃ । ವಾಮನಾಯ ನಮಃ । ಶ್ರೀಧರಾಯ ನಮಃ । ಹೃಷೀಕೇಶಾಯ ನಮಃ । ಪದ್ಮನಾಭಾಯ ನಮಃ । ದಾಮೋದರಾಯ ನಮಃ । ಸಂಕರ್ಷಣಾಯ ನಮಃ । ವಾಸುದೇವಾಯ ನಮಃ । ಪ್ರದ್ಯುಮ್ನಾಯ ನಮಃ । ಅನಿರುದ್ಧಾಯ ನಮಃ । ಪುರುಷೋತ್ತಮಾಯ ನಮಃ ।ಅಧೋಕ್ಷಜಾಯ ನಮಃ । ನಾರಸಿಂಹಾಯ ನಮಃ । ಅಚ್ಯುತಾಯ ನಮಃ । ಜನಾರ್ದನಾಯ ನಮಃ । ಉಪೇಂದ್ರಾಯ ನಮಃ । ಹರಯೇ ನಮಃ । ಶ್ರೀಕೃಷ್ಣಾಯ ನಮಃ ॥

ಪ್ರಾಣಾಯಾಮಃ । ಪ್ರಣವಸ್ಯ ಪರಬ್ರಹ್ಮಋಷಿಃ । ಪರಮಾತ್ಮಾ ದೇವತಾ । ದೈವೀ ಗಾಯತ್ರೀ ಛಂದಃ । ಪ್ರಾಣಾಯಾಮೇ ವಿನಿಯೋಗಃ । ಓಂ ಭೂಃ । ಓಂ ಭುವಃ । ಓಂಸ್ವಃ । ಓಂ ಮಹಃ । ಓಂ ಜನಃ । ಓಂ ತಪಃ । ಓಂ ಸತ್ಯಂ । ಓಂ ತತ್ಸವಿತುರ್ವರೇಣ್ಯಂ ಭರ್ಗೋದೇವಸ್ಯ ಧೀಮಹಿ । ಧಿಯೋ ಯೋ ನಃ ಪ್ರಚೋದಯಾತ್ ॥

ಸುಮುಖಶ್ಚ ಏಕದಂತಶ್ಚ ಕಪಿಲೋ ಗಜಕರ್ಣಕಃ । ಲಂಬೋದರಶ್ಚ ವಿಕಟೋ ವಿಘ್ನನಾಶೋ ಗಣಾಧಿಪಃ । ಧೂಮ್ರಕೇತುರ್ಗಣಾಧ್ಯಕ್ಷೋ ಭಾಲಚಂದ್ರೋ ಗಜಾನನಃ। ದ್ವಾದಶೈತಾನಿ ನಾಮಾನಿ ಯಃ ಪಠೇತ್ ಶೃಣುಯಾದಪಿ ॥ ವಿದ್ಯಾರಂಭೇ ವಿವಾಹೇ ಚ ಪ್ರವೇಶೇ ನಿರ್ಗಮೇ ತಥಾ। ಸಂಗ್ರಾಮೇ ಸಂಕಟೇ ಚೈವ ವಿಘ್ನಸ್ತಸ್ಯನ ಜಾಯತೇ॥

ಶುಕ್ಲಾಂಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಮ್ ।
ಪ್ರಸನ್ನವದನಂ ಧ್ಯಾಯೇತ್ ಸರ್ವವಿಘ್ನೋಪಶಾಂತಯೇ ॥
ಸರ್ವ ವಿಘ್ನ ಪ್ರಶಮನಂ ಸರ್ವ ಸಿದ್ಧಿಕರಂ ಪರಮ್ ।
ಸರ್ವ ಜೀವ ಪ್ರಣೇತಾರಂ ವಂದೇ ವಿಜಯದಂ ಹರಿಮ್ ॥
ಸರ್ವ ಮಂಗಲ ಮಾಂಗಲ್ಯೇ ಶಿವೇ ಸರ್ವಾರ್ಥ ಸಾಧಿಕೇ ।
ಶರಣ್ಯೇ ತ್ರ್ಯಂಬಕೇ ದೇವಿ ನಾರಾಯಣಿ ನಮೋಽಸ್ತು ತೇ ॥
ಬುದ್ಧಿರ್ಬಲಂ ಯಶೋ ಧೈರ್ಯಂ ನಿರ್ಭಯತ್ವಮರೋಗತಾ ।
ಅಜಾಡ್ಯಂ ವಾಕ್ಪಟುತ್ವಂ ಚ ಹನುಮತ್ ಸ್ಮರಣಾದ್ಭವೇತ್ ॥

ಲಾಭಸ್ತೇಷಾಂ ಜಯಸ್ತೇಷಾಂ ಕುತಸ್ತೇಷಾಂ ಪರಾಜಯಃ ।
ಏಷಾಮಿಂದೀವರಶ್ಯಾಮೋ ಹೃದಯಸ್ಥೋ ಜನಾರ್ದನಃ ।
ತದೇವ ಲಗ್ನಂ ಸುದಿನಂ ತದೇವ ತಾರಾಬಲಂ ಚಂದ್ರಬಲಂ ತದೇವ ।
ವಿದ್ಯಾಬಲಂ ದೈವಬಲಂ ತದೇವ ಲಕ್ಷ್ಮೀಪತೇ ತೇಽಂಘ್ರಿಯುಗಂ ಸ್ಮರಾಮಿ॥

ಯತ್ರ ಯೋಗೇಶ್ವರಃ ಕೃಷ್ಣೋ ಯತ್ರ ಪಾರ್ಥೋ ಧನುರ್ಧರಃ ।
ತತ್ರ ಶ್ರೀವಿಜಯೋ ಭೂತಿಃ ಧ್ರುವಾ ನೀತಿರ್ಮತಿರ್ಮಮ ॥

ಶುಭೇ ಶೋಭನೇ ಮುಹೂರ್ತೇ ಅದ್ಯಬ್ರಹ್ಮಣಃ ದ್ವಿತೀಯ ಪರಾರ್ಧೇ ಶ್ರೀಶ್ವೇತ ವರಾಹಕಲ್ಪೇ ವೈವಸ್ವತ ಮನ್ವಂತರೇ ಕಲಿಯುಗೇ ಪ್ರಥಮ ಚರಣೇ ಅಷ್ಟಾವಿಂಶತಿತಮೇ ಕಲಿಯುಗೇ ಭರತವರ್ಷೇ ಭರತಖಂಡೇ ಜಂಬೂದ್ವೀಪೇ ದಂಡಕಾರಣ್ಯೇ ದೇಶೇ ಗೋದಾವರ್ಯಾಃ ದಕ್ಷಿಣೇ ತೀರೇ ಶಾಲಿವಾಹನ ಶಕೇ ಬೌದ್ಧಾವತಾರೇ ಅಸ್ಮಿನ್ ವರ್ತಮಾನೇ....... ಸಂವತ್ಸರೇ..... ಅಯನೇ..... ಮಾಸೇ....... ಪಕ್ಷೇ । ತಿಥೌ.......... ವಾಸರೇ.......... ನಕ್ಷತ್ರೇ........... ಶುಭಯೋಗೇ ಶುಭಕರಣೇ ಏವಂಗುಣ ವಿಶೇಷಣ ವಿಶಿಷ್ಟಾಯಾಂ ಶುಭತಿಥೌ ಮಮ ಆತ್ಮನಃ ಶ್ರುತಿ ಸ್ಮೃತಿ ಪುರಾಣೋಕ್ತಫಲ ಪ್ರಾಪ್ತ್ಯರ್ಥಂ............ ಗೋತ್ರೋತ್ಪನ್ನೋಽಹಂ........... ಶರ್ಮಾಹಂ ವಸು–ರುದ್ರ– ಆದಿತ್ಯ–ಪ್ರಜಾಪತಿ–ವಷಟ್ಕಾರಾಂತರ್ಗತ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಮಾಸನಿಯಾಮಕ ಪುರುಷೋತ್ತಮ ಪ್ರೇರಣಯಾ ಪುರುಷೋತ್ತಮ ಪ್ರೀತ್ಯರ್ಥಂ ಅಮುಕಗೋತ್ರೋದ್ಭವಸ್ಯ ಅಮುಕಶರ್ಮಣಃ ಮಮ ಸಪತ್ನೀಕಸ್ಯ ನಿಖಿಲ–ಪಾಪಕ್ಷಯಪೂರ್ವಕಂ ಭೂದಾನಫಲಾವಾಪ್ತಯೇ, ಅಪೂಪಚ್ಛಿದ್ರ ಸಮಸಂಖ್ಯವರ್ಷ ಸಹಸ್ರಾವಧಿ– ಸ್ವರ್ಲೋಕನಿವಾಸಾದಿಪುರಾಣೋಕ್ತಫಲ–ಸಿದ್ಧ್ಯರ್ಥಂ ತ್ರಯಸ್ತ್ರಿಂಶದಪೂಪದಾನಾಖ್ಯಂ ಕರ್ಮ ಕರಿಷ್ಯೇ । ತದಂಗತ್ವೇನ ಅಪೂಪಪೂಜಾಂ ಬ್ರಾಹ್ಮಣಪೂಜಾಂ ಚ ಕರಿಷ್ಯೇ।

ಸರ್ವೇಷು ಆರಂಭಕಾರ್ಯೇಷು ತ್ರಯಸ್ತ್ರಿಭುವನೇಶ್ವರಾಃ ।
ದೇವಾ ದಿಶಂತು ನಃ ಸಿದ್ಧಿಂ ಬ್ರಹ್ಮೇಶಾನ ಜನಾರ್ದನಾಃ ।

ಲಕ್ಷ್ಮೀ ನಾರಾಯಣಾಭ್ಯಾಂ ನಮಃ । ವಾಣೀ ಹಿರಣ್ಯಗರ್ಭಾಭ್ಯಾಂ ನಮಃ। ವಾಯುಭಾರತೀಭ್ಯಾಂ ನಮಃ । ಉಮಾಮಹೇಶ್ವರಾಭ್ಯಾಂ ನಮಃ । ಶಚೀಪುರಂದರಾಭ್ಯಾಂ ನಮಃ । ಇಷ್ಟದೇವತಾಭ್ಯೋ ನಮಃ । ಗ್ರಾಮದೇವತಾಭ್ಯೋ ನಮಃ । ಸ್ಥಾನದೇವತಾಭ್ಯೋ ನಮಃ । ಏತತ್ ಕರ್ಮ ಪ್ರಧಾನ ದೇವತಾಭ್ಯೋ ನಮಃ ।

ಅಪೂಪ ಪೂಜೆ– ಮೂವತ್ತಮೂರು ದೇವತೆ ಹಾಗೂ ಭಗವದ್ರೂಪಗಳನ್ನು ಆವಾಹಿಸಬೇಕು.

1. ದ್ರೋಣನಾಮಕವಸುಂ ತದಂತರ್ಗತಂ ವಿಷ್ಣುಮಾವಾಹಯಾಮಿ ।
2. ಧ್ರುವನಾಮಕವಸುಂ ತದಂತರ್ಗತಂ ಜಿಷ್ಣುಮಾವಾಹಯಾಮಿ ।
3. ದೋಷನಾಮಕವಸುಂ ತದಂತರ್ಗತಂ ಮಹಾವಿಷ್ಣುಮಾವಾಹಯಾಮಿ।
4. ಅರ್ಕನಾಮಕವಸುಂ ತದಂತರ್ಗತಂ ಹರಿಮಾವಾಹಯಾಮಿ ।
5. ಅಗ್ನಿನಾಮಕವಸುಂ ತದಂತರ್ಗತಂ ಕೃಷ್ಣಮಾವಾಹಯಾಮಿ ।
6. ದ್ಯುನಾಮಕವಸುಂ ತದಂತರ್ಗತಂ ಅಧೋಕ್ಷಜಮಾವಾಹಯಾಮಿ ।
7. ಪ್ರಾಣನಾಮಕವಸುಂ ತದಂತರ್ಗತಂ ಕೇಶವಮಾವಾಹಯಾಮಿ ।
8. ವಿಭಾವಸುನಾಮಕವಸುಂ ತದಂತರ್ಗತಂ ಮಾಧವಮಾವಾಹಯಾಮಿ।
9. ಭೀಮನಾಮಕರುದ್ರಂ ತದಂತರ್ಗತಂ ರಾಮಮಾವಾಹಯಾಮಿ ।
10. ರೈವತನಾಮಕರುದ್ರಂ ತದಂತರ್ಗತಂ ಅಚ್ಯುತಮಾವಾಹಯಾಮಿ ।
11. ಓಜೋನಾಮಕರುದ್ರಂ ತದಂತರ್ಗತಂ ಪುರುಷೋತ್ತಮಮಾವಾಹಯಾಮಿ।
12. ಅಜೈಕಪಾನ್ನಾಮಕರುದ್ರಂ ತದಂತರ್ಗತಂ ಗೋವಿಂದಮಾವಾಹಯಾಮಿ।
13. ಮಹನ್ನಾಮಕರುದ್ರಂ ತದಂತರ್ಗತಂ ವಾಮನಮಾವಾಹಯಾಮಿ ।
14. ಬಹುರೂಪನಾಮಕರುದ್ರಂ ತದಂತರ್ಗತಂ ಶ್ರೀಶಮಾವಾಹಯಾಮಿ ।
15. ಭವನಾಮಕರುದ್ರಂ ತದಂತರ್ಗತಂ ಶ್ರೀಕಂಠಮಾವಾಹಯಾಮಿ ।
16. ವಾಮದೇವನಾಮಕರುದ್ರಂ ತದಂತರ್ಗತಂ ವಿಶ್ವಸಾಕ್ಷಿಣಮಾವಾಹಯಾಮಿ।
17. ಉಗ್ರನಾಮಕರುದ್ರಂ ತದಂತರ್ಗತಂ ನಾರಾಯಣಮಾವಾಹಯಾಮಿ।
18. ವೃಷಾಕಪಿನಾಮಕರುದ್ರಂ ತದಂತರ್ಗತಂ ಮಧುರಿಪುಮಾವಾಹಯಾಮಿ।

19. ಅಹಿರ್ಬುಧ್ನ್ಯನಾಮಕರುದ್ರಂ ತದಂತರ್ಗತಂ ಅನಿರುದ್ಧಮಾವಾಹಯಾಮಿ।
20. ವಿವಸ್ವಾನ್ನಾಮಕಾದಿತ್ಯಂ ತದಂತರ್ಗತಂ ತ್ರಿವಿಕ್ರಮಮಾವಾಹಯಾಮಿ ।
21. ಅರ್ಯಮಾನಾಮಕಾದಿತ್ಯಂ ತದಂತರ್ಗತಂ ವಾಸುದೇವಮಾವಾಹಯಾಮಿ ।
22. ಪೂಷನಾಮಕಾದಿತ್ಯಂ ತದಂತರ್ಗತಂ ಜಗದ್ಯೋನಿಮಾವಾಹಯಾಮಿ।
23. ತ್ವಷ್ಟೃನಾಮಕಾದಿತ್ಯಂ ತದಂತರ್ಗತಂ ಅನಂತಮಾವಾಹಯಾಮಿ ।
24. ಸವಿತೃನಾಮಕಾದಿತ್ಯಂ ತದಂತರ್ಗತಂ ಶೇಷಶಾಯಿನಮಾವಾಹಯಾಮಿ।
25. ಭಗನಾಮಕಾದಿತ್ಯಂ ತದಂತರ್ಗತಂ ಸಂಕರ್ಷಣಮಾವಾಹಯಾಮಿ ।
26. ಧಾತೃನಾಮಕಾದಿತ್ಯಂ ತದಂತರ್ಗತಂ ಪ್ರದ್ಯುಮ್ನಮಾವಾಹಯಾಮಿ ।
27. ಪರ್ಜನ್ಯನಾಮಕಾದಿತ್ಯಂ ತದಂತರ್ಗತಂ ದೈತ್ಯಾರಿಮಾವಾಹಯಾಮಿ ।
28. ವರುಣನಾಮಕಾದಿತ್ಯಂ ತದಂತರ್ಗತಂ ವಿಶ್ವತೋಮುಖಮಾವಾಹಯಾಮಿ ।
29. ಮಿತ್ರನಾಮಕಾದಿತ್ಯಂ ತದಂತರ್ಗತಂ ಜನಾರ್ದನಮಾವಾಹಯಾಮಿ ।
30. ಶಕ್ರನಾಮಕಾದಿತ್ಯಂ ತದಂತರ್ಗತಂ ಧರಾವಾಸಮಾವಾಹಯಾಮಿ ।
31. ಉರುಕ್ರಮನಾಮಕಾದಿತ್ಯಂ ತದಂತರ್ಗತಂ ದಾಮೋದರಮಾವಾಹಯಾಮಿ ।
32. ವಷಟ್ಕಾರಮುಪಪದೇವತಾಂ ತದಂತರ್ಗತಂ ಅಘಾರ್ದನಮಾವಾಹಯಾಮಿ।
33. ಪ್ರಜಾಪತಿಮುಪಪದೇವತಾಂ ತದಂತರ್ಗತಂ ಶ್ರೀಪತಿಮಾವಾಹಯಾಮಿ।

ಆವಾಹಿತತ್ರಯಸ್ತ್ರಿಂಶದ್ದೇವತಾಭ್ಯೋ ನಮಃ ।
ಧ್ಯಾನಾವಾಹನಾದ್ಯುಪಚಾರಾನ್ ಸಮರ್ಪಯಾಮಿ ॥

ವಿಷ್ಣುಂ ಜಿಷ್ಣುಂ ಮಹಾವಿಷ್ಣುಂ ಹರಿಂ ಕೃಷ್ಣಮಧೋಕ್ಷಜಮ್ ।
ಕೇಶವಂ ಮಾಧವಂ ರಾಮಮಚ್ಯುತಂ ಪುರುಷೋತ್ತಮಮ್ ॥

ಗೋವಿಂದಂ ವಾಮನಂ ಶ್ರೀಶಂ ಶ್ರೀಕಂಠಂ ವಿಶ್ವಸಾಕ್ಷಿಣಮ್ ।
ನಾರಾಯಣಂ ಮಧುರಿಪುಮನಿರುದ್ಧಂ ತ್ರಿವಿಕ್ರಮಮ್ ॥

ವಾಸುದೇವಂ ಜಗದ್ಯೋನಿಮನಂತಂ ಶೇಷಶಾಯಿನಮ್ ।
ಸಂಕರ್ಷಣಂ ಚ ಪ್ರದ್ಯುಮ್ನಂ ದೈತ್ಯಾರಿಂ ವಿಶ್ವತೋಮುಖಮ್ ॥

ಜನಾರ್ದನಂ ಧರಾವಾಸಂ ದಾಮೋದರಮಘಾರ್ದನಮ್ ।
ಶ್ರೀಪತಿಂ ಚ ತ್ರಯಸ್ತ್ರಿಂಶದುದ್ದಿಶ್ಯ ಪ್ರತಿನಾಮಭಿಃ ॥

ಮಂತ್ರೈರೇತೈಶ್ಚ ಯೋ ದದ್ಯಾದ್ ತ್ರಯಸ್ತ್ರಿಂಶದಪೂಪಕಮ್ ।
ಪ್ರಾಪ್ನೋತಿ ವಿಪುಲಾಂ ಲಕ್ಷ್ಮೀಂ ಪುತ್ರಪೌತ್ರಾದಿಸಂತತಿಮ್ ॥

ಈ ಶ್ಲೋಕಗಳನ್ನು ಪಠಿಸಿ, ಅಪೂಪಗಳಿಗೆ ನಮಿಸಿ, ವಿಪ್ರರನ್ನು ಗಂಧ–ಪುಷ್ಪಾಕ್ಷತ– ತಾಂಬೂಲಾದಿಗಳಿಂದ ಪೂಜಿಸಿ ಅಪೂಪದಾನವನ್ನು ಮಾಡಬೇಕು.

ಅಪೂಪದಾನಮಂತ್ರ–

ವಿಷ್ಣುರೂಪೀ ಸಹಸ್ರಾಂಶುಃ ಸರ್ವಪಾಪಪ್ರಣಾಶನಃ ।
ಅಪೂಪಾನ್ನಪ್ರದಾನೇನ ಮಮ ಪಾಪಂ ವ್ಯಪೋಹತು ॥

ನಾರಾಯಣ ಜಗದ್ಬೀಜ ಭಾಸ್ಕರಪ್ರತಿರೂಪಧೃಕ್ ।
ವ್ರತೇನಾನೇನ ಪುತ್ರಾಂಶ್ಚ ಸಂಪದಂ ಚಾಭಿವರ್ಧಯ ॥

ಯಸ್ಯ ಹಸ್ತೇ ಗದಾಚಕ್ರೇ ಗರುಡೋ ಯಸ್ಯ ವಾಹನಮ್ ।
ಶಂಖಃ ಕರತಲೇ ಯಸ್ಯ ಸ ಮೇ ವಿಷ್ಣುಃ ಪ್ರಸೀದತು ॥

ಕಲಾಕಾಷ್ಠಾದಿರೂಪೇಣ ನಿಮೇಷಘಟಿಕಾದಿನಾ ।
ಯೋ ವಂ(ಪಂ)ಚಯತಿ ಭೂತಾನಿ ತಸ್ಮೈ ಕಾಲಾತ್ಮನೇ ನಮಃ ॥

ಕುರುಕ್ಷೇತ್ರಮಯೋ ದೇಶಃ ಕಾಲಃ ಪರ್ವ ದ್ವಿಜೋ ಹರಿಃ ।
ಪೃಥ್ವೀಸಮಮಿದಂ ದಾನಂ ಗೃಹಾಣ ಪುರುಷೋತ್ತಮ ॥

ಮಲಾನಾಂ ಚ ವಿಶುದ್ಧ್ಯರ್ಥಂ ಪಾಪಪ್ರಶಮನಾಯ ಚ ।
ಪುತ್ರಪೌತ್ರಾಭಿವೃದ್ಧ್ಯರ್ಥಂ ತವ ದಾಸ್ಯಾಮಿ ಭಾಸ್ಕರ ॥

(ಮಂತ್ರೇಣಾನೇನ ಯೋ ದದ್ಯಾತ್ ತ್ರಯಸ್ತ್ರಿಂಶದಪೂಪಕಾನ್ ।
ಪ್ರಾಪ್ನೋತಿ ವಿಪುಲಾಂ ಲಕ್ಷ್ಮೀಂ ಪುತ್ರ ಪೌತ್ರಾದಿಸಂಪದಃ ॥)

ಪದ್ಮಪುರಾಣದ ಈ ಶ್ಲೋಕಗಳಿಂದ 'ಅಮುಕನಾಮಕೋಽಹಂ (ತನ್ನ ಹೆಸರು) ಅಮುಕಶರ್ಮಣೇ (ಬ್ರಾಹ್ಮಣ ಹೆಸರು ತುಭ್ಯಂ ಸಂಪ್ರದದೇ ನ ಮಮ।' ಎಂದು ದಾನವಿತ್ತು, ದಕ್ಷಿಣೆಯನ್ನು ಕೊಟ್ಟು, ನಮಿಸಿ ಆಶೀರ್ವಾದವನ್ನು ಪಡೆಯಬೇಕು.

ಅನೇನ ತ್ರಯಸ್ತ್ರಿಂಶದಪೂಪದಾನೇನ ವಸು-ರುದ್ರ-ಆದಿತ್ಯ-
ವಷಟ್‌ಕಾರಾಂತರ್ಗತ ಶ್ರೀಭಾರತೀರಮಣ ಮುಖ್ಯಪ್ರಾಣಾಂತರ್ಗತ
ಶ್ರೀಪುರುಷೋತ್ತಮಃ ಪ್ರೀಯತಾಮ್ ।

॥ ಶ್ರೀ ಕೃಷ್ಣಾರ್ಪಣಮಸ್ತು ॥

ಪಾತುಂ ಪಯಾಂಸಿ ಶಿಶವೇ ಕಿಲ ಗೋಪ್ರದೋಽಸ್ಮೈ
ಪೂರ್ವಾಲಯಃ ಸ್ವಸುತಸೂನುತಯಾ ಪ್ರಜಾತಃ ।
ನಿರ್ವಾಣಹೇತುಮಲಭಿಷ್ಟ ಪರಾತ್ಮವಿದ್ಯಾಂ
ದಾನಂ ಧ್ರುವಂ ಫಲತಿ ಪಾತ್ರಗುಣಾನುಕೂಲ್ಯಾತ್ ॥

ವಾಯುದೇವರು ಮಧ್ವರಾಗಿ ಅವತರಿಸಿದ ಸಂದರ್ಭದಲ್ಲಿ ಅವರು ಶಿಶುವಾಗಿದ್ದಾಗ ಅವರು ಹಾಲು ಕುಡಿಯಲೆಂದು ಮೂಡಿಲ್ಲಾಯರು ಗೋದಾನ ಮಾಡಿದರು. ಅದರ ಫಲವಾಗಿ ಮೂಡಿಲ್ಲಾಯರು ತನ್ನ ಮಗನ ಮಗನಾಗಿ ಹುಟ್ಟಿ ಮಧ್ವಾಚಾರ್ಯರಿಂದ ಮೋಕ್ಷಸಾಧನವಾದ ಪರಮಾತ್ಮನ ವಿದ್ಯೆಯನ್ನು ಪಡೆದು ಉದ್ಧಾರವಾದರು. ಪಾತ್ರನ ಗುಣಕ್ಕೆ ಅನುಸಾರವಾಗಿ ದಾನವು ಫಲಿಸುವುದಷ್ಟೆ !

(ಮಧ್ವವಿಜಯ-2-10)

ಮಾಸಗಳ ದಾನಗಳು

ಚೈತ್ರಮಾಸದ ದಾನಗಳು –

ಚೈತ್ರಮಾಸದಲ್ಲಿ ಬಿಸಿಲ ಬೇಗೆಯಲ್ಲಿ ಪಯಣಿಸುವ ದಾರಿಹೋಕರಿಗಾಗಿ ದಾರಿಯಲ್ಲಿ ಅರವಟ್ಟಿಗೆಗಳನ್ನು ಏರ್ಪಡಿಸುವುದು, ನೆರಳನ್ನು ವ್ಯವಸ್ಥೆಗೊಳಿಸುವುದು ಶ್ರೇಷ್ಠ. ನೀರನ್ನು ಬಯಸುವವನು ನೀರನ್ನು, ತಂಪುನೆರಳನ್ನು ಬಯಸುವವನು ತಂಪು ನೆರಳನ್ನು, ಬೀಸಣಿಗೆಯನ್ನು ಬಯಸುವವನು ಬೀಸಣಿಗೆಯನ್ನು ಕೊಡಬೇಕು.

ನೀರು, ಛತ್ರಿ, ಬೀಸಣಿಗೆ, ನೀರು ತುಂಬಿದ ತಾಮ್ರದ ಪಾತ್ರೆ, ಕನ್ನಡಿ, ತಾಂಬೂಲ, ಬೆಲ್ಲ, ಹಿತವಾದ ಹಾಸಿಗೆ, ತುಪ್ಪ ತುಂಬಿದ ಕಂಚಿನ ಪಾತ್ರೆ, ಕಬ್ಬಿನ ರಸ, ಗೋಧಿ, ಮೊಸರನ್ನು, ತೆಂಗಿನಕಾಯಿ, ಮಾವಿನಹಣ್ಣುಗಳನ್ನು ದಾನ ಮಾಡಬೇಕು. ತೆಳುವಾದ ವಸ್ತ್ರ, ಪುಸ್ತಕ, ಕಮಂಡಲುಗಳನ್ನು ದಾನ ಮಾಡಬೇಕು. ಯತಿಗಳಿಗೆ ದಂಡದಾನ, ಮಠ–ದೇವಾಲಯಕ್ಕೆ ತೈಲದಾನಗಳು ಶ್ರೇಷ್ಠ.

ಹಣ್ಣು, ತರಕಾರಿ, ಗಡ್ಡೆ, ಗೆಣಸು, ಚಂದನ, ತಂಪುನೀರು, ತಂಪುದ್ರವ್ಯ, ಕರ್ಪೂರ, ಕಸ್ತೂರಿ ಮುಂತಾದವುಗಳನ್ನು ದಾನ ಮಾಡಬೇಕು.

ದೀಪದಾನ, ಧೇನುದಾನ, ಗೃಹದಾನ, ಆಕಳಹಾಲು, ಮೊಸರು, ತುಪ್ಪ, ಮಜ್ಜಿಗೆ, ಬೆಣ್ಣೆಗಳ ದಾನ, ಯತಿಗಳಿಗೆ–ಬ್ರಾಹ್ಮಣರಿಗೆ ಭೋಜನ, ಪುಸ್ತಕದಾನ, ಕುಂಕುಮ ಕೇಸರಿದಾನ, ಜಾತೀಫಲ, ಲವಂಗ, ಜಾಜಿಪತ್ರಿ, ಕಗ್ಗಲೀ, ದಾಳಿಂಬೆ, ಸುಗಂಧದ್ರವ್ಯ, ಮಾದಾಳ, ಬೆಟ್ಟಮಲ್ಲಿಗೆ, ನಿಂಬೆಹಣ್ಣು, ಹಲಸು, ಬೆಳವಲ ಹಣ್ಣು, ಕುಂಬಳಕಾಯಿ ಮುಂತಾದವುಗಳನ್ನು ನೀಡಬೇಕು. ದಾರಿಯಲ್ಲಿ ವಿಶ್ರಾಂತಿ ಧಾಮನಿರ್ಮಾಣ, ದಾರಿಯ ಕಲ್ಲು ಮುಳ್ಳು ತೆಗೆದು ಶೋಧನೆ ಮಾಡುವದು ಶ್ರೇಷ್ಠ. ಚಪ್ಪಲಿದಾನ, ಆನೆ, ಕುದುರೆ ಮುಂತಾದ ವಾಹನ ದಾನವೂ ಉತ್ತಮ.

ವೈಶಾಖಮಾಸದ ದಾನಗಳು–

ಈ ಮಾಸದಲ್ಲಿ ಜಲದಾನ ಹಾಗು ಪ್ರಪಾದಾನಗಳು ಬಹಳ ಮುಖ್ಯ, ನೀರು, ನೆರಳು, ಬೀಸಣಿಗೆ, ಛತ್ರಿ, ಪಾದರಕ್ಷೆ, ತೆಳುವಾದ ಹಿತವಾದ ವಸ್ತ್ರ ಈ ದಾನಗಳು ಮುಖ್ಯ.

ಈ ಮಾಸದಲ್ಲಿ ಉದಕುಂಭ (ನೀರು ತುಂಬಿದ ತಾಮ್ರದ ಅಥವಾ ಮಣ್ಣಿನ ಗಡಿಗೆ) ದಾನ ಕೊಡದಿದ್ದರೆ ಚಾತಕಪಕ್ಷಿಯ ಜನ್ಮ ಬರುತ್ತದೆ. ಬಿಸಿಲಿನಲ್ಲಿ ಬಳಲಿದ ವಿಪ್ರೋತ್ತಮನಿಗೆ ಬಟ್ಟೆಯಿಂದ ಗಾಳಿ ಹಾಕಿದರೂ ಮಹಾಪುಣ್ಯ. ತಾಡಪತ್ರಿಯ ಬೀಸಣಿಕೆಯನ್ನು ಕೊಡುವುದರಿಂದಲೂ ಪಾಪಪರಿಹಾರ ವಾಗುವುದು. ಛತ್ರಿಯನ್ನು ದಾನ ನೀಡುವುದರಿಂದ ಆಧ್ಯಾತ್ಮಿಕಾದಿ ತಾಪಪರಿಹಾರವಾಗುವುದು. ಪಾದರಕ್ಷೆಗಳನ್ನು ದಾನ ಕೊಡುವುದರಿಂದ ನರಕದ ಕ್ಲೇಶ ತಪ್ಪುವುದು. ದಣಿದು ಬಂದ ಅತಿಥಿಗೆ ಅದರಲ್ಲೂ ವಿಪ್ರರಿಗೆ ಅನ್ನದಾನದಿಂದ ತೃಪ್ತಿಪಡಿಸುವುದರಿಂದ ಬಹುಪುಣ್ಯಪ್ರಾಪ್ತಿ, ಬಿಸಿಲಬೇಗೆಯಲ್ಲಿ ಬಳಲಿದ ವಿಪ್ರನಿಗೆ ವಿಶ್ರಾಂತಿ ಪಡೆಯಲು ಹಿತವಾದ ಮಂಚ, ಹಾಸಿಗೆಗಳನ್ನು ದಾನ ನೀಡುವುದರಿಂದ ಜ್ಞಾತ, ಅಜ್ಞಾತ ಪಾಪಗಳು ಪರಿಹಾರವಾಗುವವು. ತಲೆಗೆ ಹಿತವಾದ ದಿಂಬುಗಳನ್ನು ದಾನ ಮಾಡಬಹುದು. ಅದರಿಂದ ಆಯುಷ್ಯ, ಆರೋಗ್ಯ, ಯಶಸ್ಸುಗಳು ಲಭಿಸುತ್ತವೆ. ಚಾಪೆ ಮುಂತಾದ ಆಸನದಾನವೂ ವಿಹಿತವಾಗಿದೆ. ಹಿತವಾದ ಕಂಬಳಿಯನ್ನು ಮಲಗಲು ಕೊಡಬಹುದು. ತುಂಬ ತೆಳುವಾದ ಮೃದುವಾದ ವಸ್ತ್ರವನ್ನು ವಿಪ್ರನಿಗೆ ಕೊಡುವುದರಿಂದ ಪೂರ್ಣಾಯುಷ್ಯ ಪ್ರಾಪ್ತಿ. ಒಳಗಿನ ತಾಪವನ್ನು ಪರಿಹರಿಸುವ ಪಚ್ಚಕರ್ಪೂರದಾನ, ಪುಷ್ಪದಾನ, ಚಂದನದಾನ, ಲಾವಂಚದಿಂದ ಸುವಾಸಿತ ಜಲದಾನ, ಗೋರೋಚನ, ಕಸ್ತೂರಿ, ತಾಂಬೂಲದಾನ, ತೆಂಗಿನಕಾಯಿ ದಾನಗಳೂ ವಿಹಿತವಾಗಿವೆ. ನಿಂಬೆರಸ, ಉಪ್ಪು, ಮೊದಲಾದವುಗಳಿಂದ ರುಚಿಯಾದ ತಂಪಾದ ಮಜ್ಜಿಗೆಯನ್ನು ದಾನ ಮಾಡುವುದು ತುಂಬ ವಿಶೇಷವಾಗಿದೆ. ತುಪ್ಪದಾನ, ಸೌತೆಕಾಯಿ ಬೆರೆಸಿದ ಕೋಸಂಬರಿದಾನ, ಕಬ್ಬಿನ

ದಾನ, ಹಣ್ಣಿನಿಂದ ಮಾಡಿದ ಪಾನಕದಾನ, ಪಿತೃಗಳ ಪ್ರೀತಿಗಾಗಿ ಚೈತ್ರ ಅಮಾವಾಸ್ಯೆಯಂದು ಪಾನಕ ತುಂಬಿದ ಕುಂಭದಾನ ನೂರಾರು ಗಯಾಶ್ರಾದ್ಧಮಾಡಿದ ಪುಣ್ಯವನ್ನು ತಂದು ಕೊಡುತ್ತದೆ.

ಜಲದಾನದ ಹಿರಿಮೆ–

ಹಿಂದೊಮ್ಮೆ ಇಕ್ಷ್ವಾಕುವಂಶದಲ್ಲಿ ಹೇಮಾಂಗನೆಂಬ ರಾಜನಿದ್ದನು. ಅವನು ವಿಪುಲವಾಗಿ ಗೋ–ಭೂ–ತಿಲ–ಹಿರಣ್ಯಾದಿ ದಾನಗಳನ್ನು ಕೊಟ್ಟಿದ್ದನು. ಆದರೆ ಜಲದಾನವನ್ನು ಮಾತ್ರ ಮಾಡಿರಲಿಲ್ಲ. ಎಲ್ಲೆಡೆ ಬಿಟ್ಟಿಯಾಗಿ ಅನಾಯಾಸವಾಗಿ ಲಭ್ಯವಾಗುವ ಜಲವನ್ನು ಏಕೆ ಕೊಡಬೇಕು? ಅದರಿಂದೇನು ಪುಣ್ಯ ಬಂದೀತು? ಎಂದು ಅವನ ಕುತರ್ಕ. ಪುರೋಹಿತ ವಸಿಷ್ಠರು ಜಲದಾನ ಮಾಡುವಂತೆ ಎಚ್ಚರಿಸಿದರೂ ತನ್ನ ಮೊಂಡುವಾದವನ್ನು ಮುಂದಿಟ್ಟ.

ಅವನು ಅಂಗವಿಕಲರು, ದೀನದರಿದ್ರರು, ಜೀವನೋಪಾಯವಿರದ ಬ್ರಾಹ್ಮಣರನ್ನೇ ಆದರಿಸುತ್ತಿದ್ದ. ಅವರಿಗೇ ದಾನಗಳನ್ನು ನೀಡುತ್ತಿದ್ದ. ಶ್ರೋತ್ರಿಯರು, ತತ್ವಜ್ಞಾನಿಗಳೂ ಆದ ವಿಪ್ರರನ್ನು ದಾನಾದಿಗಳಿಂದ ಪೂಜಿಸುತ್ತಿರಲಿಲ್ಲ. ವಿದ್ವಾಂಸರನ್ನು ಎಲ್ಲರೂ ಸತ್ಕರಿಸುತ್ತಾರೆ. ಆದ್ದರಿಂದ ಅವರಿಗೆ ನಾನು ದಾನಾದಿಗಳಿಂದ ಸತ್ಕಾರ ಮಾಡುವುದಿಲ್ಲ. ಬಡ ಅಜ್ಞಾನಿ ಬ್ರಾಹ್ಮಣರನ್ನು ಯಾರೂ ಸನ್ಮಾನಿಸುವುದಿಲ್ಲ. ಆದ್ದರಿಂದ ನಾನು ಅವರನ್ನೇ ದಾನಾದಿಗಳಿಂದ ಅರ್ಚಿಸುತ್ತೇನೆ ಎನ್ನುತ್ತಿದ್ದ. ಹೀಗೆ ಅಪಾತ್ರರಲ್ಲಿ ದಾನ ಮತ್ತು ಜಲದಾನ ಮಾಡದಿರುವುದು ಈ ಎರಡು ದೋಷಗಳಿಂದ ಆ ರಾಜ ಮೂರು ಜನ್ಮದಲ್ಲಿ ಚಾತಕ ಪಕ್ಷಿಯಾಗಿ, ಒಂದು ಜನ್ಮದಲ್ಲಿ ಹದ್ದಾಗಿಯೂ, ಏಳು ಜನ್ಮಗಳಲ್ಲಿ ನಾಯಿಯಾಗಿಯೂ ಹುಟ್ಟಿದ. ಬಳಿಕ ಮಿಥಿಲಾದೇಶದ ಶ್ರುತಕೀರ್ತಿ ಎಂಬ ರಾಜನ ಮನೆಯಲ್ಲಿ ಹಲ್ಲಿಯಾಗಿ ಹುಟ್ಟಿದ. ಬಾಗಿಲಿನ ಸಂದಿಯಲ್ಲಿದ್ದು ಕೀಟಗಳನ್ನು ತಿನ್ನುತ್ತ ಬಹುವರ್ಷಗಳನ್ನು ಕಳೆದ.

ಒಮ್ಮೆ ಶ್ರುತದೇವನೆಂಬ ಋಷಿವರ್ಯರು ಸಂಚಾರಶ್ರಮದಿಂದ ಬಳಲಿ ಮಧ್ಯಾಹ್ನಸಮಯಕ್ಕೆ ರಾಜನ ಮನೆಗೆ ಬಂದರು. ಸಂತಸಗೊಂಡ ರಾಜ

ಅವರನ್ನು ಸ್ವಾಗತಿಸಿ ಸತ್ಕರಿಸಿ ಅವರ ಪಾದವನ್ನು ನೀರು ಹಾಕಿ ತೊಳೆದನು. ಆ ವಿಪ್ರಪಾದೋದಕವನ್ನು ತಲೆಯ ಮೇಲೆ ಹಾಕಿಕೊಂಡನು. ಆಗ ನೀರ ಕೆಲವು ಹನಿಗಳು ಬಾಗಿಲ ಬಳಿಯಿದ್ದ ಹಲ್ಲಿಯ ಮೇಲೂ ಬಿದ್ದವು. ಕೂಡಲೆ ಆ ಹಲ್ಲಿಗೆ ಪೂರ್ವಜನ್ಮದ ಸ್ಮೃತಿ ಬಂತು. 'ಕಾಪಾಡು ಕಾಪಾಡು' ಎಂದು ಶ್ರುತದೇವರಲ್ಲಿ ಮೊರೆಯಿಟ್ಟಿತು. ಋಷಿಗಳಿಗೆ ವಿಸ್ಮಯವಾಯಿತು. 'ನೀನು ಯಾರು? ಯಾವ ಕರ್ಮದ ಪರಿಣಾಮ ಈ ಹಲ್ಲಿಜನ್ಮ?' ಎಂದು ಕೇಳಿದರು. 'ಋಷಿವರ್ಯ! ನಾನು ಇಕ್ಷ್ವಾಕುವಂಶದ ಅರಸು. ವೇದಶಾಸ್ತ್ರಗಳನ್ನು ಬಲ್ಲ ನಾನು ಬೇಕಾದಷ್ಟು ದಾನಗಳನ್ನು, ಯಜ್ಞ-ಯಾಗಗಳನ್ನು ಮಾಡಿದ್ದೇನೆ. ಧರ್ಮದಿಂದ ರಾಜ್ಯಪರಿಪಾಲನೆಯನ್ನೂ ಮಾಡಿದ್ದೇನೆ. ಆದರೂ ಸದ್ಗತಿ ದೊರೆಯದೆ ಮೂರು ಬಾರಿ ಚಾತಕಜನ್ಮ, ಒಂದು ಬಾರಿ ಹದ್ದಿನ ಜನ್ಮ, ಏಳು ಬಾರಿ ನಾಯಿಯ ಜನ್ಮ ಪಡೆದು, ಈಗ ಹಲ್ಲಿಯಾಗಿ ಹುಟ್ಟಿದ್ದೇನೆ. ಇಪ್ಪತ್ತೆಂಟು ಬಾರಿ ಇನ್ನೂ ಹಲ್ಲಿಯಾಗಿ ಹುಟ್ಟಬೇಕಿದೆ. ಆ ಜನ್ಮಗಳಿಂದ ಹೆದರಿದ್ದೇನೆ. ಈ ದುರ್ಗತಿಯ ಕಾರಣ ತಿಳಿದಿಲ್ಲ. ರಾಜ ಪೂಜೆ ಮಾಡಿದ ನಿಮ್ಮ ಪಾದೋದಕದ ಸ್ಪರ್ಶವಾಗಿ ಪೂರ್ವಜನ್ಮದ ಸ್ಮರಣೆ ಬಂದಿದೆ. ತಾವೇ ನನ್ನನ್ನು ಕಾಯಬೇಕು ಸ್ವಾಮಿ' ಎಂದು ಪ್ರಾರ್ಥಿಸಿದನು.

ಶ್ರುತದೇವಮುನಿಗಳು ತಮ್ಮ ವಿಜ್ಞಾನದೃಷ್ಟಿಯಿಂದ ವಿಚಾರ ಮಾಡಿ ನುಡಿದರು- 'ನೀನು ಹಿಂದೆ ಮಾಧವಪ್ರಿಯವಾದ ವೈಶಾಖಮಾಸದಲ್ಲಿ ಸುಲಭವಾಗಿ ಸಿಗುವುದೆಂಬ ಅಸಡ್ಡೆಯಿಂದ ಬಿಸಿಲಬೇಗೆಯಲ್ಲಿ ಬಳಲಿದ ವಿಪ್ರರಿಗೂ ಜಲದಾನ ಮಾಡಲಿಲ್ಲ. ಹಾಗೆಯೇ ಪಾತ್ರರನ್ನು ಬಿಟ್ಟು ಅಪಾತ್ರರಲ್ಲಿ ದಾನ ಮಾಡಿರುವಿ. ಪ್ರಜ್ವಲಿಸುವ ಅಗ್ನಿಯನ್ನು ಬಿಟ್ಟು ಬೂದಿಯಲ್ಲಿ ಹೋಮಿಸಬಹುದೇ? ಅರಳಿಮರವನ್ನು ಪೂಜಿಸುತ್ತಾರೆಯೇ ಹೊರತು ಇತರ ಮರಗಳನ್ನಲ್ಲ.

ಅನಾಥತ್ವ, ಬಡತನಗಳು ಪೂಜ್ಯತೆಗೆ ಎಂದೂ ನಿಮಿತ್ತಗಳಾಗವು. ದೀನರು, ಅನಾಥರು, ದರಿದ್ರರು, ಅಂಗವಿಕಲರು ದಯಾಪಾತ್ರರೇ ಹೊರತು ದಾನಪಾತ್ರರಲ್ಲ.

ತಪೋನಿಷ್ಠಾಃ ಜ್ಞಾನನಿಷ್ಠಾಃ ಶ್ರುತಿಶಾಸ್ತ್ರವಿಶಾರದಾಃ ।
ವಿಷ್ಣುರೂಪಾಃ ಸದಾ ಪೂಜ್ಯಾಃ ನ ಇತರೇ ತು ಕದಾಚನ ॥

ತತ್ರಾಪಿ ಜ್ಞಾನಿನಃ ಅತ್ಯರ್ಥಂ ವಿಪ್ರಾಃ ವಿಷ್ಣೋಃ ಸದೈವ ಹಿ ।
ಜ್ಞಾನಿನಾಮಪಿ ಭೂಪಾಲ ವಿಷ್ಣುರೇವ ಸದಾ ಪ್ರಿಯಃ ॥

ತಪೋನಿಷ್ಠರು, ಜ್ಞಾನನಿಷ್ಠರೂ, ವೇದಶಾಸ್ತ್ರಗಳನ್ನು ಬಲ್ಲವರು ವಿಷ್ಣುಸನ್ನಿಧಾನದ ಪ್ರತಿಮೆಗಳು. ಅವರೇ ಎಂದಿಗೂ ಪೂಜ್ಯರು, ಇತರರಲ್ಲ. ಜ್ಞಾನಿಗಳೇ ವಿಷ್ಣುವಿಗೆ ಸದಾ ಪ್ರಿಯರು. ಜ್ಞಾನಿಗಳಿಗೂ ವಿಷ್ಣುವೇ ಸದಾ ಪ್ರಿಯನು. ಆದ್ದರಿಂದ ಅವರೇ ಅತ್ಯಂತ ಪೂಜ್ಯರು ಹಾಗೂ ದಾನಪಾತ್ರರು. ಅವರ ಅವಜ್ಞೆ–ತಿರಸ್ಕಾರಗಳು ಅನರ್ಥಪ್ರದಗಳು. ನಿನ್ನ ದುರ್ಗತಿಗೆ ಈ ಜ್ಞಾನಿತಿರಸ್ಕಾರವೇ ಕಾರಣವೆಂದರು. ಈ ವೈಶಾಖಮಾಸದ ಒಂದು ದಿನದ ಸ್ನಾನದ ಪುಣ್ಯವನ್ನು ನಿನಗೆ ಕೊಡುತ್ತೇನೆ. ಅದರಿಂದ ನಿನಗಾಗಬಹುದಾದ ಅನರ್ಥಗಳೆಲ್ಲ ಪರಿಹಾರವಾಗುವವು. ಹೀಗೆ ಹೇಳಿ ಪುಣ್ಯಧಾರೆಯೆರೆದರು. ಅವರಿಂದ ಹೇಮಾಂಗರಾಜನು ಹಲ್ಲಿಯ ಜನ್ಮ ಕಳೆದು ದಿವ್ಯ ವಿಮಾನವೇರಿ ಸ್ವರ್ಗ ಸೇರಿದನು. ಬಹುಕಾಲ ದೇವಲೋಕದ ಸುಖಭೋಗಗಳನ್ನು ಪೂರೈಸಿ ಇಕ್ಷ್ವಾಕುವಂಶದಲ್ಲಿ ಕಾಕುತ್ಸ್ಥ ಎಂಬ ರಾಜನಾಗಿ ಮತ್ತೆ ಹುಟ್ಟಿ ಬಂದು ಸಪ್ತದ್ವೀಪಾಧಿಪತಿಯಾದನು. ವಸಿಷ್ಠರ ಮಾರ್ಗದರ್ಶನದಲ್ಲಿ ವೈಶಾಖಮಾಸದ ಧರ್ಮಗಳನ್ನು ಅನುಷ್ಠಾನ ಮಾಡಿ ಕ್ರಮವಾಗಿ ವಿಷ್ಣು ಸಾಯುಜ್ಯವನ್ನು ಪಡೆದನು.

ಅನ್ನದಾನ ಮಾಡದ ಪರಿಣಾಮ

ನೀರು ಮತ್ತು ಅನ್ನಗಳು ಸರ್ವರ ಪ್ರಾಣಾಧಾರವಾಗಿವೆ. ಆದುದರಿಂದ ಇವೆರಡನ್ನು ಅವಶ್ಯವಾಗಿ ಸರ್ವದಾ ದಾನ ಮಾಡಬೇಕು. ಅನ್ನದಾನವನ್ನು ಮಾಡದಿದ್ದರೆ ಪಿಶಾಚಜನ್ಮ ಬರುವುದು.

ಶ್ರುತದೇವರೆಂಬ ಬ್ರಾಹ್ಮಣರು ಶ್ರುತಕೀರ್ತಿಮಹಾರಾಜನಿಗೆ ಈ ಕಥೆಯನ್ನು ಹೇಳಿದರು– 'ನನ್ನ ತಂದೆಯು ಅನ್ನದಾನ ಮಾಡದೆ ರೇವಾನದೀ ತೀರದಲ್ಲಿ ಪಿಶಾಚನಾಗಿ ಹುಟ್ಟಿದ್ದನು. ಹಸಿವೆ, ಬಾಯಾರಿಕೆಗಳಿಂದ ಕಂಗೆಟ್ಟು ತನ್ನ ದೇಹದ

ಮಾಂಸವನ್ನೇ ಕಿತ್ತು ತಿನ್ನುತ್ತ ಶಾಲ್ಮಲೀ ವೃಕ್ಷದ ಬುಡದಲ್ಲಿದ್ದನು. ಕಂಠನಾಲವು ಚಿಕ್ಕದಾಗಿ ತಿಂದ ಮಾಂಸ ಗಂಟಲಲ್ಲೆ ಉಳಿದು ಹಿಂಸೆಯಾಗುತ್ತಿತ್ತು. ಬಾವಿ ಕೆರೆಗಳ ನೀರೆಲ್ಲ ಆ ಪಿಶಾಚಿಗೆ ವಿಷದಂತೆ ಕಾಣುತ್ತಿತ್ತು. ದೈವಯೋಗದಿಂದ ನಾನು ಅಲ್ಲಿಗೆ ಹೋದೆ. ನನ್ನನ್ನೂ ನುಂಗಲು ಪ್ರಯತ್ನಿಸಿ ನನ್ನ ಬ್ರಹ್ಮತೇಜಸ್ಸಿಗೆ ಹೆದರಿ ಸುಮ್ಮನಾಯಿತು. ನಾನು ಕರುಣೆಯಿಂದ ಪಿಶಾಚಿ ಅವಸ್ಥೆಯ ಕಾರಣವನ್ನು ಕೇಳಿದೆ. ಹಿಂದಿನ ಜನ್ಮದ ಬಗ್ಗೆ ಹೇಳತೊಡಗಿತು– ಆನರ್ತ ಎಂಬ ದೇಶದ 'ಭೂವರ' ಎಂಬ ಪಟ್ಟಣದಲ್ಲಿ ಸಂಕೃತಿಗೋತ್ರೋತ್ಪನ್ನನಾಗಿ, ಮೈತ್ರ ಎಂಬ ಹೆಸರಿನವನಾಗಿದ್ದೆ. ತಪಸ್ಸು, ವಿದ್ಯಾದಾನ, ಯಜ್ಞಾನುಷ್ಠಾನಗಳಲ್ಲಿ ಆಸಕ್ತನಾಗಿದ್ದೆ. ಆದರೂ ಲೋಭದಿಂದ ವೈಶಾಖದಲ್ಲಿ ಯಾರಿಗೂ ಅನ್ನದಾನ ಮಾಡಲಿಲ್ಲ. ಭಿಕ್ಷೆಯನ್ನೂ ಹಾಕಲಿಲ್ಲ. ಅದರ ಫಲವಾಗಿ ಪಿಶಾಚನಾಗಿದ್ದೇನೆ. ಹಸಿವೆಯ ಬಾಧೆಯಿಂದ ನನ್ನ ಮಾಂಸವನ್ನೆ ತಿನ್ನುವ ಪರಿಸ್ಥಿತಿ ಬಂದಿದೆ. ನನ್ನ ಮನೆಯಲ್ಲಿ ಶ್ರುತದೇವನೆಂಬ ನನ್ನ ಮಗನಿದ್ದಾನೆ. ಅವನನ್ನು ಕಂಡರೆ ನನ್ನ ಈ ದುರವಸ್ಥೆಯನ್ನು ತಿಳಿಸು. ವೈಶಾಖದಲ್ಲಿ ಪ್ರಾತಃ ಸ್ನಾನ ಮಾಡಿ, ವಿಷ್ಣುಪೂಜೆ ಮಾಡಿ, ಅನ್ನವನ್ನು ನಿವೇದಿಸಿ ಬ್ರಾಹ್ಮಣೋತ್ತಮರಿಗೆ ಭೋಜನ ಹಾಕುವಂತೆ ಹೇಳು, ಎಂದಿತು.

ನಾನು ನಮಸ್ಕಾರ ಮಾಡಿ ನಾನೇ ಆ ಶ್ರುತದೇವನೆಂದು ವಿಜ್ಞಾಪನೆ ಮಾಡಿ, ನನ್ನ ತಂದೆಯ ಆಜ್ಞೆಯಂತೆ ವೈಶಾಖದಲ್ಲಿ ಭಗವದಾರಾಧನೆ ಮಾಡಿ ಅನ್ನದಾನ ಮಾಡಿಸಿ, ಅದರಿಂದ ಪಿಶಾಚಿಜನ್ಮ ನಿವೃತ್ತಿಯಾಗಿ ದಿವ್ಯ ವಿಮಾನವೇರಿ ಭಗವಂತನ ಬಳಿ ಸೇರಿದರು ನನ್ನ ತಂದೆ' ಎಂದು.

ಜ್ಯೇಷ್ಠಮಾಸದ ದಾನಗಳು

ಈ ಮಾಸದ ಎಲ್ಲ ದಿನಗಳು ಪುಣ್ಯಪ್ರದಗಳಾದರೂ ದಶಮಿಗೆ ಬಹಳ ಮಹತ್ತ್ವ ಹೇಳಲಾಗಿದೆ. ದಶಮಿಯು ಅಧಿಕ ಪುಣ್ಯಪ್ರದವಲ್ಲದೆ ದಶವಿಧ ಪಾಪಗಳನ್ನು ಬಗೆಹರಿಸುವ ಪುಣ್ಯದಿವಸವಾಗಿದ್ದು ಅಂದು

ಜಲಪೂರ್ಣಕುಂಭದಾನ, ಬೀಸಣಿಕೆಯ ದಾನ, ಚಂದನ, ಛತ್ರ, ಪಾದರಕ್ಷೆಗಳ ದಾನಗಳನ್ನು ತ್ರಿವಿಕ್ರಮನ ಪ್ರೀತ್ಯರ್ಥವೆಂದು ಸಂಕಲ್ಪಿಸಿ ದಾನ ನೀಡಬೇಕು.

ದಾನಮಂತ್ರಗಳು ಹೀಗಿವೆ–

ಚಪ್ಪಲಿದಾನ–

ಉಪಾನಹೌ ಪ್ರದಾಸ್ಯಾಮಿ ಕಂಟಕಾದಿನಿವಾರಣೇ ।
ಸರ್ವಸ್ಥಾನೇಷು ಸುಖದೇ ಅತಃ ಶಾಂತಿಂ ಪ್ರಯಚ್ಛ ಮೇ ॥

ಛತ್ರದಾನ–

ಇಹಾಮುತ್ರಾತಪತ್ರಾಣಿ ಕುರು ಮೇ ಕೇಶವ ಪ್ರಭೋ ।
ಛತ್ರಂ ತ್ವತ್ಪ್ರೀತಯೇ ದತ್ತಂ ಬ್ರಾಹ್ಮಣಾಯ ಮಯಾ ತವ ॥

ಉದಕುಂಭದಾನ–

ಏಷ ಕುಂಭೋ ಮಯಾ ದತ್ತಃ ಶರ್ಕರಾಜಲಪೂರಿತಃ ।
ಪ್ರದಾನಾದಸ್ಯ ತೃಪ್ಯಂತು ತ್ರಯಸ್ತ್ರಿಂಶತ್ತು ದೇವತಾಃ ॥

ಬೀಸಣಿಕೆ ದಾನ–

ಘರ್ಮಶಾಂತಿಕರಂ ನಿತ್ಯಂ ವ್ಯಜನಂ ವಿಷ್ಣುವಲ್ಲಭಮ್ ।
ತ್ರಿವಿಕ್ರಮಸ್ಯ ಪ್ರೀತ್ಯರ್ಥಂ ಭೂಸುರಾಯ ದದಾಮ್ಯಹಮ್ ॥

ಚಂದನದಾನ–

ಚಂದನಂ ರುಚಿರಂ ಚಾರು ಕರ್ಪೂರೋಶೀರಸಂಯುತಮ್ ।
ಅಸ್ಯ ಪ್ರದಾನಾತ್ ತೃಪ್ಯಂತು ದೇವರ್ಷಿಪಿತೃಮಾನವಾಃ ॥

ಜಲದಾನದ ಮಹತ್ತ್ವ

ಈ ಮಾಸದಲ್ಲೂ ಜಲದಾನಕ್ಕೆ ಬಹಳ ಮಹತ್ತ್ವವನ್ನು ತಿಳಿಸಲಾಗಿದೆ.

ನೀರಿಲ್ಲದ ಸ್ಥಳದಲ್ಲಿ ಎಲ್ಲ ಪ್ರಾಣಿಗಳಿಗೂ ಕುಡಿಯಲು ನೀರು ದೊರಕುವ ವ್ಯವಸ್ಥೆ ಮಾಡಬೇಕು. ಅದು ಅಶ್ಯಕವೆನಿಸಿದರೆ ಪ್ರತಿನಿತ್ಯವೂ ಬ್ರಾಹ್ಮಣೋತ್ತಮನಿಗೆ ಜಲದಾನ ಮಾಡಬೇಕು. ಅಶ್ವತ್ಥ ವಟ ಮುಂತಾದ ವೃಕ್ಷಾದಿಗಳಿಗೂ ನೀರೆರೆಯಬೇಕು.

ಜಲದಾನವನ್ನು ಮಾಡದಿದ್ದವರು ಅನೇಕ ನರಕಗಳನ್ನು ಸೇರಿ ಮತ್ತೆ ಚಾತಕಪಕ್ಷಿಯಾಗಿ ಹುಟ್ಟುವರು, ಇದಕ್ಕೊಂದು ಸಂವಾದಿಯಾದ ಇತಿಹಾಸ–

ಹಿಂದೆ ತ್ರೇತಾಯುಗದ ಕೊನೆಯಲ್ಲಿ ಮಾಹಿಷ್ಮತೀಪಟ್ಟಣದಲ್ಲಿದ್ದ ಸುಮತು–ಗುಣಮತೀ ಎಂಬ ಧಾರ್ಮಿಕ ದಂಪತಿಗಳ ಮಗನಾಗಿ ದೇವಶರ್ಮ ನೆಂಬುವನಿದ್ದ. ದೇವತಾರ್ಚನೆ, ಅತಿಥಿ ಅಭ್ಯಾಗತರ ಸೇವೆಗಳಲ್ಲಿ ಆಸಕ್ತಿ ಹೊಂದಿದ್ದ. ಆತನೊಮ್ಮೆ ದೈವಯೋಗದಿಂದ ಸಮಿತ್ತು ತರಲು ಕಾಡಿಗೆ ಹೋದ. ಸೂರ್ಯನ ಬಿರುಬಿಸಿಲಿನ ಬೇಗೆಯಿಂದ ಬಳಲಿ, ಸರೋವರವೊಂದರ ಬಳಿ ಹೋಗಿ, ನೀರು ಕುಡಿದು ಮರದ ನೆರಳಿನಲ್ಲಿ ಮಲಗಿದ. ಬಾಯಾರಿದ ಕಾಡಿನ ಅನೇಕ ಹಕ್ಕಿಗಳು, ಮೃಗಗಳು ಇವನಿಗೆ ಹೆದರಿ ನೀರು ಕುಡಿಯದೆ ಸತ್ತವು. ಇದರ ಅರಿವಿರದ ಆ ಬ್ರಾಹ್ಮಣ ನಿದ್ರೆ ಮುಗಿಸಿ ಎದ್ದು ಮನೆಗೆ ಹೋದವನು ತಿಳಿಯದೆ ಅಂಟಿಕೊಂಡ ಈ ಪಾಪದ ಫಲವಾಗಿ ಮರಣ ಹೊಂದಿದನು. ಅವನ ಪತ್ನಿಯೂ ಅಗ್ನಿಪ್ರವೇಶ ಮಾಡಿದಳು. ನಾನಾ ನರಕಗಳನ್ನು ಸೇರಿ ಕ್ಲೇಶವುಂಡು ತನ್ನ ಪತ್ನಿಯೊಂದಿಗೆ ಚಾತಕಪಕ್ಷಿಯಾಗಿ ಜನ್ಮ ಪಡೆದ. ಪೂರ್ವಜನ್ಮದ ಪಾಪದ ಸ್ಮೃತಿಯಿದ್ದು ದುಃಖಿತನಾಗಿ ತನ್ನ ಮೊದಲ ಮನೆಯ ಅಂಗಳದ ಮರದ ಮೇಲೆಯೇ ಕೂತು ಅಳತೊಡಗಿದ. ಅವನ ಪುತ್ರ ಅಳು ಕೇಳಲಾಗದೆ ಮರದಿಂದ ಅವುಗಳನ್ನು ಓಡಿಸಲು ಬಹು ಪ್ರಯತ್ನಿಸಿದ. ವಿಫಲನಾದ ಬಳಿಕ ಕೋಪದಿಂದ ಆ ಹಕ್ಕಿಯ ಗೂಡನ್ನೇ ಸುಟ್ಟು ಹಾಕಿದ. ಸುಟ್ಟ ರೆಕ್ಕೆಯ ಹಕ್ಕಿಗಳು ಆಗಲೂ ಮರ ಬಿಡಲಾರದೆ ಕೆಳಗೆ ಬಿದ್ದು ಪರಸ್ಪರ ಕಷ್ಟಗಳನ್ನು ಹೇಳಿಕೊಂಡವು. ಆ ಸಂಭಾಷಣೆಯನ್ನು ಕೇಳಿ ವಿಸ್ಮಯಗೊಂಡ ಪುತ್ರ ಋಷಿಗಳ ಆಶ್ರಮಕ್ಕೆ ಹೋಗಿ ನಡೆದ ವೃತ್ತಾಂತವನ್ನು, ಕೇಳಿದ ಸಂಗತಿಯನ್ನು ಒಪ್ಪಿಸಿ, ಪರಿಹಾರವೇನು? ಹೇಳಿ ಎಂದು ವಿಜ್ಞಾಪಿಸಿಕೊಂಡನು.

ಮಾರ್ಗಮಧ್ಯದಲ್ಲಿ ಅರವಟ್ಟಿಗೆಗಳನ್ನು ಕಟ್ಟಿಸಿ ಪಶುಪಕ್ಷಿಗಳಿಗೆ ನೀರಿನ ವ್ಯವಸ್ಥೆ ಮಾಡೆಂದರು. ಅದರಂತೆಯೇ ಶ್ರದ್ಧೆಯಿಂದ ನಿರ್ಜಲವಾದ ಪ್ರದೇಶದಲ್ಲಿ ಅರವಟ್ಟಿಗೆಯನ್ನು ಕಟ್ಟಿಸಿ ನೀರಿನ ಸೌಕರ್ಯ ಒದಗಿಸಿದನು. ಅದರ ಪುಣ್ಯದ ಪ್ರಭಾವದಿಂದ ಅವನ ತಂದೆ-ತಾಯಿಗಳು ದಿವ್ಯರೂಪ ಧರಿಸಿ ವಿಷ್ಣುಮಂದಿರ ಸೇರಿದರು.

ದಧ್ಯನ್ನ ದಾನ ಮಹಿಮೆ

ಜ್ಯೇಷ್ಠಮಾಸದಲ್ಲಿ ದಿನೇ ದಿನೇ ದೇವತೆಗಳ ತುಷ್ಟಿಗಾಗಿ ಮೊಸರನ್ನವನ್ನು ದಾನವಾಗಿ ಕೊಡಬೇಕು. ಅದರ ಮಹಿಮೆಯನ್ನು ಸ್ಕಂದನು ಋಷಿಗಳಿಗೆ ಹೇಳಿದನು- ಅಲಕಾಪಟ್ಟಣದಲ್ಲಿ ಗೌತಮ ಎಂಬ ಬ್ರಾಹ್ಮಣನಿದ್ದನು. ಶ್ರುತಿಸ್ಮೃತಿಪುರಾಣಗಳನ್ನು ಬಲ್ಲ ಅವನು ದುಡ್ಡಿಲ್ಲದೆ ಕುಟುಂಬಪೋಷಣೆ ಮಾಡುವುದೆ ದುಸ್ತರವಾಗಿ ಶುಭ ಅಶುಭಗಳನ್ನು ತಿಳಿದಿದ್ದರೂ ಎಲ್ಲ ದಾನಗಳನ್ನು ಪಡೆಯುತ್ತಿದ್ದ. ಕಳ್ಳರ ಸಹವಾಸದಿಂದ ಕಳ್ಳತನಕ್ಕೂ ಇಳಿದ. ಆದರೂ ಧನಲಾಭವಾಗಲಿಲ್ಲ. ಹಸಿವೆಯಿಂದ ಕಂಗೆಟ್ಟು ಕುಟುಂಬವನ್ನೆಲ್ಲ ಕೈಬಿಟ್ಟು ದೇಶಾಂತರ ಸೇರಿದ. ಅಲ್ಲಿ ಪ್ರೇತಪಿಂಡ, ಬಲಿದಾನದ ಪದಾರ್ಥಗಳಿಂದ ಹೊಟ್ಟೆ ಹೊರೆಯುತ್ತಿದ್ದ. ಹೀಗೆ ಹನ್ನೆರಡು ವರ್ಷಗಳು ಕಳೆದವು. ಮುಪ್ಪು ಬಂದು ಸಾವಿನ ಬಳಿ ಬಂದ. ಆಗ ಜ್ಯೇಷ್ಠಮಾಸವಾಗಿತ್ತು. ಬ್ರಾಹ್ಮಣರು ತಿಂದುಳಿದ ಪಾತ್ರೆ, ಎಲೆಗಳನ್ನು ಆರಿಸುತ್ತಿದ್ದ. ಅರಸುತ್ತಿದ್ದ, ಅದರಲ್ಲಿ ಉಳಿದಿದ್ದ ಮೊಸರನ್ನವನ್ನು ಹಕ್ಕಿಗಳಿಗೆ ಕಾಗೆಗಳಿಗೆ ನಿತ್ಯ ಹಾಕುತ್ತಿದ್ದ. ತಾನೂ ತಿನ್ನುತ್ತಿದ್ದ. ಒಂದು ದಿನ ಸತ್ತ. ಯಮದೂತರು ಕ್ಷಣಮಾತ್ರದಲ್ಲಿ ಬಂದು ಅವನನ್ನು ಎಳೆದೊಯ್ಯಲು ಆರಂಭಿಸಿದರು. ಅದೇ ಸಮಯದಲ್ಲಿ ವಿಷ್ಣುದೂತರು ಬಂದು ಅವರನ್ನೆಲ್ಲ ಹೊಡೆದು ಓಡಿಸಿ, ಆ ಬ್ರಾಹ್ಮಣನನ್ನು ವಿಮಾನವೇರಿಸಿದರು. ಯಮದೂತರು ಯಮನ ಬಳಿ ಹೋಗಿ ದೂರಿದರು. ನೀವು ನಮಗೆ ನಾಥರಾಗಿದ್ದರೂ ನಾವು ಅನಾಥರಂತೆ ಮತ್ತೊಬ್ಬರಿಂದ ಹೊಡೆಸಿಕೊಳ್ಳುವ ಪರಿಸ್ಥಿತಿ ಬಂದಿದೆ. ನಾವು ಮತ್ತೊಬ್ಬ ಒಡೆಯನಲ್ಲಿ ಸೇವಕರಾಗಿ ಸೇರುತ್ತೇವೆ. ದೂತರ ಮಾತು ಕೇಳಿ ಕೂಡಲೆ ಯಮ ಎಮ್ಮೆ ಏರಿ ಹೆಮ್ಮೆಯಿಂದ ಧಾವಿಸಿ ಬಂದು ವಿಷ್ಣುದೂತರನ್ನೆಲ್ಲ ಹೊಡೆದು ಓಡಿಸಿದರು. ವಿಮಾನವನ್ನಲ್ಲಿಯೇ

ಬಿಟ್ಟು ವಿಷ್ಣುದೂತರು ಓಡಿದರು. ದೇವತೆಗಳೆಲ್ಲ ವಿಷ್ಣುವಿಗೆ ವಿಷಯ ತಿಳಿಸಿದರು. ವಿಷ್ಣುವು ಕೋಪದಿಂದ ಗರುಡಾರೂಢನಾಗಿ ಬಂದು ಯಮನನ್ನು ಚಕ್ರದಿಂದ ಸಂಹರಿಸಿದನು. ಮತ್ತೆ ದೇವತೆಗಳು ವಿಷ್ಣುವಿನಲ್ಲಿ ಯಮನ ರಕ್ಷಣೆಗಾಗಿ ತುತಿಸಿದರು. ಪ್ರಸನ್ನನಾದ ಭಗವಂತ ಧರ್ಮರಾಜನನ್ನು ಬದುಕಿಸಿದನು. ಧರ್ಮನೂ ಕ್ಷಮಿಸು ಸ್ವಾಮಿ ಎಂದು ಕೇಳಿಕೊಂಡನು. ಗೌತಮನು ದಧ್ಯೋದನವನ್ನು ಅದರ ಮಹತ್ತ್ವ ತಿಳಿಯದೆ ಜ್ಯೇಷ್ಠಮಾಸದಲ್ಲಿ ಪಕ್ಷಿಗಳಿಗೆ, ಕಾಗೆಗಳಿಗೆ ಕೊಟ್ಟು ಬಹುಪುಣ್ಯ ಸಂಪಾದಿಸಿದನು. ಸದ್ಗತಿ ಸೇರಿದನು. ಆದ್ದರಿಂದ ಜ್ಯೇಷ್ಠಮಾಸ ಪೂರ್ತಿ ಸರ್ವಪ್ರಯತ್ನ ಮಾಡಿ ಮೊಸರನ್ನವನ್ನು ಸಂಚಾರದಿಂದ ಬಳಲಿದ ಬ್ರಾಹ್ಮಣರಿಗೆ ಸಮರ್ಪಿಸಬೇಕು.

ನಿತ್ಯ ಬ್ರಾಹ್ಮಣರ ಪಾದಪ್ರಕ್ಷಾಲನ ಮಾಡುವುದು, ಸುಗಂಧದ್ರವ್ಯಗಳಿಂದ ಅವರನ್ನು ಅರ್ಚಿಸುವುದು, ಬೀಸಣಿಕೆಯಿಂದ ಗಾಳಿ ಹಾಕುವುದು. ಸುಗಂಧದ ಪಾನಕವನ್ನು ಕೊಡುವುದು, ಹೀಗೆ ವಿಪ್ರಾರ್ಚನೆಗೈಯ್ಯುವುದರಿಂದ ತ್ರಿವಿಕ್ರಮನು ಸಂತುಷ್ಟನಾಗುವನು.

ಆಷಾಢಮಾಸದ ದಾನಗಳು

ಸ್ಕಂದನಿಗೆ ಶಿವನು ಈ ಮಾಸದ ಮಹಿಮೆ, ದಾನಗಳ ಹಿರಿಮೆಗಳನ್ನು ತಿಳಿಸುವನು. ಪ್ರತಿದಿನ ವಿಪ್ರೋತ್ತಮನಿಗೆ ಹಾಲು ಕೊಡುವ ಒಂದು ಗೋದಾನವನ್ನು ಕೊಡುವುದರಿಂದ, ಸೂರ್ಯಲೋಕವನ್ನು ಹೊಂದಿ ಸೂರ್ಯ ಪ್ರಕಾಶಿಸುವಷ್ಟು ಕಾಲವಿದ್ದು, ಕ್ರಮವಾಗಿ ವಿಷ್ಣುಸಾಯುಜ್ಯವನ್ನು ಪಡೆಯುತ್ತಾನೆ. ಅಷ್ಟು ಶಕ್ತಿಯಿರದಿದ್ದರೆ ಹದಿನೈದು ದಿವಸ ಅಥವಾ ಒಂದು ವಾರವಾದರೂ ಗೋದಾನ ಮಾಡಿದರೂ ಮಹಾಪುಣ್ಯ. ಹಾಗೆಯೇ ಗಜದಾನ, ರಥದಾನ, ವೃಷಭದಾನಗಳನ್ನು ಮಾಡುವುದು. ಪ್ರಶಸ್ತ. ಹಾಗೆಯೇ ಮಹಿಷೀ ದಾನಗೈದವನು ಅಪ್ಸರೋಲೋಕವನ್ನು ಸೇರುವನು. ಪ್ರತಿದಿನ ಭೂದಾನ, ಒಂದು ಸಾವಿರ ಅಥವಾ ಐನೂರು. ಇನ್ನೂರೈವತ್ತು, ಅರವತ್ತು ಅಥವಾ 24 ಜನ ಬ್ರಾಹ್ಮಣರಿಗೆ, 12 ಜನ ಬ್ರಾಹ್ಮಣರಿಗೆ, ಒಬ್ಬ ಬ್ರಾಹ್ಮಣನಿಗಾದರೂ ಅನ್ನದಾನ ಮಾಡುವುದು ಶ್ರೇಷ್ಠ.

ವಸ್ತ್ರದಾನದಿಂದ ಪ್ರಜಾಪತಿಯ ಲೋಕಪ್ರಾಪ್ತಿ. ರೇಷ್ಮೆವಸ್ತ್ರಗಳನ್ನು ಕೊಡಬಲ್ಲವನು ಲೋಭದಿಂದ ಹತ್ತಿ ವಸ್ತ್ರವನ್ನೆ ಕೊಟ್ಟರೆ ಫಲ ಬರದೆ ಅವನ ದಾನ ನಿರರ್ಥಕವಾಗುವುದು. ತಾಂಬೂಲದಾನದಿಂದ ಭೋಗಗಳ ಕೊರತೆ ಉಂಟಾಗುವುದಿಲ್ಲ. ಫಲದಾನದಿಂದ ಇಷ್ಟಸಿದ್ಧಿಯ ಜೊತೆಗೆ ಸಂತಾನವೂ ಪ್ರಾಪ್ತವಾಗುತ್ತದೆ. ಪಾದರಕ್ಷೆಯ ದಾನದಿಂದ ಕಾಲ್ನಡಿಗೆಯ ಪ್ರಸಂಗ ತಪ್ಪುತ್ತದೆ. ನೀರು ತುಂಬಿದ ತಾಮ್ರ ಅಥವಾ ಕಂಚಿನ ಪಾತ್ರೆಯನ್ನು ಗೋಧಿ ಪಾಯಸ ತುಂಬಿದ ಕಂಚಿನ ಪಾತ್ರೆಯನ್ನು ದಾನ ಕೊಡುವುದರಿಂದ ದೇವತೆಗಳ ಅನುಗ್ರಹದಿಂದ ಯಥಾಯೋಗ್ಯ ಅಮೃತ ಪಾನ ಭಾಗ್ಯ ಪಡೆಯುವನು. ಬೆಳ್ಳಿಯ ದಾನದಿಂದ ಸುಂದರ ಹೆಂಡತಿಯರು ಲಭ್ಯರಾಗುವರು. ಗೋಧಿ, ಭತ್ತ, ಹೆಸರು, ಜವೆಗೋಧಿ, ಉದ್ದು, ಎಳ್ಳು ಇವುಗಳ ದಾನದಿಂದ ಆ ಕಾಳುಗಳ ಸಂಖ್ಯೆಯ ಎರಡು ಪಟ್ಟು ವರ್ಷಗಳಷ್ಟು ಕಾಲ ಸ್ವರ್ಗಸುಖವನ್ನು ಅನುಭವಿಸುವನು. ಇನ್ನಿತರ ಧಾನ್ಯಗಳನ್ನು ಕೊಡುವುದರಿಂದಲೂ ಇಂತಹ ಪುಣ್ಯವನ್ನು ಪಡೆಯುವನು.

ಗಟ್ಟಿಯಾಗಿ ತಳಪಾಯವಿರುವ, ಬೆಲೆಬಾಳುವ ಕಟ್ಟಿಗೆ ಕಲ್ಲುಗಳಿಂದ ರಚನೆಯಾದ, ಸುಂದರ ಬಣ್ಣಗಳಿಂದ ಕಂಗೊಳಿಸುವ ಎಲ್ಲ ಗೃಹೋಪಯೋಗಿ ವಸ್ತುಗಳಿಂದ ಸುಸಜ್ಜಿತವಾದ ಮನೆಯನ್ನು ವಿಪ್ರೋತ್ತಮನಿಗೆ ದಾನಕೊಟ್ಟವನು ಮರಣೋತ್ತರದಲ್ಲಿ ವಿಷ್ಣುಲೋಕವನ್ನು ಹೊಂದಿ ಅಲ್ಲಿ ಸುಂದರ ಅರಮನೆಯಲ್ಲಿ ವಾಸ ಮಾಡಿ ಸುಖದಿಂದಿರುತ್ತಾನೆ.

ಬ್ರಾಹ್ಮಣರಿಗೆ ಅಕ್ಕಿಯನ್ನು ದಾನಕೊಟ್ಟವನು ಸ್ವರ್ಗಲೋಕದಲ್ಲಿ ಸುಖಿಯಾಗಿರುತ್ತಾನೆ. ನಿತ್ಯ ಪ್ರಾತಃಸ್ನಾನ ಮುಗಿಸಿ ತುಪ್ಪವನ್ನು ದಾನ ನೀಡಿದವನು ಯಥಾಯೋಗ್ಯ ಅಮೃತಾಹಾರನಾಗಿ ದೇವಲೋಕದಲ್ಲಿ ಆನಂದ ಪಡುವನು. ಬ್ರಾಹ್ಮಣರಿಗೆ ಹಾಲು, ಮೊಸರುಗಳನ್ನು ಯಥಾಶಕ್ತಿದಾನ ಕೊಟ್ಟವನು ಅವನೂ ಸ್ವರ್ಗದ ಸಂತಸವನ್ನು ಸುಧಾಹಾರನಾಗಿ ಅನುಭವಿಸುವನು. ಅನ್ನದಾನಕ್ಕಿಂತ

ಅಧಿಕದಾನವಿಲ್ಲ, ಅದರಿಂದ ಅಪೇಕ್ಷಿತವಾದುದೆಲ್ಲವನ್ನು ಪಡೆವನು. ಪುಸ್ತಕದಾನದಿಂದ ಜ್ಞಾನವನ್ನು, ವಿದ್ಯಾದಾನದಿಂದ ಮೋಕ್ಷವನ್ನು ಪಡೆವನು.

ಯಸ್ಮಿನ್ ಯಸ್ಮಿನ್ ಭವೇದಿಚ್ಛಾ ತತ್ತದ್ದದ್ಯಾತ್ ಪ್ರಯತ್ನತಃ।
ಇಹ ಲೋಕೇ ಪರಸ್ಮಿನ್ವಾ ನಾನ್ಯಥಾ ಲಭತೇ ಕ್ವಚಿತ್ ।

ನಮಗೆ ಯಾವ ಯಾವ ಯೋಗ್ಯವಸ್ತುವಿನಲ್ಲಿ ಇಚ್ಛೆ ಇರುವುದೋ ಅದು ಅದನ್ನು ಕೊಡುವುದರಿಂದ ಇಹ–ಪರಗಳಲ್ಲಿ ಸುಖ ಸಮೃದ್ಧಿಯಾಗುವುದು.

ಸ್ತ್ರೀಯರೂ ಹೀಗೆ ದಾನ ಕೊಡುವುದರಿಂದ ಪರಲೋಕದಲ್ಲಿ ತಮ್ಮ ತಮ್ಮ ಪತಿಯರೊಂದಿಗೆ ಮುದಪಡುವರು. ಯಾವ ವಯಸ್ಸಿನಲ್ಲಿ, ಯಾವ ಕಾಲದಲ್ಲಿ ಹೇಗೆ ಏನು ದಾನ ಕೊಟ್ಟಿರುವೆವೋ ಅದು ಆ ವಯಸ್ಸಿನಲ್ಲಿ ಆ ಕಾಲದಲ್ಲಿ ಹಾಗೆಯೇ ನಮಗೆ ತಲುಪುವುದು.

ಶ್ರಾವಣ ಮಾಸ

ಶ್ರಾವಣಮಾಸದಲ್ಲಿ ತಿಂಗಳಿಡೀ ದೀಪವನ್ನು ಹಚ್ಚಿ ಬೆಳ್ಳಿಯ ಹಣತೆಯಲ್ಲಿ ಬಂಗಾರದ ಬತ್ತಿಯನ್ನು ಇಟ್ಟು ಆಕಳಿನ ಶುದ್ಧ ತುಪ್ಪವನ್ನು ತುಂಬಿ ಸತ್ಪಾತ್ರರಲ್ಲಿ ದಾನ ಮಾಡಬೇಕು.

ಶ್ರೀಹರಿಗೆ ಅಥವಾ ರುದ್ರದೇವರಿಗೆ ಲಕ್ಷಪುಷ್ಪಾರ್ಚನೆಯನ್ನು ಮಾಡಿ ಯಾವ ಪದಾರ್ಥಗಳಿಂದ ಲಕ್ಷ ಪೂಜೆಯನ್ನು ಮಾಡಲಾಗಿದೆಯೋ ಅದನ್ನು ದಾನ ಕೊಡಬೇಕು.

ಈ ಮಾಸದಲ್ಲಿ ಮಾಸಪೂರ್ತಿ ಅಥವಾ ಹಗಲು ಮಾತ್ರವಾಗಲಿ, ರಾತ್ರಿಕಾಲದಲ್ಲಿ ಮಾತ್ರವಾಗಲಿ ಒಂದು ದಿನ ಪೂರ್ತಿಯಾಗಲಿ, ಭೋಜನ ಕಾಲದಲ್ಲಿ ಮಾತ್ರವಾಗಲಿ ಮೌನವ್ರತ ಮಾಡಬೇಕು. ಇದರಿಂದ ಶಾಸ್ತ್ರ ಪ್ರಾವೀಣ್ಯ, ಉತ್ತಮ ವಾಗ್ಮಿತೆಗಳು, ಬುದ್ಧಿವಂತಿಕೆಗಳು ಲಭ್ಯವಾಗುತ್ತವೆ. ಮೌನವ್ರತದ ಕೊನೆಯಲ್ಲಿ ಘಂಟೆಯನ್ನು, ಗ್ರಂಥಗಳನ್ನು ದಾನ ಕೊಡಬೇಕು.

ಶ್ರಾವಣಶನಿವಾರದಂದು ಶನಿಪೂಜೆಯನ್ನು ಮಾಡಿ ಬ್ರಾಹ್ಮಣರಿಗೆ ಎಳ್ಳೆಣ್ಣೆ, ಎಳ್ಳು, ಪೂಜೆ ಮಾಡಿದ ಶನಿಪ್ರತಿಮೆ, ಇಂದ್ರನೀಲಮಣಿಯನ್ನು ದಾನ ಮಾಡಬೇಕು.

ಶ್ರಾವಣ ಶುದ್ಧಚತುರ್ಥಿಯಂದು ದೂರ್ವಾಗಳಿಂದ ಗಣಪತಿ ಪೂಜೆ ಮಾಡಿ ಗಣಪತಿ ಪ್ರತಿಮೆಯನ್ನು ದಾನ ಕೊಡಬೇಕು.

ಈ ಮಾಸದ ಶುಕ್ಲ-ಕೃಷ್ಣಪಕ್ಷಗಳ ದ್ವಾದಶಿಯಂದು ಕಲಶದ ಮೇಲೆ ಲಕ್ಷ್ಮೀನಾರಾಯಣನ ಪ್ರತಿಮೆಯನ್ನಿಟ್ಟು ಪೂಜೆ ಮಾಡಿ ಅದನ್ನು ಬ್ರಾಹ್ಮಣರಿಗೆ ದಾನ ಮಾಡಬೇಕು. ವಿಶೇಷವಾಗಿ ಬ್ರಾಹ್ಮಣರಿಗೆ ಬೆಣ್ಣೆದಾನ ಮಾಡಬೇಕು. ಶ್ರೀಧರಾಯ ನಮಃ ಎಂದು ಸ್ಮರಣೆ ಮಾಡಬೇಕು.

ಈ ಮಾಸದಲ್ಲಿ ಉಪಾಕರ್ಮದಿನದಂದು ಯಜ್ಞೋಪವೀತದಾನ ಮಾಡಬೇಕು. ಗೋಪಿಚಂದನದಾನವನ್ನು ಮಾಡಬೇಕು.

ಭಾದ್ರಪದ ಮಾಸ

ಋಷಿಪಂಚಮಿಯಂದು ಎಂಟು ಜನ ಬ್ರಾಹ್ಮಣರಿಗೆ ವಸ್ತ್ರ, ಯಜ್ಞೋಪವೀತಗಳನ್ನು ದಾನ ಮಾಡಬೇಕು.

ಕೃಷ್ಣಾಷ್ಟಮಿಯು ಕೆಲವೊಮ್ಮೆ ಭಾದ್ರಪದಮಾಸದಂದು ಬರುವ ಸಂದರ್ಭವಿದೆ. ಅಂದು ಕೃಷ್ಣನನ್ನು ತೊಡೆಯ ಮೇಲೆ ಕುಳ್ಳಿರಿಸಿಕೊಂಡ ದೇವಕೀಪ್ರತಿಮೆಯನ್ನು ಪೂಜೆ ಮಾಡಿ ಅದನ್ನು ಬ್ರಾಹ್ಮಣರಿಗೆ ದಾನ ಮಾಡಬೇಕು.

ದಾನಮಂತ್ರ–

ತಾಂ ದೇವಕೀಂ ದೇವದೇವೀಂ ದೇವದೇವಸಮನ್ವಿತಾಮ್ ।
ಸರ್ವಕಾಮಪ್ರದಾಂ ನಿತ್ಯಂ ದಾಪಯೇದ್ ಬ್ರಾಹ್ಮಣಾಯ ಚ ॥

ದಾನಸ್ವೀಕಾರಮಂತ್ರ–

ಗೃಹ್ಣಾಮಿ ದೇವಕೀದೇವೀಂ ದೇವದೇವಸಮನ್ವಿತಾಮ್ ।
ತಾಭ್ಯಾಂ ತಾರಯ ಭೋ ದೇವಿ ಸುಪುತ್ರಾ ತ್ವಂ ಸುರೇಶ್ವರೀ ॥

ಕೃಷ್ಣಜನ್ಮಾಷ್ಟಮಿಯಂದು ಬೆಳ್ಳಿ–ಬಂಗಾರಗಳನ್ನು ದಾನ ಮಾಡುವುದು ವಿಶೇಷ.

ಒಂದು ಕಾಗದದಲ್ಲಿ ಸರ್ವಾಭರಣಭೂಷಿತನಾಗಿರುವಂತೆ ಶ್ರೀಕೃಷ್ಣನ ಚಿತ್ರವನ್ನು ಬರೆದು, ಅದನ್ನು ಪೂಜೆ ಮಾಡಿ ಬ್ರಾಹ್ಮಣರಿಗೆ ದಾನ ಕೊಟ್ಟರೂ ಮಹಾಪುಣ್ಯ. ಇದರಿಂದ ಯಮಲೋಕದ ಭಯ ತಪ್ಪುತ್ತದೆ.

ಶ್ರವಣ ದ್ವಾದಶಿಯಂದು ವಾಮನ ಪ್ರೀತ್ಯರ್ಥವಾಗಿ ದ್ರವ್ಯದಾನ ಮಾಡಬೇಕು.

ದಾನಮಂತ್ರ–

ವಾಮನೋ ಬುದ್ಧಿದಾತಾ ಚ ದ್ರವ್ಯಸ್ಥೋ ವಾಮನಃ ಸ್ವಯಮ್ ।
ವಾಮನಸ್ತಾರಕೋ ನಿತ್ಯಂ ತೇನ ವೈ ವಿಷ್ಣವೇ ನಮಃ ॥

ಹೊಸ ಪಾತ್ರೆಯಲ್ಲಿ ಮೊಸರನ್ನವನ್ನು ತುಂಬಿಟ್ಟು ವಾಮನ ಪ್ರೀತ್ಯರ್ಥವಾಗಿ ಬ್ರಾಹ್ಮಣನಿಗೆ ದಾನ ಮಾಡಬೇಕು.

ವಿಷ್ಣು ಪಂಚಕವ್ರತ ಮಾಡಿ ಗೋದಾನ ಮಾಡಬೇಕು.

ಭಾದ್ರಪದ ಹುಣ್ಣಿಮೆಯಂದು ಗೋದಾನ, ತಿಲದಾನ, ಅನ್ನದಾನಗಳು ತುಂಬ ಪ್ರಶಸ್ತ ಫಲದಾಯಕವಾದವು.

ಆಶ್ವಿನ(ಜ) ಮಾಸ

ನವರಾತ್ರಿಯ ಪಾಡ್ಯದಂದು ಯೋಗ್ಯನಾದವನಿಗೆ ಕೇಶಸಂಸ್ಕಾರದ ದ್ರವ್ಯಗಳನ್ನು, ಬಿದಿಗೆಯಂದು ಕೇಶವನ್ನು ಒಂದೆಡೆ ಸೇರಿಸಿ ಕಟ್ಟಲು ರೇಶ್ಮೆಯ

ದಾರವನ್ನು ದಾನಮಾಡಬೇಕು. ತದಿಗೆಯಂದು ಕನ್ನಡಿ ಮತ್ತು ಸಿಂಧೂರವನ್ನು ದಾನ ಮಾಡಬೇಕು. ಚತುರ್ಥಿಯಂದು ಮಧುಪರ್ಕ, ತಿಲಕ, ಕಣ್ಣಿಗೆ ಹಚ್ಚುವ ಕಾಡಿಗೆಯನ್ನು ದಾನ ಮಾಡಬೇಕು. ಪಂಚಮಿಯಂದು ಅಂಗರಾಗ ಮತ್ತು ಶಕ್ತಿಗೆ ಅನುಸಾರವಾಗಿ ಆಭರಣ, ಅಲಂಕಾರಗಳನ್ನು ದಾನ ಮಾಡಬೇಕು.

ಸುವರ್ಣದಾನದ ಮಹಾಫಲ

ಮಾಹೀಷ್ಮತಿನಗರದಲ್ಲಿ ವೀರಬಾಹು ಎಂಬ ರಾಜನಿದ್ದ. ಬೇಕಾದ ಸಂಪತ್ತು, ಸಾಧ್ವಿಯಾದ ಸತೀ ಎಲ್ಲವೂ ಇದ್ದರೂ ಮನಸ್ಸಿಗೆ ನೆಮ್ಮದಿ ಇರಲಿಲ್ಲ. ಹಿಡಿದ ಕೆಲಸಗಳೆಲ್ಲ ವಿಘ್ನಗಳಿಂದ ನಷ್ಟವಾಗಿ ಯಶಸ್ಸು ದೊರೆಯುತ್ತಿರಲಿಲ್ಲ. ವಿಷಣ್ಣನಾದ ರಾಜ ಅರಣ್ಯಕ್ಕೆ ಬಂದು, ಭೃಗುಋಷಿಗಳಲ್ಲಿ ತನ್ನ ಕಾರ್ಯವಿಘ್ನಗಳಿಗೆ ಕಾರಣವೇನೆಂದು ಕೇಳಿದ. ಭೃಗುಋಷಿಗಳು ಹಿಂದಿನ ಜನ್ಮದಲ್ಲಿ ಪಾಖಂಡಿಗಳ ಸಹವಾಸ ಮಾಡಿ ಪರಸ್ತ್ರೀ, ಪರದ್ರವ್ಯ ಅಪಹಾರ ಮುಂತಾದ ದುಷ್ಟಕಾರ್ಯಗಳನ್ನು ಮಾಡುತ್ತಿದ್ದ ಪುರಂಜನ ಎಂಬ ರಾಜನಾಗಿದ್ದಿ ನೀನು. ಯಾವ ಬಡವ ಬಲ್ಲಿದನಿಗೆ, ಶಿಷ್ಟರಾದ ಬ್ರಾಹ್ಮಣರಿಗೆ ಬಿಡಿಕಾಸನ್ನು ಕೊಡಲಿಲ್ಲ. ದುರ್ಜನರಿಗಾಗಿ ಹಣ ವ್ಯಯ ಮಾಡುತ್ತಿದ್ದಿ. ಅದರ ಫಲವಾಗಿ ಈ ಜನ್ಮದಲ್ಲಿ ಹಿಡಿದ ಕಾರ್ಯಗಳಿಗೆಲ್ಲ ವಿಘ್ನ ಉಂಟಾಗಿ ಅಪಯಶಸ್ಸು ಪಡೆಯುತ್ತಿರುವಿ. ಇನ್ನು ಈ ಸಂಪತ್ತು ಬಂದ ಕಾರಣವನ್ನು ಹೇಳುತ್ತೇನೆ, ಕೇಳು. ಹಿಂದೆ ನೀನು ಬೇಟೆಗೆಂದು ಹೊರಟು ಅನೇಕ ಪ್ರಾಣಿಗಳನ್ನು ಕೊಂದು ಜಿಂಕೆಯೊಂದರ ಹಿಂದೆ ಓಡಿದಿ. ಅದು ಹೆದರಿ ಓಡುತ್ತ ನೀರಿರುವ ಆಳವಾದ ಬಾವಿಯಲ್ಲಿ ಬಿತ್ತು. ಅದರ ಹಿಂದೆ ನೀನೂ ಬಿದ್ದಿ. ಆಶ್ವೀನ ಶುದ್ಧ ಚತುರ್ಥಿಯಂದು ಅರುಣೋದಯಕ್ಕೆ ಸರಿಯಾಗಿ ಬಿದ್ದ ಜಿಂಕೆ ನಿನ್ನನ್ನು ಕಂಡು ಬಾವಿಯಿಂದ ಹೊರಕ್ಕೆ ಜಿಗಿದು ಪಾರಾಯಿತು. ನೀನು ಮೇಲೆ ಬಂದು ಚಳಿಯಿಂದ ನಡುಗುತ್ತ ಅಲ್ಲಿಗೆ ಸ್ನಾನಕ್ಕೆ ಬಂದಿದ್ದ ಬ್ರಾಹ್ಮಣನೊಬ್ಬನ ಸಹಾಯ ಪಡೆದು, ಅವನು ಕೊಟ್ಟ ವಸ್ತ್ರದಿಂದ ಮೈ ಒರೆಸಿಕೊಂಡು ಹೋಗುವಾಗ ನಿನ್ನ ಭೇಟಿಯ ನೆನಪಿಗೆ ಎಂದು ಬೆರಳಿನ ಸುವರ್ಣ ಉಂಗುರವೊಂದನ್ನು ಆ ಬ್ರಾಹ್ಮಣನಿಗೆ

ಕೊಟ್ಟು, ಭಕ್ತಿಯಿಂದ ನಮಸ್ಕಾರ ಮಾಡಿ ಹೊರಟು ಹೋದಿ. ಆಶ್ವೀನಮಾಸದ ಆ ಪ್ರಾತಃಸ್ನಾನ, ಸತ್ಪಾತ್ರನಲ್ಲಿ ಸುವರ್ಣದಾನ ಮಾಡಿದ ಪ್ರಭಾವದಿಂದ ಈ ಜನ್ಮದಲ್ಲಿ ವಿಪುಲ ಸಂಪತ್ತು ಪಡೆದಿರುವಿ ಎಂದರು.

ಕಾರ್ತಿಕಮಾಸ

ಕಾರ್ತಿಕಮಾಸದಲ್ಲಿ ದೀಪದಾನವು ಸರ್ವಪಾಪಪರಿಹಾರಕ. ಪ್ರಾತಃಕಾಲದಲ್ಲಿ ದೇವರ ಮುಂದೆ ದೀಪ ಹಚ್ಚುವುದನ್ನು ಇಲ್ಲಿ ದೀಪದಾನ ಎಂದು ಕರೆಯಲಾಗಿದೆ.

ನಮಗೆ ದೀಪ ಹಚ್ಚಿಡಲು ಶಕ್ತಿ ಇಲ್ಲದಿದ್ದರೂ ಮತ್ತೊಬ್ಬರು ಹಚ್ಚಿದ ದೀಪವನ್ನು ಬತ್ತಿ ಸರಿಮಾಡಿ ಪ್ರಜ್ವಲಿಸುವಂತೆ ಮಾಡಿದರೂ ದೀಪದಾನದ ಫಲವನ್ನು ಪಡೆಯುವರು.

ದೀಪಕ್ಕಾಗಿ ಹತ್ತಿಯನ್ನು ಬತ್ತಿಯನ್ನು ಎಳ್ಳೆಣ್ಣೆಯನ್ನೂ, ಹಣತೆಯನ್ನು ಕೊಡುವುದೂ ಪುಣ್ಯಕರ. ದೀಪದಾನ ಕೊಡುವವರಿಗೆ ಸಹಾಯ ಮಾಡುವುದೂ ಪುಣ್ಯಕರವಾಗಿದೆ.

ಶ್ರೋತ್ರಿಯರಿಗೆ ಗೋಪೀಚಂದನದಾನ ಮಾಡುವುದರಿಂದ ಪಾಪಮುಕ್ತರಾಗಿ ವೈಷ್ಣವತ್ವವನ್ನು ಪಡೆಯುವರು.

ಗೋದಾನ ಮಾಡುವವನು, ಕ್ರಮೇಣ ನಿಶ್ಚಯವಾಗಿ ಮೋಕ್ಷ ಸೇರುವನು. ಬಾಳೆಹಣ್ಣು, ನೆಲ್ಲಿಕಾಯಿಯ ದಾನಗಳು ಶ್ರೇಷ್ಠ. ಶೀತಾರ್ತವಿಪ್ರನಿಗೆ ವಸ್ತ್ರದಾನವೂ ಪುಣ್ಯಪ್ರದ. ಕೇಶವಪ್ರಿಯವಾದ ಕಾರ್ತಿಕಮಾಸದಲ್ಲಿ ಅನ್ನದಾನವೂ ಶ್ರೇಷ್ಠ. ಸಂಪತ್ತಿಗೆ ಅನುಸಾರವಾಗಿ ಕಾಯಿಪಲ್ಯೆಗಳ ದಾನವನ್ನು ಮಾಡಬೇಕು. ಶಾಲಗ್ರಾಮದಾನವು ತುಂಬ ಶ್ರೇಯಸ್ಕರ. ಪುರಾಣಪ್ರವಚನ ಮಾಡುವ ವಿಪ್ರನಿಗೆ ಘೃತ, ಪಾಯಸ ದಾನವನ್ನು ಮಾಡುವವನು ನೂರು ಬ್ರಾಹ್ಮಣರ ಭೋಜನದ ಫಲವನ್ನು ಪಡೆಯುವನು.

ಶಂಖದಾನವು ಚಕ್ರಾಂಕಿತ ದಾನವೂ ಪಾಪಪರಿಹಾರಕ ಹಾಗೂ ಸುಪುಣ್ಯಪ್ರದವಾಗಿದೆ.

ಕಾರ್ತಿಕಮಾಸದಲ್ಲಿ ಪರಮಾತ್ಮನ ಪ್ರೀತ್ಯರ್ಥವಾಗಿ ಕಾಯಿ ಪಲ್ಯೆಗಳ ದಾನವನ್ನಾಗಲಿ, ಉಪ್ಪನ್ನೇ ಆಗಲಿ, ಯಾವುದೇ ಯೋಗ್ಯ ಪದಾರ್ಥವನ್ನಾದರೂ ದಾನಮಾಡಬೇಕು. ದಾನ ಕೊಡದೆ ಕಾರ್ತಿಕಮಾಸವನ್ನು ವ್ಯರ್ಥವಾಗಿ ಕಳೆಯಬಾರದು.

ಕಾರ್ತಿಕ ಶುದ್ಧ ದ್ವಿತೀಯಾದಂದು ಅತ್ತಿಮರದ ಬುಡದಲ್ಲಿ ಬ್ರಹ್ಮ ವಿಷ್ಣು ಮಹೇಶ್ವರರನ್ನು, ವೀಣಾಪುಸ್ತಕಧಾರಿಣಿಯಾದ ಸರಸ್ವತಿಯನ್ನೂ ಪೂಜೆ ಮಾಡಬೇಕು. ಅನಂತರ ಅಪಮೃತ್ಯು ಪರಿಹಾರಕ್ಕಾಗಿ ಗೋದಾನ ಮಾಡಬೇಕು.

ಗೋದಾನ ಮಂತ್ರ –

ಅಪಮೃತ್ಯುವಿನಾಶಾರ್ಥಂ ಸಂಸಾರಾರ್ಣವತಾರಕ ।
ವಿಪ್ರ ತುಭ್ಯಮಿಮಾಂ ಸೌಮ್ಯಾಂ ಧೇನುಂ ಸಂಪ್ರದದಾಮ್ಯಹಮ್ ।

ಗೋವು ದೊರೆಯದಿದ್ದರೆ ಬ್ರಾಹ್ಮಣನಿಗೆ ಪಾದರಕ್ಷೆಗಳನ್ನು ದಾನ ಮಾಡಬೇಕು.

ಅನ್ನದಾನ ಮಹಿಮೆ

ತೀರ್ಥಸ್ನಾನೇನ ಕಿಂ ತಸ್ಯ ದೇವಯಾತ್ರಾದಿನಾಽಪಿ ಕಿಮ್ ।
ಸರ್ವಂ ಸಂಪದ್ಯತೇ ಬ್ರಹ್ಮನ್ ಅನ್ನದಾನಾನ್ನ ಸಂಶಯಃ ॥

ತೀರ್ಥಸ್ನಾನದಿಂದೇನು? ದೇವಯಾತ್ರಾದಿಗಳಿಂದೇನು? ಅನ್ನ ದಾನ ಮಾಡದಿದ್ದವನಿಗೆ ಅನ್ನದಾನದಿಂದ ಸರ್ವವೂ ಸಂಪನ್ನವಾಗುವುದು.

ಅದಕ್ಕೊಂದು ಇತಿಹಾಸ –

ಸತ್ಯಜಿತ್ ಎಂಬ ಧಾರ್ಮಿಕನೊಬ್ಬನಿದ್ದನು. ಅವನು ನಿಸ್ಪೃಹ. ತೀರ್ಥಯಾತ್ರಾ ಪರಾಯಣ. ಗಂಗಾಸ್ನಾನ ಮಾಡಬೇಕೆಂಬ ಹಂಬಲ ತುಂಬಿಕೊಂಡು ಕುರುಕ್ಷೇತ್ರಕ್ಕೆ

ಬಂದು ಅಲ್ಲಿ ಸ್ನಾನಾದಿಗಳನ್ನು ಮುಗಿಸಿ ವಿಶಾಲಾ ಎಂಬ ಊರಿಗೆ ಬಂದ. ಇಲ್ಲಿ ಅನ್ನದಾತರು ಯಾರು? ವಿಚಾರಿಸಿ ಜನರಿಂದ ತಿಳಿದು 'ಸತ್ಯಕೇತು'ವಿನ ಮನೆಗೆ ಬಂದ. ಹಸಿದು ಬಂದ ಅತಿಥಿಯನ್ನು ಕಂಡು ಸಂತಸಗೊಂಡ ಸತ್ಯಕೇತು ಪ್ರತ್ಯುತ್ಥಾನ, ಅಭಿವಾದನ, ಸ್ವಾಗತ ವಚನಗಳಿಂದ ಸತ್ಕರಿಸಿದನು.

ಸತ್ಕಾರ ಸಂತೃಪ್ತನಾದ ಸತ್ಯಜಿತ್ ಸತ್ಯಕೇತುವನ್ನು ಬಹುವಾಗಿ ಪ್ರಶಂಸೆಗೈದನು. 'ಎಲ್ಲರಿಗೆ ಆಸರೆಯಾಗುವ ಗೃಹಸ್ಥಾಶ್ರಮ ಶ್ರೇಷ್ಠವಾಗಿದೆ. ನಿನ್ನ ಅನ್ನದಾನನಿಷ್ಠೆಯನ್ನು ಕಂಡು ಸಂತಸಗೊಂಡೆ. ನೀನು ಗಂಗಾಸ್ನಾನವನ್ನು ಮಾಡಿರುವೆಯಾ?' ಎಂದು ಕೇಳಿದ. ಸತ್ಯಕೇತು ಸತ್ಯವನ್ನೇ ನುಡಿದ– 'ನಾನು ಇದುವರೆಗೆ ಗಂಗೆಯನ್ನು ನೋಡಲೇ ಇಲ್ಲ. ನಾನು ಗಂಗಾಸ್ನಾನಕ್ಕೆ ಹೋದರೆ ಇಲ್ಲಿ ಅತಿಥಿಗಳಿಗೆ ಅನ್ನದಾನವೇ ತಪ್ಪುತ್ತದೆ. ಆದ್ದರಿಂದ ಗಂಗಾಸ್ನಾನ ಮಾಡಿಲ್ಲ' ಎಂದ.

ಸತ್ಯಜಿತ್ ಅಸಮಾಧಾನಗೊಂಡು ನುಡಿದ– 'ಗಂಗಾಸ್ನಾನ ಮಾಡದ ನಿನ್ನಂತಹ ಪಾಪಿಯನ್ನು ನಾನು ವೃಥಾ ಪ್ರಶಂಸೆ ಮಾಡಿದೆ. ನಿನ್ನ ಮನೆಯಲ್ಲಿ ನಾನು ಊಟವನ್ನೇ ಮಾಡುವುದಿಲ್ಲ' ಎಂದು ಹೇಳಿ ಸಿಟ್ಟಿನಿಂದ ಗಂಗಾತೀರಕ್ಕೆ ತೆರಳಿದ. ಅಲ್ಲಿ ಗಂಗಾನದಿಯೇ ಕಣ್ಮರೆಯಾಯಿತು, ಉಸುಕೇ ಕಾಣಿಸಿತು. ಉದಕವೇ ಕಾಣಲಿಲ್ಲ. ಗಂಗೆಯಲ್ಲಿ ಮೊರೆಯಿಟ್ಟ– 'ನಾನೇನೂ ಅಪರಾಧ ಮಾಡಿಲ್ಲ. ನಾನು ನಿನ್ನ ದಾಸ, ಭಕ್ತ. ನನಗೇಕೆ ದರ್ಶನ ಕೊಡುತ್ತಿಲ್ಲ ತಾಯಿ?' ಎಂದು ಅಂಗಲಾಚಿ ಶರಣಾದ. ಗಂಗೆ ಮೂರ್ತಿಮತ್ತಾಗಿ ಪ್ರಕಟಗೊಂಡು 'ಸತ್ಯಕೇತುವಿನ ಮನೆಯಲ್ಲಿ ಉಂಡು ಬಾ. ಅಂತಹ ಶ್ರೋತ್ರಿಯನ ಮನೆಯೂಟದಿಂದಲೆ ಬಹಳ ಮಂದಿ ಪಾಪರಹಿತರಾಗಿದ್ದಾರೆ. ಕಾರ್ತಿಕಮಾಸದಲ್ಲಿ ಅನ್ನದಾನ ಮಾಡುವವರನ್ನು ನಾನೇ ಆದರದಿಂದ ನೋಡುತ್ತೇನೆ. ಮತ್ತೆ ನಿನ್ನದೇನು ದೊಡ್ಡಸ್ತಿಕೆ?'

ಗಂಗೆಯ ಮಾತು ಕೇಳಿ ಪಶ್ಚಾತ್ತಾಪಗೊಂಡ ಸತ್ಯಜಿತ್ ಸತ್ಯಕೇತುವಿನ ಮನೆಗೆ ಹೋಗಿ ಕ್ಷಮೆ ಕೇಳಿ ಊಟ ಮಾಡಿ ಬಂದ. ಮತ್ತೆ ಬಂದು ಗಂಗಾಪ್ರವಾಹ ಕಂಡು ಪುಳಕಗೊಂಡು ಸ್ನಾನಮಾಡಿ ಪುನೀತನಾದ. ಆದ್ದರಿಂದ ಕಾರ್ತಿಕಮಾಸದಲ್ಲಿ ಬ್ರಾಹ್ಮಣರಿಗೆ ಅನ್ನದಾನ ಅವಶ್ಯ ಮಾಡಬೇಕು.

ಶಾಲಿಗ್ರಾಮದಾನ ಮಾಹಾತ್ಮ್ಯ

ಕಾರ್ತಿಕಮಾಸದಲ್ಲಿ ಶಾಲಿಗ್ರಾಮದಾನವು ಅತ್ಯಂತ ಪುಣ್ಯಪ್ರದವಾಗಿದೆ. ಭೂದಾನಕ್ಕಿಂತಲು ಬಲುಶ್ರೇಷ್ಠ ಸಾಲಿಗ್ರಾಮ ದಾನವು. ಸಪ್ತಸಾಗರ ಪರ್ಯಂತ ಭೂದಾನದ ಪುಣ್ಯವೂ ಸಾಲಿಗ್ರಾಮದಾನದಿಂದ ಬರುವ ಪುಣ್ಯದಲ್ಲಿ ಅಡಕವಾಗಿದೆ. ಬ್ರಾಹ್ಮಣರು ಶಾಲಿಗ್ರಾಮದಾನದ ಮಹಿಮೆಯನ್ನು ತಿಳಿಸಿಕೊಟ್ಟರೂ ಲೋಭದಿಂದ ಶಾಲಿಗ್ರಾಮದಾನವನ್ನು ನೀಡದಿರುವವನು ನೀಚ ಜನ್ಮವನ್ನು ಹೊಂದುವನು. ಇದಕ್ಕೊಂದು ಇತಿಹಾಸವಿದೆ.

ಗೋದಾವರಿಯ ತೀರದಲ್ಲಿ ಒಬ್ಬ ದುರಾಚಾರಿಯಾದ ವೈಶ್ಯನಿದ್ದ. ಯಾರಿಗೂ ಉಪಕಾರಮಾಡದ ಅವನು ಪರಹಿಂಸಾ, ಪರನಿಂದಾ, ಪರದ್ರವ್ಯ ಪರಾಯಣನಾಗಿದ್ದ. ಒಮ್ಮೆ ತಾನು ಸಾಲ ಕೊಟ್ಟ ಬ್ರಾಹ್ಮಣನಿಂದ ಸಾಲ ವಸೂಲು ಮಾಡಲು ಅವನ ಮನೆಗೆ ಹೋದ. 'ಏನಾದರೂ ಮಾಡಿ ಈ ತಿಂಗಳ ಕೊನೆಯಲ್ಲಿ ನಿಮ್ಮ ಸಾಲ ಹಿಂತಿರುಗಿಸುತ್ತೇನೆ. ಅಲ್ಲಿಯವರೆಗೆ ಇಲ್ಲೆ ಸ್ವಲ್ಪ ಇರಬೇಕು ತಾವು' ಎಂದು ಬ್ರಾಹ್ಮಣ ದೈನ್ಯದಿಂದ ಕೇಳಿಕೊಂಡ. ಆದರೆ ನಿರ್ದಯನಾದ ವೈಶ್ಯ ಈಗಲೇ ಸಾಲ ಹಿಂತಿರುಗಿಸು ಎಂದು ಹೇಳಿ ತಲೆಗೂದಲು ಹಿಡಿದು ಜಗ್ಗಾಡಿ ನೆಲಕ್ಕೆ ಬೀಳಿಸಿ ಕಾಲಿನಿಂದ ಒದ್ದು ಖಡ್ಗದಿಂದ ಇರಿದನು. ಬ್ರಾಹ್ಮಣ ಮೃತನಾದ. ಹೆದರಿದ ವೈಶ್ಯ ಪಲಾಯನ ಮಾಡಿದ. ಆದರೆ ಅಲ್ಪಾಯುಷಿಯಾಗಿ ಅವನೂ ಮರಣವನ್ನಪ್ಪಿದ. ಯಮದೂತರು ಅವನನ್ನು ರೌರವನರಕಕ್ಕೆ ತಳ್ಳಿದರು.

ಇತ್ತ ಆ ವೈಶ್ಯನ ಕುಮಾರ ಧರ್ಮಚಾರ ಎಂಬ ಹೆಸರಿನವನು ಪಿತ್ರಾರ್ಜಿತ ಧನದಿಂದ ಬೇಕಾದಷ್ಟು ದಾನ–ಧರ್ಮಗಳನ್ನು ನಡೆಸಿದ. ಕೆರೆ–ಬಾವಿಗಳನ್ನು ಕಟ್ಟಿಸಿ ಲೋಕೋಪಕಾರಗೈದ. ಮದುವೆ–ಮುಂಜಿಗಳನ್ನು ಮಾಡಿಸಿದ. ಗೋದಾನ ಕನ್ಯಾದಾನಗಳನ್ನು ಮಾಡಿದ.

ಒಮ್ಮೆ ಅವನ ಮನೆಗೆ ಲೋಮಶ ಎಂಬ ಮುನಿಗಳು ಬಂದರು.

ಧರ್ಮಚಾರ ಬಹು ಉಪಚಾರ ಮಾಡಿದ. ಏನು ಮಾಡಬೇಕೆಂದು ಅಪ್ಪಣೆ ಆಗಲಿ ಎಂದು ಕೈಮುಗಿದು ನಿಂತ. ಲೋಮಶರು ಹೇಳಿದರು– ಅನೇಕ ಲೋಕಗಳನ್ನು ಸುತ್ತಿ ಬಂದ ನಾನು ಯಮಲೋಕಕ್ಕೆ ಹೋದಾಗ ನಿನ್ನಪ್ಪನ ದುರವಸ್ಥೆ ಕಂಡು ಬಂದೆ. ಕಾರ್ತಿಕಮಾಸದಲ್ಲಿ ಶ್ರೋತ್ರಿಯನಾದ ವಿಪ್ರನಿಗೆ ಸಾಲಿಗ್ರಾಮ ದಾನ ಮಾಡು. ಅದರ ಪುಣ್ಯದ ಪ್ರಭಾವದಿಂದ ನಿನ್ನ ತಂದೆ ನರಕದಿಂದ ಉದ್ಧಾರನಾಗುತ್ತಾನೆಂದರು.

ಅದನ್ನು ಕೇಳಿದ ವೈಶ್ಯ ಈ ಶಿಲಾದಾನದಿಂದ ಏನು ಪ್ರಯೋಜನ? ಹೊಟ್ಟೆ ತುಂಬುತ್ತದೆಯೇ? ಈಗಾಗಲೇ ಇತ್ತಿರುವ ಅನೇಕ ದಾನಗಳಿಂದ ದೊರೆಯದ ಮುಕ್ತಿ ಕಲ್ಲು ಕೊಟ್ಟರೆ ಹೋಗುವುದೇ? ಎಂದು ತಿರಸ್ಕಾರದ ಮಾತುಗಳನ್ನಾಡಿದ. ಲೋಮಶಮುನಿಗಳು ಮೌನದಿಂದ ಹಿಂತಿರುಗಿದರು.

ಕಾಲಕ್ರಮದಲ್ಲಿ ವೈಶ್ಯ ಮೃತನಾದ. ನಾನಾನರಕಗಳಿಗೆ ಹೋದ. ಮತ್ತೆ ಪಾಪಶೇಷದಿಂದ ಮೂರು ಜನ್ಮ ಹುಲಿಯಾಗಿ, ಮೂರು ಜನ್ಮ ಕೋತಿಯಾಗಿ ಐದು ಬಾರಿ ಎತ್ತಾಗಿ, ಹತ್ತು ಬಾರಿ ಹೆಣ್ಣಾಗಿ ಹುಟ್ಟಿ ಆ ಎಲ್ಲ ಜನ್ಮಗಳಲ್ಲೂ ಬೇಗ ವಿಧವೆಯಾದ. ಹನ್ನೊಂದನೇ ಜನ್ಮದಲ್ಲಿ ಒಬ್ಬ ಯಾಜ್ಞಿಕರ ಮಗಳಾಗಿ ಹುಟ್ಟಿದ. ಸಕಾಲದಲ್ಲಿ ಬ್ರಾಹ್ಮಣ ಅವಳಿಗೆ ಮದುವೆ ಮಾಡಿದರೆ ಐದನೇ ದಿನದಿಂದಲೇ ಅಳಿಯನೇ ಅಳಿದುಬಿಟ್ಟ. ಬ್ರಾಹ್ಮಣ ಅಳಿಯನನ್ನು ಉಳಿಸಿಕೊಳ್ಳುವುದು ಹೇಗೆ? ಎಂದು ಯೋಚನೆ ಮಾಡಿ, ಸಾಲಿಗ್ರಾಮ ದಾನ ಕೊಡಿಸಿದನು. ಆ ಕ್ಷಣದಲ್ಲಿಯೇ ಮೃತನಾದ ಪತಿ ಬದುಕಿದ. ದಂಪತಿಗಳು ಬಹುಕಾಲ ಆನಂದದಿಂದ ಇದ್ದರು.

ಕಾಲಕ್ರಮದಲ್ಲಿ ಆಕೆ ಮೃತಳಾದಳು. ಸ್ತ್ರೀಜನ್ಮದಿಂದ ಬಿಡುಗಡೆಗೊಂಡ ಆತ ವಿಪ್ರಕುಲದಲ್ಲಿ ವಿಷ್ಣುಯಶಸ್ ಎಂಬ ಹೆಸರಿನಿಂದ ಹುಟ್ಟಿದ. ಪೂರ್ವಪುಣ್ಯದಿಂದ ಅವನಿಗೆ ಆ ಜನ್ಮದಲ್ಲಿ ಜ್ಞಾನೋದಯವಾಯಿತು. ಪ್ರತಿ ಕಾರ್ತಿಕದಲ್ಲಿಯೂ ಸಾಲಿಗ್ರಾಮದಾನವನ್ನು ಮಾಡಿ ಮೋಕ್ಷ ಪಡೆದ.

ಗೋದಾನಮಹಿಮಾ ವರ್ಣನೆ

ಸುಶರ್ಮಾ ಎಂದೊಬ್ಬ ಸಾತ್ವಿಕ ವಿಪ್ರನು ಶಾಂತನು ಜಿತೇಂದ್ರಿಯನು ವೇದಪಾರಂಗತನೂ ದಾನಪರನೂ ಆಗಿದ್ದನು. ತನ್ನ ದೇಹ ಹಣ್ಣಾಗಿರುವುದನ್ನು ಗಮನಿಸಿದ ಆತನು ವನಪ್ರವೇಶ ಮಾಡಿ ಮುನಿಗಳಿರುವ ಆಶ್ರಮಗಳಿಗೆ ತೆರಳಿ ತಪಗೈದು ಸ್ವರ್ಗ ಸೇರಿದನು.

ಆಗೊಮ್ಮೆ ಸ್ವರ್ಗದಲ್ಲಿ. ದೇವದೂತರು ಓಡಿಬಂದು ದೇವೇಂದ್ರನಲ್ಲಿ ವಿಜ್ಞಾಪನೆ ಮಾಡಿದರು– 'ದೇವೇಂದ್ರ ! ನಮ್ಮ ಲೋಕಕ್ಕೆ ಬರಬೇಕಾದ ಅನೇಕರನ್ನು ಯಮದೂತರು ಅವರು ಮಾಡಿರುವ ಪಾಪಗಳ ನಿಮಿತ್ತ ಯಮಲೋಕಕ್ಕೆ ಕೊಂಡೊಯ್ಯುತ್ತಿದ್ದಾರೆ. ನೀನೇನಾದರೂ ವ್ಯವಸ್ಥೆ ಮಾಡಬೇಕು.' ಕೂಡಲೇ ದೇವೇಂದ್ರನು ಆದೇಶವಿತ್ತನು– "ಧಾರ್ಮಿಕರಾದ ಮನುಷ್ಯೋತ್ತಮರು ನನ್ನ ಲೋಕಕ್ಕೆ ಬರಬೇಕು. ಪಾಪಿಗಳು ಮಾತ್ರ ನರಕಕ್ಕೆ ಹೋಗಲಿ. ಧಾರ್ಮಿಕರು ಗೋದಾನ ಮಾಡಿ ಪಾಪರಾಶಿಯನ್ನು ಕಳೆದುಕೊಳ್ಳಲಿ"

ಇದನ್ನು ಆಲಿಸಿದ ಸುಶರ್ಮ ವಿಮಾನವೇರಿ ಅಂತರಿಕ್ಷದಲ್ಲಿ ಬಂದು ತನ್ನ ಮಕ್ಕಳಿಗೆ ಕೂಗಿ ಹೇಳಿದ– 'ಮಕ್ಕಳೇ! ನೀವು ಸ್ವರ್ಗಕ್ಕೆ ಬರಲು ಬಯಸಿದ್ದರೆ ಗೋದಾನ ಮಾಡಿ ಪಾಪ ಕಳೆದುಕೊಳ್ಳಿರಿ.' ಇದನ್ನು ಕೇಳಿ ಅವನ ಮಕ್ಕಳೂ ಬಂಧುಗಳೆಲ್ಲ ಅಚ್ಚರಿಗೊಂಡರು. ಗೋದಾನದ ಮಹತ್ತ್ವವನ್ನು ಎಲ್ಲೆಡೆ ಸಾರಿದರು. ಇದರಿಂದ ವಿಪ್ರರೆಲ್ಲ ಗೋದಾನಪರರಾದರು.

ಹಾಲು ಅಮೃತ. ಅದನ್ನು ಕೊಡುವ ಹಸುವನ್ನು ದಾನ ಮಾಡುವವರು ಅಮೃತತ್ವವನ್ನೇ ಪಡೆಯುತ್ತಾರೆ. ಪೌರಾಣಿಕನು ವಿದ್ವಾಂಸನು ಶ್ರೋತ್ರಿಯನು, ಕುಟುಂಬಿಯೂ ವೃತ್ತಿಹೀನನೂ ಆದ ವಿಪ್ರನಿಗೆ ಗೋದಾನವನ್ನು ಮಾಡಬೇಕು. ಕಾರ್ತಿಕವ್ರತದ ಪೂರ್ಣತೆಗಾಗಿ ಗೋದಾನವನ್ನು ಮಾಡಬೇಕು. ಸಪಿಂಡೀಕರಣ ದಿನ, ವ್ಯತೀಪಾತ ಮತ್ತು ಮಹಾಲಯ ಅಮಾವಾಸ್ಯೆಯಂದು ಗೋದಾನ

ಮಾಡುವವರು ಪಾಪಗಳಿಂದ ಮುಕ್ತಿಪಡೆದು ಕಾಲಕ್ರಮದಲ್ಲಿ ಸಾಧನೆಗಳನ್ನು ಮಾಡಿ ಮೋಕ್ಷ ಹೊಂದುತ್ತಾರೆ.

ಮಾರ್ಗಶೀರ್ಷಮಾಸ

ಈ ಮಾಸದಲ್ಲಿ ಗೋದಾನ, ಭೂಮಿದಾನ, ವಿಶೇಷವಾಗಿ ಅನ್ನದಾನ, ವಸ್ತ್ರದಾನ, ಶಯ್ಯಾದಾನ, ಆಭರಣದಾನ, ಗೃಹದಾನವು ಭಗವಂತನಿಗೆ ವಿಶೇಷ ಪ್ರೀತಿಕರ.

ಸತ್ಪಾತ್ರರಾದ ವಿಪ್ರರನ್ನು ಯಥಾಶಕ್ತಿ ಆಹ್ವಾನಿಸಿ ಭಕ್ಷ್ಯ-ಭೋಜ್ಯಾದಿ ಪಕ್ವಾನ್ನ ಭೋಜನ ಮಾಡಿಸುವುದು ಈ ಮಾಸದ ವಿಶೇಷ ಅನ್ನದಾನ ಸೇವೆ.

ಎಲ್ಲ ದಾನಗಳಲ್ಲಿ ಮೂರು ಶ್ರೇಷ್ಠದಾನ. 1. ಭೂದಾನ, 2. ಧೇನುದಾನ, 3. ವಿದ್ಯಾದಾನ.

ದಂಪತಿ ಪೂಜೆ ಈ ಮಾಸದ ವಿಶೇಷಕರ್ತವ್ಯ. ದಂಪತಿಗಳನ್ನು ಆಹ್ವಾನಿಸಿ ಅವರಲ್ಲಿ ಲಕ್ಷ್ಮೀ ನಾರಾಯಣರನ್ನು ಆವಾಹಿಸಿ ಯಥಾಶಕ್ತಿ ವಸ್ತ್ರಾಭರಣಾದಿ ದಾನಗಳಿಂದ ಸತ್ಕರಿಸಬೇಕು.

ಪುಷ್ಯಮಾಸ

ಸೂರ್ಯನು ಧನುರಾಶಿಯನ್ನು ಪ್ರವೇಶಿಸುವ ಧನುರ್ಮಾಸವು ಬರುವ ಈ ಸಮಯದಲ್ಲಿ ದೀಪದಾನವು ಶ್ರೇಷ್ಠವೆನಿಸಿದೆ. ಇಲ್ಲಿ ದೀಪದಾನವೆಂದರೆ ದೇವರಿಗೆ ದೀಪ ಹಚ್ಚುವುದು. ಬ್ರಾಹ್ಮಣರಿಗೆ ದೀಪದಾನವನ್ನು ಮಾಡಬಹುದಾಗಿದೆ.

ದೇವಾಲಯದಲ್ಲಿ, ನದೀತೀರದಲ್ಲಿ, ಅಶ್ವತ್ಥವೃಕ್ಷದ ಸನ್ನಿಧಿಯಲ್ಲಿ, ಯಜ್ಞಶಾಲೆಯಲ್ಲಿ, ದನದ ಕೊಟ್ಟಿಗೆಯಲ್ಲಿ, ನಾಲ್ಕು ದಾರಿ ಸೇರುವ ಸ್ಥಳದಲ್ಲಿ, ರಾಜಮಾರ್ಗದಲ್ಲಿ, ಬ್ರಾಹ್ಮಣನ ಮನೆಯಲ್ಲಿ ದೀಪ ಹಚ್ಚುವುದರಿಂದ ಕುರುಕ್ಷೇತ್ರ, ಪ್ರಯಾಗ, ಗೋದಾವರೀತೀರಗಳಲ್ಲಿ ಮಾಡಿದ ಕೋಟಿಯಜ್ಞದ ಫಲ ಬರುತ್ತದೆ.

ಹಿಂದೆ ಸುಮತಿ ಎಂದೊಬ್ಬ ಧಾರ್ಮಿಕ ರಾಜನಿದ್ದ. ಅವನ ಮನೆಗೊಮ್ಮೆ ಅಗಸ್ತ್ಯರು ಅತಿಥಿಗಳಾಗಿ ಬಂದರು. ರಾಜನೂ ಭಕ್ತಿಯಿಂದ ಅವರನ್ನು ಸತ್ಕರಿಸಿದನು. ಮುನಿಗಳಿಗೆ ಗೋದಾನ ಮಾಡಿ ತಾನು ಕೃತಾರ್ಥನೆಂದು ಭಾವಿಸಿ ತಾವು ಬಂದ ಕಾರಣವನ್ನು ತಿಳಿಸಿರಿ ಎಂದು ಪ್ರಾರ್ಥಿಸಿದ. ಮುನಿಗಳು ಹೇಳಿದರು– ಕಣ್ವಾಶ್ರಮದಲ್ಲಿ ನಡೆಯುವ ಯಜ್ಞದಲ್ಲಿ ಪಾಲ್ಗೊಳ್ಳಲು ಹೊರಟವನು ನಿನ್ನ ಆಶ್ರಮವನ್ನು ನೋಡಿ ಕುತೂಹಲದಿಂದ ಒಳ ಬಂದೆ. ನಿನ್ನ ಸತ್ಕಾರವನ್ನು ಪಡೆದು ಸಂತೋಷವಾಯಿತು. ನನಗೆ ಬಾಯಾರಿಕೆ ಬಾಧಿಸುತ್ತಿದೆ ಎಂದರು. ಕೂಡಲೇ ತನ್ನ ಹೆಂಡತಿಯಾದ ಸುನಂದೆಗೆ ಹೇಳಿ ತಂಬಿಗೆಯಲ್ಲಿ ನೀರು ಹಿಡಿದು ಸ್ವೀಕರಿಸಿ ಎಂದ.

ಅಗಸ್ತ್ಯರು, ನೀನು ಪುತ್ರಸಂತಾನರಹಿತನಾಗಿರುವಿ. ನಿನ್ನ ಮನೆಯ ನೀರು ಕುಡಿಯುವುದಿಲ್ಲ. ಪುತ್ರಪ್ರಾಪ್ತಿಗಾಗಿ ಪ್ರಯತ್ನ ಮಾಡು ಎಂದರು.

ಶೋಕತಪ್ತನಾದ ರಾಜ ಅಗಸ್ತ್ಯರ ಪಾದ ಹಿಡಿದು ಪುತ್ರಪ್ರಾಪ್ತಿಯ ಮಾರ್ಗ ಹೇಳಿರೆಂದು ಬೇಡಿದ. ಪುಷ್ಯಮಾಸ ಬಂದಾಗ ಗೋವಿಂದ–ಸತ್ಯಾ–ಪ್ರೀತ್ಯರ್ಥವಾಗಿ ದೀಪವನ್ನು ಸಮರ್ಪಣೆ ಮಾಡು. ಪುತ್ರಸಂತಾನವಾಗುವುದೆಂದರು. ಹೀಗೆ ದೀಪದಾನದಿಂದ ಸುಮತಿ ಪುತ್ರವಂತನಾದ.

ಪುಷ್ಯಮಾಸದಲ್ಲಿ ಕೊಡಬೇಕಾದ ನಾನಾ ದಾನಗಳು ಇಂತಿವೆ–

ಗೋದಾನದಿಂದ ಅಕ್ಷಯಲೋಕಪ್ರಾಪ್ತಿ. ಭೂದಾನದಿಂದ ರಾಜತ್ವಪ್ರಾಪ್ತಿ. ತಿಲದಾನದಿಂದ ಧಾರ್ಮಿಕತೆಯು ಪ್ರಾಪ್ತಿಯಾಗುವುದು. ಸುವರ್ಣದಾನದಿಂದ ರೂಪವಂತನಾಗುವನು. ತುಪ್ಪದಾನದಿಂದ ಬುದ್ಧಿವಂತನಾಗುವನು. ವಸ್ತ್ರದಾನದಿಂದ ಬಟ್ಟೆಯ ಕೊರತೆ ನೀಗುವುದು. ಧಾನ್ಯದಾನದಿಂದ ಹಸಿವೆ ಬಾಯಾರಿಕೆಗಳ ಬಾಧೆಯಿಂದ ಬಿಡುಗಡೆಯಾಗುವುದು. ಬೆಲ್ಲದ ದಾನದಿಂದ ರೋಗಗಳು ಬಾರವು. ರಜತ (ಬೆಳ್ಳಿ) ದಾನದಿಂದ ನೇತ್ರದೋಷಗಳು

ಬಾರವು. ಲವಣದಾನದಿಂದ ಬಲಿಷ್ಠನಾಗುವನು. ರತ್ನದಾನದಿಂದ ಕಾಂತಿಯುಕ್ತನಾಗುವನು. ತೆಂಗಿನಕಾಯಿಯ ದಾನದಿಂದ ಅಕ್ಷಯಸಂತಾನ ಆಗುವುದು. ಮಾದಾಳದ ಹಣ್ಣಿನ ದಾನದಿಂದ ಬಂಜೆಯೂ ಪುತ್ರವತಿಯಾಗುವಳು. ಹವಳ, ಮುತ್ತು, ಮಾಣಿಕ್ಯ, ಬೆಣ್ಣೆ, ಕೂಷ್ಮಾಂಡಗಳನ್ನು ವಸ್ತ್ರಗಳೊಂದಿಗೆ ದಾನ ಮಾಡುವುದರಿಂದ ಸಕಲ ಇಷ್ಟಾರ್ಥಪ್ರಾಪ್ತಿಯಾಗುವುದು. ತಾಂಬೂಲದಾನದಿಂದ ಸಕಲಕಾಮನಾ ಪ್ರಾಪ್ತಿ. ಶಯ್ಯಾದಾನದಿಂದ ಶಯ್ಯಾದುಃಖವು ಲಭಿಸದು. ಗಟ್ಟಿಯಾದ, ಮೆದುವಾದ, ಹೊಸದಾದ ವಸ್ತ್ರವನ್ನು ವಿಶೇಷವಾಗಿ ದಾನ ಮಾಡಬೇಕು. ಉಣ್ಣೆ ವಸ್ತ್ರದಾನವೂ ಶ್ರೇಷ್ಠ. ಚಳಿಯ ನಿವಾರಣೆಗಾಗಿ ಕಟ್ಟಿಗೆಗಳನ್ನು ದಾನ ಕೊಡಬೇಕು. ಅಶ್ವ, ಪಲ್ಲಕ್ಕಿ, ಎತ್ತುಗಳನ್ನು ದಾನ ಕೊಡಬೇಕು. ಕಬ್ಬಿಣ ದಾನದಿಂದ ಯಮದಂಡದಿಂದ ದಂಡನೆ ತಪ್ಪುತ್ತದೆ. ಕಂಚಿನ ಪಾತ್ರೆ ದಾನದಿಂದ ಕ್ರಮವಾಗಿ ವಿಷ್ಣುಲೋಕ ಪ್ರಾಪ್ತಿ. ಮಂಗಲಸೂತ್ರದಾನದಿಂದ, ಕುಂಕುಮದಾನದಿಂದ ಸೌಭಾಗ್ಯಹಾನಿ ತಪ್ಪುವುದು. ಪುಷ್ಪದಾನ, ಸುಗಂಧದ್ರವ್ಯ ದಾನಗಳೂ ಪ್ರಶಸ್ತ.

ಚಪ್ಪಲಿ ದಾನದಿಂದ ಪಾದರೋಗಪರಿಹಾರ

ಕನ್ಯಾಕುಬ್ಜದೇಶದಲ್ಲಿ ಶೃಂಗವಾನ್ ಎಂಬ ರಾಜನಿದ್ದನು ಅವನು ಗೋ–ಭೂ–ವಸ್ತ್ರಾದಿಗಳ ದಾನವನ್ನು ಸಾಕಷ್ಟು ಮಾಡಿದ್ದನು. ಮರಗಳನ್ನು ನೆಟ್ಟು ಬೆಳೆಸಿದ್ದ. ಬಾವಿ–ಕೆರೆಗಳ ನಿರ್ಮಾಣ ಮಾಡಿದ್ದನು. ಆದರೂ ದೈವಯೋಗದಿಂದ ಪಾದದಲ್ಲಿ ಸ್ಫೋಟಕ ಎಂಬ ರೋಗ ಬಂದಿತ್ತು. ಏನೇನೋ ಔಷಧೋಪಚಾರ ಮಾಡಿದರೂ ಬಗೆಹರಿಯಲಿಲ್ಲ. ತುಂಬ ದುಃಖಿತನಾದನು.

ಒಮ್ಮೆ ಅವನ ಆಶ್ರಮಕ್ಕೆ ಕಣ್ವಋಷಿಗಳು ಬಂದರು. ಋಷಿಗಳು ಬಂದದ್ದು ಕಂಡರೂ ಎದ್ದು ನಿಂತು ಗೌರವಿಸಲಿಲ್ಲ. ಅವರಿಗೆ ಕೋಪ ಬಂದು ಶಾಪ ಕೊಡಲು ಮುಂದಾದರು. ಆಗ ರಾಜ ಗಾಬರಿಯಿಂದ ವಿಜ್ಞಾಪನೆ ಮಾಡಿದ, ನನ್ನ ಪಾದಗಳನ್ನು ನೋಡಿರಿ. ಸ್ಫೋಟಕ ಎಂಬ ರೋಗದಿಂದ ಬಳಲಿದ್ದೇ ಎದ್ದು ನಿಲ್ಲಲು ಸಾಧ್ಯವಾಗುತ್ತಿಲ್ಲ. ಕ್ಷಮಿಸಿರೆಂದ. ಕೃಪಾಳು ಕಣ್ವರು

ಯೋಗಮಾರ್ಗದಿಂದ ಆ ಪಾದರೋಗದ ಕಾರಣವನ್ನು ತಿಳಿದು ಹೇಳಿದರು. ರಾಜನ್! ಈ ಜನ್ಮದಲ್ಲಿ ಈ ಪಾದ ರೋಗಕ್ಕೆ ಯಾವ ಪಾಪವೂ ಕಾರಣವಾಗಿಲ್ಲ. ಜನ್ಮಾಂತರದಲ್ಲಿ ಎಲ್ಲ ಧರ್ಮಗಳನ್ನೂ ಅನುಷ್ಠಾನ ಮಾಡಿದರೂ ಪಾದರಕ್ಷೆಯ ದಾನ ಮಾಡಿಲ್ಲ. ಪೌಷಮಾಸದಲ್ಲಿ ಪಾದರಕ್ಷೆಯ ದಾನ ಮಾಡು. ನಿನ್ನ ಪಾದರೋಗ ಪರಿಹಾರವಾಗುವುದೆಂದರು. ಕಣ್ವರು ಸತ್ಕೃತರಾಗಿ ಹೋದರು. ರಾಜನು ಹಾಗೇ ಮಾಡಿ ಪಾದರೋಗದಿಂದ ಮುಕ್ತನಾದನು.

ವಸ್ತ್ರದಾನ ಮಹಿಮಾ

ಅಂತರ್ವೇದಿ ಎಂಬಲ್ಲಿ ಪಿಪ್ಪಲಾದನೆಂಬ ರಾಜನಿದ್ದನು. ಅವನಿಗೆ ಇಂದ್ರದ್ಯುಮ್ನನೆಂಬ ಮಗನಿದ್ದನು. ಕಾಲಕ್ರಮದಲ್ಲಿ ಪಿಪ್ಪಲಾದನು ಇಂದ್ರದ್ಯುಮ್ನನಿಗೆ ಪಟ್ಟಗಟ್ಟಿ ತಾನು ವಾನಪ್ರಸ್ಥಾಶ್ರಮಿಯಾದನು. ಮುಂದೆ ಮರಣವನ್ನು ಹೊಂದಿದನು. ಇಂದ್ರದ್ಯುಮ್ನ ಉತ್ತರ ಕ್ರಿಯೆ ಮುಗಿಸಿದ. ಅವನು ಮಹಾಶೂರನೂ ಅಧಾರ್ಮಿಕನೂ ಪ್ರಜಾಪೀಡಕನೂ ಆಗಿದ್ದನು.

ಒಮ್ಮೆ ಇಂದ್ರದ್ಯುಮ್ನನು ಮುಂಜಾನೆ ಯಮುನೆಯ ತೀರಕ್ಕೆ ಬಂದನು. ಅಲ್ಲಿ ಅನೇಕ ವಿಪ್ರರು ಸ್ನಾನ ಮಾಡುತ್ತಿದ್ದರು. ಕೆಲವರು ಪುರಾಣಪಠಣ ಮಾಡುತ್ತಿದ್ದರು. ಕೆಲವರು ಶ್ರವಣ ಮಾಡುತ್ತಿದ್ದರು. ಕೆಲವರು ನಾಮಸ್ಮರಣೆ ಮಾಡುತ್ತಿದ್ದರು. ಅಲ್ಲಿಯೇ ಒಬ್ಬ ಬ್ರಾಹ್ಮಣ ಸ್ನಾನ ಮಾಡಿ ಬಟ್ಟೆಯಿಲ್ಲದೆ ಚಳಿಯಿಂದ ನಡುಗುತ್ತಿದ್ದುದನ್ನು ಕಂಡ ಇಂದ್ರದ್ಯುಮ್ನ ತಾನು ಧರಿಸಿದ ಮೇಲಿನ ವಸ್ತ್ರವನ್ನೇ ಅವನಿಗೆ ಕೊಟ್ಟ. ಆತನು ಅದನ್ನು ಹೊದ್ದು ಚಳಿಯಿಂದ ರಕ್ಷಣೆ ಪಡೆದ.

ಕೆಲವು ಕಾಲದ ಬಳಿಕ ಇಂದ್ರದ್ಯುಮ್ನ ಮರಣವನ್ನು ಹೊಂದಿದ. ಯಮದೂತರು ಅವನನ್ನು ಹೀನಕೃತ್ಯಗಳ ಪರಿಣಾಮವಾಗಿ ಯಮನ ಆದೇಶದಂತೆ ಕುಂಭೀಪಾಕ ನರಕಕ್ಕೆ ಹಾಕಿದರು. ಆದರೆ ಕುಂಭೀಪಾಕನರಕವೇ

ಶೀತಲವಾಯಿತು. ದೂತರು ಯಮನಿಗೆ ಅಚ್ಚರಿಯನ್ನು ಅರುಹಿದರು. ಯಮನು ಬೆರಗಾಗಿ ಚಿತ್ರಗುಪ್ತನನ್ನು ವಿಚಾರಿಸಿದ. ಚಿತ್ರಗುಪ್ತ ಪರಿಶೀಲನೆ ಮಾಡಿ, ಇವನು ಪೌಷಮಾಸದಲ್ಲಿ ಶೀತಾರ್ತನಾದ ವಿಪ್ರನಿಗೆ ವಸ್ತ್ರದಾನ ಮಾಡಿದ್ದಾನೆ. ಅದರ ಪ್ರಭಾವವಿದು ಎಂದನು. ಮತ್ತೆ ಯಮ ಆ ರಾಜನನ್ನು ರೌರವಕ್ಕೆ ಬೀಳಿಸಿದನು. ಅದೂ ತಂಪಾಯಿತು. ಇದೇನು? ಎಂದು ಚಿಂತಿತನಾದನು. ಅದೇ ಕಾಲಕ್ಕೆ ಆಕಸ್ಮಿಕವಾಗಿ ನಾರದರು ಬಂದರು. ಯಮನು ನಾರದರಲ್ಲಿ ವಿಚಾರಿಸಿದ. ನಾರದರು ಹೇಳಿದರು: ಇತರ ಧರ್ಮಗಳನ್ನು ಮಾಡದಿದ್ದರೂ ಪೌಷಮಾಸದಲ್ಲಿ ವಸ್ತ್ರದಾನ ಮಾಡಿದರೆ ಅವನನ್ನು ಯಾವ ನರಕವೂ ಬಾಧಿಸದು. ಇಂದ್ರದ್ಯುಮ್ನ ಅಂತಹ ವಸ್ತ್ರದಾನ ಮಾಡಿರುವುದರಿಂದ ಈ ಯಾವ ನರಕಗಳೂ ಬಾಧಿಸವು. ಇಲ್ಲಿ ನೋಡು, ವಿಷ್ಣುದೂತರು ಅವನನ್ನು ಕೊಂಡೊಯ್ಯಲು ವಿಮಾನದೊಂದಿಗೆ ಬಂದಿರುವರು ಎಂದರು. ಇಂದ್ರದ್ಯುಮ್ನ ವಿಮಾನವೇರಿ ಮುನ್ನಡೆದ.

ಧರ್ಮರಾಜ ನಿಬ್ಬೆರಗಾಗಿ ನುಡಿದ– ಅಧಾರ್ಮಿಕನಾದವನೇ ವಸ್ತ್ರದಾನ ಮಹಿಮೆಯನ್ನು ಪಡೆದ ಮೇಲೆ ಭಕ್ತಿಯಿಂದ ಮಾಡಿದ ವಸ್ತ್ರದಾನದ ಹಿರಿಮೆಯನ್ನು ಎಂತು ಬಣ್ಣಿಸೋಣ? ಇಂದಿನಿಂದ ಹೊಸ ಆದೇಶವನ್ನು ಹೊರಡಿಸುತ್ತಿದ್ದೇನೆ– ಯಾರು ವಿಷ್ಣು ಪ್ರೀತಿಗಾಗಿ ಪುಷ್ಯಮಾಸದಲ್ಲಿ ವಸ್ತ್ರದಾನ ಮಾಡುವರೊ ಅವರನ್ನು ಮುಟ್ಟಬೇಡಿ ಎಂದು ತನ್ನ ದೂತರಿಗೆ ಹೇಳಿದ. ಆದ್ದರಿಂದ ಈ ಮಾಸದಲ್ಲಿ ವಸ್ತ್ರದಾನವು ಅತ್ಯುತ್ತಮವಾಗಿದೆ.

ಕಾಂಸ್ಯ (ಕಂಚು) ಪಾತ್ರದಾನದ ಹಿರಿಮೆ

ಒಮ್ಮೆ ವಿಷ್ಣುವಿನಲ್ಲಿ ಲಕ್ಷ್ಮೀದೇವಿ ಅಕ್ಷಯ ಸಂತತಿಕಾರಣವಾದ ಧರ್ಮವನ್ನು ಲೋಕಹಿತಕ್ಕಾಗಿ ತಿಳಿಸೆಂದು ಬಿನ್ನವಿಸಿದಳು. ಆಗ ಭಗವಂತನು ಕಾಂಸ್ಯಪಾತ್ರದಾನವು ಅಕ್ಷಯ ಸಂತತಿ ಪ್ರದವೆಂದು ಅರುಹಿ ಇತಿಹಾಸವೊಂದನ್ನು ತಿಳಿಸಿದನು.

ಒಮ್ಮೆ ದ್ವಾರಕೆಯಲ್ಲಿ ಭಗವಂತನಿರುವಾಗ ಬ್ರಾಹ್ಮಣನೊಬ್ಬ ಆಗಮಿಸಿ

ಧರ್ಮಸಂಸ್ಥಾಪಕನೇ, ನನಗಾಗಿ ಧರ್ಮಕಾರ್ಯವನ್ನು ಮಾಡಬೇಕು ಎಂದು ಕೇಳಿಕೊಂಡನು.

ಬಂದಿರುವ ಕಾರಣವೇನೆಂದು ಶ್ರೀಹರಿ ಕೇಳಲು ವಿಪ್ರನು ವಿವರಿಸಿದನು– ಸ್ವಾಮಿ! ಕುತ್ಸನೆಂಬ ದೈತ್ಯ ಮಾಹಿಷ್ಮತೀನಗರದಲ್ಲಿ ವಿಪ್ರಹಿಂಸಾಪರನಾಗಿರುವನು. ನೀನು ಅಲ್ಲಿಗೆ ಬಂದು ಅವನನ್ನು ಸಂಹರಿಸಬೇಕು.

ಶ್ರೀಹರಿಯು ಮಾಹಿಷ್ಮತೀನಗರಕ್ಕೆ ಹೋಗಿ ಕುತ್ಸನ ಜೊತೆಯಲ್ಲಿ ಬಹು ಸಮಯ ಯುದ್ಧಮಾಡುತ್ತಿರುವಾಗ ದೇವಶರ್ಮನೆಂಬ ಬ್ರಾಹ್ಮಣನೊಬ್ಬನು ಕಂಚಿನ ಮುದ್ಗರ ಎಂಬ ಆಯುಧವನ್ನು ಕೊಟ್ಟು ಅದರಿಂದ ದೈತ್ಯಸಂಹಾರ ಮಾಡುವಂತೆ ವಿಜ್ಞಾಪಿಸಿಕೊಂಡನು. ಬ್ರಾಹ್ಮಣನಿಂದ ಪವಿತ್ರವಾದ ಈ ಆಯುಧ ವ್ಯರ್ಥವಾಗದು ಎಂದು ಅರಿತ ದೈತ್ಯ, ಭಗವನ್! ಈ ಆಯುಧದಿಂದಲೇ ನನ್ನ ಸಂಹಾರ ನಿಶ್ಚಯ. ಮೊದಲು ಈ ಆಯುಧದ ಇತಿಹಾಸವನ್ನು ಹೇಳುತ್ತೇನೆಂದನು.

ಹಿಂದೊಮ್ಮೆ ಮಾಹಿಷ್ಮತೀನಗರದಲ್ಲಿ ಶಿವಶರ್ಮನೆಂಬ ಬ್ರಾಹ್ಮಣನಿದ್ದನು. ಪ್ರಾತಃ ಸ್ನಾನದ ವ್ರತವನ್ನು ತೊಟ್ಟಿದ್ದ ಅವನೊಮ್ಮೆ ಬೆಳದಿಂಗಳನ್ನು ನೋಡಿ ಅರುಣೋದಯವೆಂದು ಭ್ರಮಿಸಿ ಅರ್ಧರಾತ್ರಿಯಲ್ಲಿ ನದೀತೀರಕ್ಕೆ ಹೋಗಿ ಸ್ನಾನ ಮಾಡಿ ಆಹ್ನಿಕ ಮಾಡುತ್ತ ಕುಳಿತನು. ಆಗ ಆಕಸ್ಮಿಕವಾಗಿ ಭೂತ ಸಮೂಹವು ಅವನೆಡೆಗೆ ಬಂತು. ಹೆದರಿದ ಬ್ರಾಹ್ಮಣ ಎದ್ದರೆ ಜಪಕ್ಕೆ ಚ್ಯುತಿ ಬಂದೀತೆಂದು ಕಣ್ಮುಚ್ಚಿ ಜಪಿಸುತ್ತಲೇ ಇದ್ದನು. ಆದರೂ ಭೂತಗಳು ಸಮೀಪ ಬರಲು ಬೆಚ್ಚಿದವು. ಅಷ್ಟರಲ್ಲಿ ವರುಣನು ಕಂಚಿನ ಈ ಮುದ್ಗರಾಯುಧವನ್ನು ಕೊಟ್ಟು, ಇದನ್ನು ಧರಿಸು. ಭೂತ ಪ್ರೇತಗಳೆಲ್ಲ ಓಡಿ ಹೋಗುವವು. ಮುಂದೆ ಈ ಆಯುಧ ದೈತ್ಯ ಸಂಹಾರಕ್ಕೂ ಸಾಧನವಾಗುತ್ತದೆ ಎಂದು ಹೇಳಿದನು. ಆದರೆ ಈ ಆಯುಧವನ್ನು ಕೈಯಲ್ಲೇ ಹಿಡಿದಿರಬೇಕು. ನೆಲದ ಮೇಲೆ ಇಡಬೇಡ ಎಂದು ಎಚ್ಚರಿಸಿದನು.

ಅದನ್ನು ನೋಡಿ ಅಂದು ಆ ಭೂತಸಂಘಗಳು ಪಲಾಯನಗೈದವು.

ಅದನ್ನು ಎಲ್ಲಿ ಹೋದರೂ ಕೈಯಲ್ಲಿ ಹಿಡಿದೇ ಇದ್ದ. ಆದರೆ ಒಮ್ಮೆ ಆ ಶಿವಶರ್ಮ ನದೀತೀರಕ್ಕೆ ಹೋಗಿ ನೆಲದ ಮೇಲಿಟ್ಟು ಸ್ನಾನಕ್ಕೆ ನೀರಿನಲ್ಲಿ ಇಳಿದನು. ಇದೇ ಸಮಯದಲ್ಲಿ ನಾನು ಅದನ್ನು ಹಿಡಿದು ಓಡಿದೆ. ಬೆನ್ನ ಹಿಂದೆಯೇ ಓಡಿ ಬಂದ ಆ ಬ್ರಾಹ್ಮಣ ನನ್ನ ಮುಂದಿನ ಮಾರ್ಗವನ್ನೆಲ್ಲ ಸುಟ್ಟು ಹಾಕಿದನು. ಹೆದರಿದ ನಾನು ಆ ಆಯುಧವನ್ನು ಅಲ್ಲೇ ಒಗೆದೆನು. ಆಗ ಆ ಬ್ರಾಹ್ಮಣನು ಪರಮಾತ್ಮನು ಈ ಆಯುಧದಿಂದಲೇ ನಿನ್ನನ್ನು ಸಂಹಾರ ಮಾಡುವನೆಂದನು. ಆ ಕಂಚಿನ ಮುದ್ಗರವೇ ನಿನ್ನ ಕೈಗೆ ಬಂದಿದೆ. ಕೊಲ್ಲು ಸ್ವಾಮಿ! ಎಂದು ಬಾಗಿ ಶಿರವೊಡ್ಡಿದನು. ಶ್ರೀಹರಿಯು ಅವನ ತಲೆಯನ್ನು ತರಿದನು. ಕೂಡಲೇ ಆ ಕುತ್ಸನು ಸುಂದರ ಶರೀರವನ್ನು ಧರಿಸಿ ನಿಂತನು. ಶ್ರೀಹರಿ! ನಾನು ಶಾಪದಿಂದ ದೈತ್ಯದೇಹವನ್ನು ಧರಿಸಿದ್ದೆ. ಇಂದು ಶಾಪವಿಮೋಚನೆಯಾಯಿತು. ನಿನ್ನ ಅನುಗ್ರಹದಿಂದ ನಿನ್ನ ಲೋಕವನ್ನೇ ಸೇರಬಯಸುವೆನೆಂದ. ಶ್ರೀಹರಿ 'ತಥಾಸ್ತು' ಎನ್ನಲು ಪ್ರದಕ್ಷಿಣೆ–ನಮಸ್ಕಾರ ಹಾಕಿ ಸದ್ಗತಿಯನ್ನು ಪಡೆದನು. ಕಂಚಿನ ಮುದ್ಗರಾಯುಧದಿಂದ ನೀನಿಂದು ಸಂಹಾರಗೊಂಡು, ಶಾಪವಿಮುಕ್ತನಾಗಿ ನನ್ನಿಂದ ಅನುಗೃಹೀತನಾಗಿ ಸದ್ಗತಿ ಸೇರಿದೆ. ಆದುದರಿಂದ ಈ ಪುಷ್ಯಮಾಸದ ಪೌರ್ಣಮಿಯಂದು ಕಂಚಿನ ಪಾತ್ರೆಯನ್ನು ದಾನ ಮಾಡಿದವರಿಗೆ ಭೂತಬಾಧೆ ತಪ್ಪುವುದು. ಉತ್ತಮ ಅಕ್ಷಯ ಸಂತಾನವೂ ಆಗುವುದು ಎಂದು ಶ್ರೀಹರಿಯು ಲಕ್ಷ್ಮಿಗೆ ತಿಳಿಸಿದನು.

ಪುಷ್ಯ ಪೌರ್ಣಮಿಯಂದು ಶಿಂಶುಮಾರ ಪ್ರತಿಮಾದಾನ

ಪುಷ್ಯಮಾಸದಲ್ಲಿ ಪೌರ್ಣಮಿಯಂದು ತುಪ್ಪ ತುಂಬಿದ ಕಂಚಿನ ಪಾತ್ರೆಯಲ್ಲಿ ಶಿಂಶುಮಾರನ ಪ್ರತಿಮೆಯನ್ನಿಟ್ಟು ಪೂಜೆ ಮಾಡಿ ಬ್ರಾಹ್ಮಣನಿಗೆ ದಾನ ಮಾಡಬೇಕು. ಇದರಿಂದ ಶಿಂಶುಮಾರ ವ್ರತ ಫಲ ದೊರೆಯುವದಲ್ಲದೆ ಮರಣಾನಂತರ ತನ್ನ ಹಿಂದಿನ ಮತ್ತು ಮುಂದಿನ ಹತ್ತು ತಲೆಯವರು ಉದ್ಧಾರವಾಗಿ ಕ್ರಮವಾಗಿ ಸಾಧನೆ ಪೂರೈಸಿ ಸದ್ಗತಿ ಸೇರುವರು.

ಪೂಜಾಮಂತ್ರ–

ಶಿಂಶುಮಾರ ನಮಸ್ತೇಽಸ್ತು ಸರ್ವಶಕ್ತಿಯುತ ಪ್ರಭೋ ।
ಉತ್ಪತ್ತಿ ಸ್ಥಿತಿನಾಶಾನಾಂ ಹೇತುಭೂತ ಸನಾತನ ॥

ಪ್ರಾರ್ಥನಾ ಮಂತ್ರ–

ನಮಸ್ತೇ ದೇವದೇವೇಶ ನಮಸ್ತೇ ಗರುಡಧ್ವಜ ।
ನಮಸ್ತೇ ಪುಂಡರೀಕಾಕ್ಷ ತ್ರಾಹಿ ಮಾಂ ಶರಣಾಗತಮ್ ॥

ದಾನ ಮಂತ್ರ–

ಅಗ್ನಿನೇತ್ರ ನಮಸ್ತುಭ್ಯಂ ನಮಸ್ತೇ ಹ್ಯಮರಪ್ರಿಯ ।
ತವ ದಾನೇನ ಮೇ ಸಂತು ಪೂರ್ಣಾಃ ಸರ್ವೇ ಮನೋರಥಾಃ ॥

ಮಾಘಮಾಸ

ಮಾಘಮಾಸದಲ್ಲಿ ಬಂಗಾರದ ಮಾಧವಪ್ರತಿಮೆಯ ದಾನದಿಂದ ನೂರು ಕುಲ ಉದ್ಧಾರವಾಗುವುದರೊಂದಿಗೆ ಕಾಲಕ್ರಮದಲ್ಲಿ ಸಾಧನಾನುಷ್ಠಾನಗಳನ್ನು ನಡೆಸಿ ಮೋಕ್ಷ ಹೊಂದುವನು.

ಶಿಂಶುಮಾರ ಪ್ರತಿಮೆದಾನದಿಂದ ಶಿಶುಹತ್ಯೆಯ ಪಾಪದಿಂದ ಬಿಡುಗಡೆಯಾಗುವುದು.

ಕೋಟಿ ಭಾರ ಸುವರ್ಣದಾನದಿಂದ ಬರುವ ಪುಣ್ಯ ಮಾಘದಲ್ಲಿ ಗೋಪಿಚಂದನ ದಾನದಿಂದ ಬರುತ್ತದೆ.

ವೈಶ್ವದೇವಕ್ಕಾಗಿ ಅಕ್ಕಿಯನ್ನು ದಾನ ಕೊಡುವುದರಿಂದ ಪೂರ್ಣಾಯುಷ್ಯ ಪ್ರಾಪ್ತಿಯಾಗುವುದು.

ಪ್ರಸ್ಥ ಪ್ರಮಾಣದ ತುಪ್ಪದಾನದಿಂದ ಅಲಕ್ಷ್ಮೀಪರಿಹಾರ, ಅಪಮೃತ್ಯು ಪರಿಹಾರವಾಗುವುದು.

ಮಾಘ ಪೌರ್ಣಮಿಯಂದು ವಿಷ್ಣುಮಂದಿರದಲ್ಲಿ ತೈಲದೀಪದಾನದಿಂದ ಕಾಲಮೃತ್ಯು ಜಯವಾಗುತ್ತದೆ.

ಶೀತಾರ್ತನಾದ ದ್ವಿಜನಿಗೆ ಬೆಚ್ಚನೆಯ ವಸ್ತ್ರದಾನ ಮಾಡಿದರೆ ಪೂರ್ಣಾಯುಷ್ಯ ಪ್ರಾಪ್ತಿ. ಕಾಲಕ್ರಮೇಣ ವಿಷ್ಣು ಲೋಕಪ್ರಾಪ್ತಿ. ಮಾಘಮಾಸದಲ್ಲಿ ಪ್ರತಿನಿತ್ಯವೂ ಬ್ರಾಹ್ಮಣನಿಗೆ ತಾಂಬೂಲದಾನ ಕೊಡುವುದರಿಂದ ಪೂರ್ಣಾಯುಷ್ಯ ಪ್ರಾಪ್ತಿ.

ಎಳ್ಳು ತುಂಬಿದ ಪಾತ್ರೆಯ ದಾನದಿಂದ ದಾರಿದ್ರ್ಯ ದೋಷ ಪರಿಹಾರವಾಗಿ ಐಶ್ವರ್ಯ ಪ್ರಾಪ್ತಿಯಾಗುವುದು.

ಹೆಂಗಸಳು ಸುಮಂಗಲಿಯರಿಗೆ ಮೊರದ ಬಾಗಿನ ದಾನ ಮಾಡುವುದರಿಂದ ಮುತ್ತೈದೆತನ ಸ್ಥಿರವಾಗುವದು.

ಚಂದನ, ಧೂಪಗಳ ದಾನದಿಂದ ಇಷ್ಟಾರ್ಥಪ್ರಾಪ್ತಿಯಾಗುವುದು. ಕಂಚಿನ ಪಾತ್ರೆದಾನದಿಂದ ನೂರಾರು ಕನ್ಯಾದಾನದ ಫಲವನ್ನು ಪಡೆಯುವರು. ತುಪ್ಪತುಂಬಿದ ಕಂಚಿನ ಪಾತ್ರೆಯನ್ನು ಬತ್ತಿ ಸಹಿತವಾಗಿ ದಾನ ಕೊಡುವುದರಿಂದ ವೈಧವ್ಯ ಬರುವುದಿಲ್ಲ. ಮಾಂಗಲ್ಯವುಂಟಾಗುತ್ತದೆ.

ಮಾಘ ಪೌರ್ಣಮಿಯಂದು ಅಶ್ವದಾನದಿಂದ ಗುರುಪತ್ನೀಗಮನದ ಪಾಪ ಪರಿಹಾರವಾಗುವುದು.

ಫಾಲ್ಗುಣ ಮಾಸ

ಈ ಮಾಸದಲ್ಲಿ ಶಯ್ಯಾ, ಆಸನ, ಭೂಮಿ, ಗೃಹ, ಗೋ, ತಿಲ, ತಿಲಧೇನು, ಘೃತ, ಎತ್ತು, ಉಣ್ಣೆ ವಸ್ತ್ರ, ಚಪ್ಪಲಿ, ವಸ್ತ್ರ, ಅನ್ನ, ನೀರು, ಹಾಲು, ಬಗೆಬಗೆಯ ಧಾನ್ಯ– ಇವುಗಳ ದಾನಗಳು ವಿಹಿತವಾಗಿವೆ.

ಶಯ್ಯಾ– ಅಲಂಕೃತವಾದ ಶಯ್ಯೆಯಲ್ಲಿ ಬ್ರಾಹ್ಮಣ ಯುವ ದಂಪತಿಗಳನ್ನು ಕೂಡಿಸಿ, ನಾನಾ ವಸ್ತ್ರಾಭರಣಗಳನ್ನು ಕೊಟ್ಟು ಆರತಿ ಮಾಡಿ, ಅನಂತರ

ಭೋಜನ ಮಾಡಿಸಿ ತಾಂಬೂಲ ದಕ್ಷಿಣೆಗಳನ್ನು ಕೊಡಬೇಕು. ಇದರೊಂದಿಗೆ ಅನೇಕ ವಿಪ್ರರಿಗೆ ಕೂಡ ಭೋಜನ ಮಾಡಿಸಬೇಕು. ಇದರಿಂದ ಸ್ತ್ರೀವಿರಹೋತ್ಪನ್ನ ದುಃಖವನ್ನು ಕನಸಿನಲ್ಲಿಯೂ ಅನುಭವಿಸುವುದಿಲ್ಲ.

ಭೂದಾನ– ಎತ್ತು ಹಾಗೂ ಇತರ ಕೃಷಿಸಾಧನಗಳೊಂದಿಗೆ ಬಹು ದಕ್ಷಿಣೆಯನ್ನು ಕೊಟ್ಟು ಶ್ರೋತ್ರಿಯ ಕುಟುಂಬಿ ಬ್ರಾಹ್ಮಣನಿಗೆ ಭೂದಾನವನ್ನು ಮಾಡಬೇಕು. ಇದರಿಂದ ದಾನಿಯು ಮತ್ತೆ ಭೂಸ್ಪರ್ಶ ಮಾಡಲಾರನು. ಅಂದರೆ ಭೂಮಿಯ ಮೇಲೆ ಹುಟ್ಟಿ ಬರುವುದಿಲ್ಲ.

ಗೃಹದಾನ– ಲಕ್ಷಣ ಸಂಪನ್ನವಾದ ದೃಢವಾದ ಎರಡು ಬಾಗಿಲುಗಳುಳ್ಳ ಮನೆಯನ್ನು ಕಟ್ಟಿಸಿ. ಆ ಮನೆಯಲ್ಲಿ ಗೋವುಗಳನ್ನು ಕಟ್ಟಿ, ದಾಸಿಯರು, ಧಾನ್ಯಗಳು, ವಸ್ತ್ರಗಳು ಹಾಗು ಗೃಹೋಪಯೋಗಿ ವಸ್ತುಗಳೊಂದಿಗೆ ಗೃಹದಾನವನ್ನು ಮಾಡಬೇಕು. ನೀರಿನ ವ್ಯವಸ್ಥೆ ಸರಿಯಾಗಿರಬೇಕು. ಹೂ ಗಿಡಗಳನ್ನು ನೆಟ್ಟಿರಬೇಕು. ಮನೆಯನ್ನು ಅಲಂಕರಿಸಿ ಸುತ್ತಲೂ ಪಾರದಿಂದ ಸುತ್ತಿ ಅನೇಕ ಮಕ್ಕಳಿರುವ ಶ್ರೋತ್ರಿಯ ಬ್ರಾಹ್ಮಣನಿಗೆ ದಾನ ಕೊಡಬೇಕು. ಅವನು ಅಲ್ಲಿ ಬಹುಕಾಲವಾಸಿಯಾಗಿರಬೇಕು. ಅಸಮರ್ಥನಾಗಿದ್ದರೆ ಒಂದು ವರ್ಷ ಕಾಲದಷ್ಟು ಮಾತ್ರವಾದರೂ ಆ ಬ್ರಾಹ್ಮಣನ ಯೋಗ ಕ್ಷೇಮಗಳನ್ನು ನೋಡಿಕೊಳ್ಳಬೇಕು. ಇದರಿಂದ ದಾನಿಯು ಇಂದ್ರ ಲೋಕವನ್ನು ಸೇರುವನು.

ತಿಲದಾನ– ಸುವರ್ಣಾದಿ ಪಾತ್ರೆಯಲ್ಲಿ ತಿಲವನ್ನು ತುಂಬಿ ದಾನ ಮಾಡಬೇಕು. ಸುವರ್ಣ ಪಾತ್ರೆ ಕೊಡಲಾಗದವನು ದಕ್ಷಿಣೆಯೊಂದಿಗೆ ಕೇವಲ ತಿಲವನ್ನಾದರೂ ಕೊಡಬೇಕು. ದಾನಿಯು ತಿಲ ಸಂಖ್ಯೆಯ ಸಾವಿರ ವರ್ಷ ಉತ್ತಮಲೋಕಗಳಲ್ಲಿ ವಾಸ ಮಾಡುವನು.

ಗೋದಾನ– ಸಾಲಂಕೃತ ಹಸುವನ್ನು ಕರುವಿನೊಂದಿಗೆ ದಾನ ಮಾಡಬೇಕು. ಕಪ್ಪು ಬಣ್ಣದ ಹಸು ಶ್ರೇಷ್ಠ. ಬ್ರಾಹ್ಮಣನಿಗೆ ಯಥಾಶಕ್ತಿ

ವಸ್ತ್ರಾಭರಣಗಳನ್ನಿತ್ತು ಪೂಜಿಸಿ ದಾನ ಮಾಡಬೇಕು. ಬ್ರಾಹ್ಮಣ ಶಾಸ್ತ್ರಸಂಪನ್ನನು ವೇದ-ಶಾಸ್ತ್ರ-ಪುರಾಣಪ್ರವಚನಕಾರನಾಗಿರಬೇಕು. ಅಗ್ನಿಹೋತ್ರವನ್ನಿಟ್ಟುಕೊಂಡಿರುವವನಾದರೆ ತುಂಬ ಶ್ರೇಷ್ಠ. ತಿಲಧೇನು, ಸ್ವರ್ಣಧೇನು, ಜಲಧೇನು, ಘೃತಧೇನು, ಮಧುಧೇನು, ಧಾನ್ಯಧೇನು, ಗುಡಧೇನು, ರಸಧೇನು, ರತ್ನಧೇನು, ಸಪ್ತಧಾತುಗಳಿಂದ ನಿರ್ಮಿತಧೇನುಗಳನ್ನು ದಾನಕೊಟ್ಟವನು ಗೋಲೋಕವನ್ನು ಸೇರುತ್ತಾನೆ.

ಸಾಧು ಸ್ವಭಾವದ ಎತ್ತನ್ನು ಚೆನ್ನಾಗಿ ಅಲಂಕಾರಮಾಡಿ ಸ್ವಚ್ಛಂದವಾಗಿರಲು ಬಿಟ್ಟು ಬಿಡಬೇಕು. ವೃಷೋತ್ಸರ್ಗ ಎಂದು ಇದರ ಹೆಸರು. ಇದು ಫಾಲ್ಗುಣದಲ್ಲಿ ಶ್ರೇಷ್ಠ.

ನಿತ್ಯ ಬೇಗ ನಸುಕಿನಲ್ಲಿಯೇ ಏಳುವ ಸ್ವಭಾವದ ಸದಾಚಾರ ಸಂಪನ್ನ ವಿಪ್ರನಿಗೆ ಬೆಚ್ಚಗಿರುವ ಉಣ್ಣೆಯ ವಸ್ತ್ರದ ದಾನ ಮಾಡಬೇಕು. ಇದರಿಂದ ತಂತುಸಂಖ್ಯೆಯಷ್ಟು ಕಾಲ ಉತ್ತಮ ಲೋಕ ಪ್ರಾಪ್ತಿ.

ಪಾದರಕ್ಷೆದಾನ– ಪ್ರವಾಸ ಮಾಡುವಂತಹ ವಿಪ್ರನಿಗೆ ಪಾದರಕ್ಷೆಗಳನ್ನು ದಾನ ಕೊಟ್ಟರೆ ದಾನಿಯು ನೆಲದ ಮೇಲೆ ನಡೆಯುವ ಸಂದರ್ಭವೇ ಬಾರದು.

ವಸ್ತ್ರದಾನ– ವೇದಾಧ್ಯಯನ ಸಂಪನ್ನ ಬಡ ಬ್ರಾಹ್ಮಣರಿಗೆ ವಸ್ತ್ರದಾನವನ್ನು ಅವಶ್ಯ ಮಾಡಬೇಕು. ವಸ್ತ್ರದಾನದಿಂದ ನಮಗೆ ನಗ್ನತೆಯು ಬಾರದು.

ಅನ್ನದಾನ– ಷಡ್ರಸದಿಂದ ತುಂಬಿದ ಉತ್ತಮ ಅನ್ನವನ್ನು ದಾನ ಮಾಡುವುದರಿಂದ ಅಮರತ್ವವನ್ನು ಯೋಗ್ಯತೆಯಿದ್ದರೆ ಪಡೆಯಬಲ್ಲನು.

ಜಲದಾನ– ಸರ್ವರಿಗೂ ಸರ್ವಕಾಲದಲ್ಲಿ ಜೀವನಪ್ರದವಾದ ನೀರು ಪ್ರಧಾನ. ಅನ್ನದಾನಕ್ಕಿಂತ ಉತ್ತಮವಿದು. ಈ ದಾನವನ್ನು ಎಲ್ಲರಿಗೂ ಮಾಡಬೇಕು. ಈ ದಾನಕ್ಕೆ ಯಾವ ಪಾತ್ರನಿಷೇಧವೂ ಇಲ್ಲ. ಜಲದಾನಿಯು ವರುಣಲೋಕ ಸೇರುವನು.

ಕ್ಷೀರದಾನ– ವಿಪ್ರರಿಗೆ ಅದರಲ್ಲೂ ಬಾಲಕರಿಗೆ ಕ್ಷೀರದಾನ ಮಾಡುವುದು ಈ ಮಾಸದಲ್ಲಿ ತುಂಬ ಪುಣ್ಯಕರ. ಇದರಿಂದ ಪುತ್ರ ಪೌತ್ರಾದಿ ಪ್ರಾಪ್ತಿ.

ಧಾನ್ಯದಾನ– ಎಲ್ಲ ಪ್ರಾಣಿಗಳಿಗೆ ಧಾನ್ಯವನ್ನು ಕೊಡುವುದರಿಂದ ಕುಬೇರಪುರದಲ್ಲಿ ಫಲವನ್ನು ಅನುಭವಿಸುತ್ತಾನೆ.

ಹೀಗೆ ವಿವಿಧ ದಾನಗಳನ್ನು ಈ ಮಾಸದಲ್ಲಿ ಮಾಡಬಹುದು. ಶಕ್ತಿಯಿರದಿದ್ದರೆ ಶಕ್ತಿಯಿದ್ದಷ್ಟು ವಿಪ್ರನ ಕೈಗೆ ದಾನ ಮಾಡಲೇಬೇಕು.

ಎಲ್ಲ ದಾನಕ್ಕೂ ಹೇಳಬಹುದಾದ ಮಂತ್ರ

ತ್ರಿಲೋಕೀನಾಥ ದೇವೇಶ ಸರ್ವಭೂತದಯಾನಿಧೇ ।
ದಾನೇನ ಅನೇನ ತುಷ್ಟಸ್ಸ ಪ್ರಯಚ್ಛ ಮಮ ವಾಂಛಿತಮ್ ॥

ದಾನ ಮಾಡಬಾರದ ವಸ್ತುಗಳು

ಸಾಮಾನ್ಯಂ ಯಾಚಿತಂ ನ್ಯಾಸ ಆಧಿರ್ದಾರಾಶ್ಚ ತದ್ಧನಮ್ ।
ಅನ್ವಾಹಿತಂ ಚ ನಿಕ್ಷೇಪಃ ಸರ್ವಸ್ವಂ ಚ ಅನ್ವಯೇ ಸತಿ ॥
ಆಪತ್ಸ್ವಪಿ ನ ದೇಯಾನಿ ......
ಯೋ ದದಾತಿ ಮೂಢಾತ್ಮಾ ಪ್ರಾಯಶ್ಚಿತ್ತೀಯತೇ ನರಃ ।

ಅನೇಕರಿಗೆ ಸೇರಿದ ಸಂಪತ್ತು, ಮನೆಯಲ್ಲಿ ವ್ಯವಹಾರಕ್ಕಾಗಿ ಸಾಲ ಮಾಡಿ ಬೇಡಿ ತಂದ ಸಂಪತ್ತು, ಮನೆಯೊಡೆಯನಿಗೆ ತಲುಪಿಸಲು ಕೊಟ್ಟಿರುವ ಹಣ, ಮಾನಸವ್ಯಥೆ, ಕೈಹಿಡಿದ ಹೆಂಡತಿ, ಅವಳಿಗೆ ಸೇರಿದ ಸಂಪತ್ತು, ಮಕ್ಕಳಿರುವಾಗ ಸರ್ವಸ್ವವನ್ನು ಎಂತಹ ಆಪತ್ತಿನಲ್ಲಿಯೂ ಕೊಡಬಾರದು.

ವೇದ ಶಾಸ್ತ್ರವನ್ನು ಓದದವನಿಗೆ ಕೊಡುವ ದಾನ ನಿಷ್ಫಲ

ರಾಜಧಾನೀ ಯಥಾ ಶೂನ್ಯಾ ಯಥಾ ಕೂಪಶ್ಚ ನಿರ್ಜಲಃ ।
ಯಥಾಹುತಂ ಅನಗ್ನೌ, ತಥಾ ದ್ವಿಜೇಽನೃಚೇ ।
ಅನೃಚೇ – ವೇದಜ್ಞಾನರಹಿತೇ ।
ಯಥಾ ಕಾಷ್ಠಮಯೋ ಹಸ್ತೀ ಯಥಾ ಚರ್ಮಮಯೋ ಮೃಗಃ ।
ಯಶ್ಚ ವಿಪ್ರೋಽನಧೀಯಾನಃ ತ್ರಯಸ್ತೇ ನಾಮಧಾರಕಾಃ ॥

ಜನರಿಲ್ಲದ ರಾಜಧಾನಿ, ನಿರ್ಜಲವಾದ ಬಾವಿ, ಅಗ್ನಿ ಇಲ್ಲದಿರುವಲ್ಲಿಯ ಹೋಮ ಹೇಗೋ ಹಾಗೇ ವೇದ–ಶಾಸ್ತ್ರ ಅಧ್ಯಯನ ಮಾಡದಿರುವ ಬ್ರಾಹ್ಮಣನಿಗೆ ಕೊಟ್ಟದ್ದು ವ್ಯರ್ಥ.

ಮರದಲ್ಲಿ ಮಾಡಿದ ಆನೆ, ಚರ್ಮದ ಆಕೃತಿಯ ಮೃಗ, ಅಧ್ಯಯನವಿಲ್ಲದ ವಿಪ್ರ ಇವು ಮೂರು ಸುಮ್ಮನೆ ಆನೆ, ಮೃಗ, ವಿಪ್ರ ಎಂಬ ನಾಮಮಾತ್ರ ಪಡೆದವುಗಳು.

ಪಾತ್ರ ದೊರೆಯದಿದ್ದರೆ....?

ಪಾತ್ರಂ ಮನಸಿ ಸಂಚಿಂತ್ಯ ಕ್ರಿಯಾವಂತಂ ಗುಣಾನ್ವಿತಮ್ ।
ದೇಶೇ ಕಾಲೇ ಚ ಸಂಪ್ರಾಪ್ತೇ ದೇಯಮಪ್ಸು ವಿನಿಕ್ಷಿಪೇತ್ ॥

ಸದ್ಗುಣಭರಿತನು ಸದಾಚಾರವಂತನೂ ಆದ ಪಾತ್ರನನ್ನು ಮನಸ್ಸಿನಲ್ಲಿ ಚಿಂತಿಸಿಕೊಂಡು ಉತ್ತಮ ದೇಶ ಕಾಲಗಳು ಪ್ರಾಪ್ತವಾದಾಗ ದಾನ ಮಾಡುವ ವಸ್ತುವನ್ನು ನೀರಲ್ಲಿ ಹಾಕಬೇಕು.

ದಾನದ ಪಂಚಾಂಗಗಳು

ಪ್ರತಿಗ್ರಹೀತಾ ದ್ರವ್ಯಂ ಚ ಕಾಲೋ ದೇಶಶ್ಚ ಪಾವನಃ ।
ಶ್ರದ್ಧಾ ಚ ಸಾತ್ವಿಕೀ ಜ್ಞೇಯಂ ದಾನಾನಾಮಂಗಪಂಚಕಮ್ ॥

ದಾನ ಸ್ವೀಕರಿಸುವವನು, ದೇಯವಾದ ದ್ರವ್ಯ, ಪವಿತ್ರದೇಶ, ಕಾಲಗಳು, ಸಾತ್ವಿಕವಾದ ಶ್ರದ್ಧೆ ಇವು ದಾನದ ಐದು ಅಂಗಗಳು.

ಪಾಠ ಹೇಳುವ ಭಿಕ್ಷುಕರು

ಶಿಕ್ಷಯಂತಿ ನ ಯಾಚಂತೇ ಭಿಕ್ಷವಃ ಪಾತ್ರಪಾಣಯಃ ।
ಅದತ್ತ್ವಾ ಮಾದೃಶೋ ಮಾ ಭೂಃ ದತ್ವಾ ತ್ವಂ ತ್ವಾದೃಶೋ ಭವ ॥

ಕೈಯಲ್ಲಿ ಪಾತ್ರೆ ಹಿಡಿದ ಭಿಕ್ಷುಕರು ಬೇಡುತ್ತಿಲ್ಲ. ನಮಗೆ ಶಿಕ್ಷಣ ನೀಡುತ್ತಿದ್ದಾರೆ– "ದಾನ ಮಾಡದೇ ನೀನು ನಮ್ಮಂತೆ ಆಗಬೇಡ. ದಾನ ಮಾಡಿ ನೀನು ನಿನ್ನಂತೆ (ದಾನ ನೀಡುವವನು) ಆಗು."

ಯಾವ ಯಾವ ದಾನ ಹೇಗೆ ಹೇಗೆ ಪಡೆಯುವುದು?

ಭೂದಾನ– ದಾನ ಕೊಡಲಿರುವ ಅಷ್ಟೂ ಭೂಮಿಗೆ ಪ್ರದಕ್ಷಿಣೆ ಬಂದು 'ಪ್ರತಿಗೃಹ್ಣಾಮಿ' (ಸ್ವೀಕರಿಸುತ್ತೇನೆ) ಎಂದು ಹೇಳುವುದೇ ಭೂದಾನದ ಸ್ವೀಕಾರಕ್ರಮ.

ಭೂಮೇಃ ಪ್ರತಿಗ್ರಹಂ ಕುರ್ಯಾತ್ ಭೂಮಿಂ ಕೃತ್ವಾ ಪ್ರದಕ್ಷಿಣಮ್।
(ವಿ.ಪಾ)

ಕನ್ಯಾದಾನ– ಪಾಣಿಗ್ರಹಣವೇ ಸ್ವೀಕಾರ.

ಕರೇ ಗೃಹ್ಯ ತಥಾ ಕನ್ಯಾಂ (ವಿ.ಪಾ)

ಆನೆ, ಒಂಟೆದಾನ– ಅವುಗಳನ್ನು ಏರಿ ಸ್ವಲ್ಪ ನಡೆಸಿ "ಪ್ರತಿಗೃಹ್ಣಾಮಿ" ಎನ್ನಬೇಕು.

ಆರುಹ್ಯ ತು ಗಜಸ್ಯೋಕ್ತಃ (ವಿ.ಪಾ)

ಗೋದಾನ– ಹಸುವಿನ ಬಾಲ ಹಿಡಿದು ಸ್ವೀಕಾರ.

ಪ್ರತಿಗೃಹ್ಣೀತ ಗಾಂ ಪುಚ್ಛೇ (ವಿ.ಪಾ)

ಅಶ್ವದಾನ– ಸಾಮಾನ್ಯವಾಗಿ ಕುದುರೆ ಮೊದಲಾದ ಒಂದೇ ಗೊರಸಿನ,

ಕೊಂಬು ಇರದ ಪ್ರಾಣಿಗಳನ್ನು ಕಿವಿಯನ್ನು ಹಿಡಿದು ದಾನ ಪಡೆಯಬೇಕು. ಕೊಂಬಿರುವ ಪ್ರಾಣಿಗಳಾದರೆ ಕೊಂಬು ಹಿಡಿದು ಸ್ವೀಕರಿಸಬೇಕು.

ಕರ್ಣೇ ಅಶ್ವಸ್ಯ ಕೀರ್ತಿತಃ। ತಥಾ ಚೈಕಶಫಾನಾಂ ತು ಸರ್ವೇಷಾಮ ವಿಶೇಷತಃ। ಶೃಂಗೇ ಕೃಷ್ಣಾಜಿನಂ ತಥಾ ।

ಸಾಮಾನ್ಯೇನ ಏಕಶಫಾನಾಂ ಕರ್ಣೇ ಪ್ರತಿಗ್ರಹ ಉಕ್ತಃ ।

ಯೇ ತು ಏಕಶಫಾಃ ಶೃಂಗಿಣಃ ತಾನ್ ವಿಶೇಷತಃ ಶೃಂಗೇ ಪ್ರತಿಗೃಹ್ಣೀತ ಇತ್ಯರ್ಥಃ। (ವಿ.ಪಾ)

ಅರಣ್ಯದ ಪಶುಗಳನ್ನು ಬಾಲ ಹಿಡಿದು ದಾನಸ್ವೀಕಾರ ಮಾಡಬೇಕು.

ಅರಣ್ಯಪಶವಶ್ಚಾನ್ಯೋ ಪುಚ್ಛೇ ಗ್ರಾಹ್ಯಾ ವಿಚಕ್ಷಣೈಃ (ವಿ.ಪಾ)

ಬೀಜದಾನ– ಒಂದು ಮುಷ್ಟಿ ಬೀಜವನ್ನು ಹಿಡಿದು ಸ್ವೀಕರಿಸುವುದು.

ಬೀಜಾನಾಂ ಮುಷ್ಟಿಮಾದಾಯ (ವಿ.ಪಾ)

ರತ್ನದಾನ– ಎಲ್ಲ ರತ್ನವನ್ನು ಕೈಯಲ್ಲಿ ತುಂಬಿಕೊಂಡು ಸ್ವೀಕಾರ.

ರತ್ನಾನ್ಯಾದಾಯ ಸರ್ವತಃ (ವಿ.ಪಾ)

ವಸ್ತ್ರದಾನ– ಅಂಚಿನ ತುದಿ ಹಿಡಿದು ಸ್ವೀಕರಿಸಬೇಕು ಅಥವಾ ವಸ್ತ್ರವನ್ನು ಹೊದ್ದು ಸ್ವೀಕರಿಸಬೇಕು.

ವಸ್ತ್ರಂ ದಶಾಂತಾರಾದದ್ಯಾತ್ ಪರಿಧಾಯಾಥವಾ ಪುನಃ (ವಿ.ಪಾ)

ಚಪ್ಪಲಿದಾನ– ಚಪ್ಪಲಿಯನ್ನು ಕಾಲಿಗೆ ಹಾಕಿಕೊಂಡು ಸ್ವೀಕರಿಸಬೇಕು.

ವಾಹನದಾನ– ವಾಹನವನ್ನೇರಿ ಸ್ವೀಕರಿಸಬೇಕು.

ಆರುಹ್ಯ ಉಪಾನಹೌ ಯಾನಮಾರುಹ್ಯೈವ ತು ಪಾದುಕೇ (ವಿ.ಪಾ)

ಆಯುಧದಾನ- ಆಯುಧಗಳನ್ನು ಕೈಯಲ್ಲಿ ಹಿಡಿದು ಸ್ವೀಕಾರ.

ಆಯುಧಾನಿ ಸಮಾದಾಯ (ವಿ.ಪಾ)

ಕವಚ, ಧ್ವಜದಾನ- ಸ್ಪರ್ಶಮಾತ್ರದಿಂದ ಸ್ವೀಕಾರ.

ವರ್ಮಧ್ವಜೌ ತಥಾ ಸ್ಪೃಷ್ಟ್ವಾ (ವಿ.ಪಾ)

ಗೃಹದಾನ- ಮನೆಯನ್ನು ಪ್ರವೇಶ ಮಾಡುವುದೇ ಸ್ವೀಕಾರ.

ಪ್ರವಿಶ್ಯ ಚ ತಥಾ ಗೃಹಮ್ (ವಿ.ಪಾ)

ಸರೋವರ ಮುಂತಾದ ಜಲಾಶಯ ದಾನ- ಸರೋವರದಲ್ಲಿ ಇಳಿದು ಸ್ವೀಕಾರ

ಅವತೀರ್ಯ ಚ ಸರ್ವಾಣಿ ಜಲಸ್ಥಾನಾನಿ ವೈ ದ್ವಿಜಾಃ (ವಿ.ಪಾ)

ವೃಕ್ಷದಾನ- ಅದರ ಬುಡಕ್ಕೆ ಕೈಯಿಟ್ಟು ಸ್ವೀಕಾರ

ದ್ರುಮಾಂಶ್ಚ ಪ್ರತಿಗೃಹ್ಣೀಯಾತ್ ಮೂಲೇ ನ್ಯಸ್ತಕರೋ ದ್ವಿಜಃ। (ವಿ.ಪಾ)

ಛತ್ರ, ಚಾಮರದಾನ- ಛತ್ರ, ಚಾಮರ ಅದರ ಬುಡ ಅಂದರೆ ಹಿಡಿಯನ್ನು ಹಿಡಿದು ಸ್ವೀಕಾರ.

ಛತ್ರಂ ಚಾಮರಂ ಮೂಲೇ (ವಿ.ಪಾ)

ಫಲದಾನ- ಫಲವನ್ನು ಗೌರವದಿಂದ ಬೊಗಸೆಯಲ್ಲಿ ಹಿಡಿದು ಸ್ವೀಕಾರ.

ಫಲಂ ಸಂಗೃಹ್ಯ ಗೌರವಾತ್ (ವಿ.ಪಾ)

ಶಯ್ಯಾದಾನ- ಹಾಸಿಗೆಯಲ್ಲಿ ಕುಳಿತು ದಾತೃವಿನಿಂದ ಪೂಜೆಗೊಂಡು ಸ್ವೀಕಾರ.

ಉಳಿದೆಲ್ಲ ದಾನಗಳನ್ನು ಕೈಮಧ್ಯದಲ್ಲಿ ಸ್ವೀಕಾರ ಮಾಡಬೇಕು.

ಅನ್ಯಾನಿ ದಾನಾನಿ ಚ ಹಸ್ತಮಧ್ಯೇ।

ದಾನಸ್ವೀಕಾರದಲ್ಲಿ ಓಂಕಾರ

ಓಂ ಎಂದು ಉಚ್ಚರಿಸಿ ದಾನ ಕೊಡಬೇಕು. ಓಂ ಎಂದು ಉಚ್ಚರಿಸಿ ಸ್ವೀಕರಿಸಬೇಕು.

ಓಂಕಾರೇಣ ದದ್ಯಾತ್ ಪ್ರತಿಗೃಹ್ಣೀಯಾಚ್ಚ ।
ಪ್ರಣವೋ ಜಗತಾಂ ಬೀಜಂ ವೇದಾನಾಮಾದಿರೇವ ಚ ॥
ಏಷ ಏವ ಪರಂ ಬ್ರಹ್ಮ ಪ್ರವಿತ್ರಮಯಮುತ್ತಮಮ್ ।
ತಸ್ಮಾತ್ ಪ್ರಣವಮುಚ್ಚಾರ್ಯ ಕಾರ್ಯೋ ದಾನಪ್ರತಿಗ್ರಹೌ ॥
(ಸ್ಕಂದ ಪುರಾಣ)

ಹಸ್ತಮಧ್ಯದಲ್ಲಿ ದಾನಸ್ವೀಕಾರ

ಎಡಗೈಯನ್ನು ಎದೆಯಲ್ಲಿಟ್ಟು ಬಲ ಅಂಗೈಯ ಮಧ್ಯದಲ್ಲಿ ಸ್ವೀಕರಿಸಬೇಕು. ಬ್ರಾಹ್ಮಣನ ಹಸ್ತಮಧ್ಯದಲ್ಲಿ ಅಗ್ನಿತೀರ್ಥವಿದೆ. ಅಲ್ಲಿ ಸ್ವೀಕರಿಸುವುದರಿಂದ ಪಾಪ ಪರಿಹಾರವಾಗುವುದು.

ಅನ್ಯಾನಿ ದಾನಾನಿ ಚ ಹಸ್ತಮಧ್ಯೇ ।
ವಿಪ್ರಸ್ಯ ದಕ್ಷಿಣೇ ಪಾಣೌ ಮೂಲೇಽಂಗುಷ್ಠಸ್ಯ ನಿತ್ಯದಾ ।
ಸ್ಯಾದ್ ಬ್ರಹ್ಮತೀರ್ಥಂ ಮಧ್ಯೇ ತು
ಆಗ್ನೇಯಮಘನಾಶನಮ್ ॥

ವಿಪ್ರನ ಬಲಹಸ್ತದಲ್ಲಿ, ಹೆಬ್ಬೆರಳ ಬುಡದಲ್ಲಿ, ಬ್ರಹ್ಮತೀರ್ಥ, ಮಧ್ಯದಲ್ಲಿ ಅಗ್ನಿತೀರ್ಥವಿದೆ.

ದಾತೃವಿನ ದ್ವಿರಾಚಮನ

ದಾನ ಕೊಡುವವನು ಎರಡು ಬಾರಿ ಆಚಮನ ಮಾಡಿ ದಾನ ಕೊಡಬೇಕು.

ಭೋಜನೇ ಹವನೇ ದಾನೇ ಉಪಾಹಾರೇ ಪ್ರತಿಗ್ರಹೇ ।
ಹವಿರ್ಭಕ್ಷಣಕಾಲೇ ಚ ದ್ವಿರ್ದ್ವಿರಾಚಮನಂ ಸ್ಮೃತಮ್ ॥

ಊಟದ ಬಳಿಕ, ಯಜ್ಞದಲ್ಲಿ, ದಾನದ ಆರಂಭದಲ್ಲಿ, ಉಪಾಹಾರ ಸ್ವೀಕಾರದ ಬಳಿಕ, ದಾನವನ್ನು ಪಡೆದಾಗ, ಹವಿಸ್ಸನ್ನು ಭಕ್ಷಣ ಮಾಡುವ ಸಮಯದಲ್ಲಿ ಎರಡೆರಡು ಬಾರಿ ಆಚಮನ ಮಾಡಬೇಕು.

ದಾನ ಪಡೆವವನು ಹೀಗಿರಬೇಕು

ದರ್ಭೆಯ ಮೇಲೆ ಕುಳಿತು ಯಜ್ಞೋಪವೀತವುಳ್ಳವನಾಗಿ ದಾನ ಸ್ವೀಕರಿಸಬೇಕು. ಇಲ್ಲದಿದ್ದರೆ ದಾನ ವಿಫಲವಾಗುವುದು.

ಕುಶೋಪರಿ ನಿವಿಷ್ಟೇನ ತಥಾ ಯಜ್ಞೋಪವೀತಿನಾ ।
ದೇಯಂ ಪ್ರತಿಗ್ರಹೀತವ್ಯಂ ಅನ್ಯಥಾ ವಿಫಲಂ ಭವೇತ್। ಕಾತ್ಯಾಯನಃ

ದಾನ ಪಡೆವವನು ಹೇಳಬೇಕಾದ ಮಂತ್ರ :

ಕೋಽದಾತ್ ಕಸ್ಮಾ ಅದಾತ್ ಕಾಮೋಽದಾತ್ ಕಾಮಾಯಾದಾತ್ ।
ಕಾಮೋ ದಾತಾ ಕಾಮಃ ಪ್ರತಿಗ್ರಹೀತಾ ಕಾಮೈತತ್ತೇ ॥

(ಯಜುರ್–ಆ–7–48. ಮ)

ಪ್ರತಿಗ್ರಹದಲ್ಲಿ ಆಸೆಬುರುಕನಾಗಬಾರದು

ದಾನ ಸ್ವೀಕಾರದಲ್ಲಿ ತಾನು ಸಮರ್ಥನಾದರೂ ಅದರಲ್ಲಿ ಅತಿಯಾದ ಆಸೆ–ಆಸಕ್ತಿಗಳನ್ನು ಬೆಳೆಸಿಕೊಳ್ಳಬಾರದು. ದಾನಸ್ವೀಕಾರದಿಂದ ಬ್ರಾಹ್ಮತೇಜಸ್ಸು ನಾಶವಾಗುವುದು.

ಪ್ರತಿಗ್ರಹಸಮರ್ಥೋಽಪಿ ಪ್ರಸಂಗಂ ತತ್ರ ವರ್ಜಯೇತ್ ।
ಪ್ರತಿಗ್ರಹೇಣ ವಿಪ್ರಾಣಾಂ ಬ್ರಾಹ್ಮಂ ತೇಜೋ ವಿನಶ್ಯತಿ ॥

(ಆಗ್ನೇಯಪುರಾಣ)

ದಕ್ಷಿಣೆಯಿಲ್ಲದ ದಾನ ವ್ಯರ್ಥ

ದಕ್ಷಿಣೆಯಿಲ್ಲದ ದಾನ ಹಾಗೂ ವ್ರತಗಳು ಬೂದಿಯಲ್ಲಿ ಮಾಡಿದ ಹೋಮದಂತೆ ವ್ಯರ್ಥವಾಗುವುದು.

ಅದತ್ತದಕ್ಷಿಣಂ ದಾನಂ ವ್ರತಂ ಚೈವ ನೃಪೋತ್ತಮ ।
ವಿಫಲಂ ತದ್ ವಿಜಾನೀಯಾತ್ ಭಸ್ಮನ್ಯೇವ ಹುತಂ ಹವಿಃ ॥
(ಭವಿಷ್ಯತ್ ಪುರಾಣ)

ದಾನಕ್ಕೆ ದಕ್ಷಿಣೆ ಎಷ್ಟು?

ಎಲ್ಲ ದಾನಕ್ಕೂ ಸುವರ್ಣವು ಶ್ರೇಷ್ಠವಾದ ದಕ್ಷಿಣೆ. ಆದ್ದರಿಂದ ಎಲ್ಲ ದಾನದ ಜೊತೆಯಲ್ಲಿ ದಕ್ಷಿಣೆಯಾಗಿ ಬಂಗಾರವನ್ನು ಕೊಡಬೇಕು. ದಾನ ಕೊಡುವ ವಸ್ತುವಿನ ಮೌಲ್ಯದ ಮೂರನೇ ಒಂದು ಭಾಗ ದಕ್ಷಿಣೆ ಕೊಡಬೇಕು.

ಸುವರ್ಣಂ ಪರಮಂ ದಾನಂ ಸುವರ್ಣಂ ದಕ್ಷಿಣಾ ಪರಾ ।
ಸರ್ವೇಷಾಂ ಚೈವ ದಾನಾನಾಂ ಸುವರ್ಣಂ ದಕ್ಷಿಣೋಚ್ಯತೇ ॥
ದೇಯದ್ರವ್ಯತೃತೀಯಾಂಶಂ ದಕ್ಷಿಣಾಂ ಪರಿಕಲ್ಪಯೇತ್ ॥

ಯಾವ ದಾನಕ್ಕೆ ದಕ್ಷಿಣೆಯನ್ನು ನಿರ್ದೇಶಿಸಿಲ್ಲವೋ ಅವುಗಳಿಗೆ ಯಥಾಶಕ್ತಿ ದೇಯವಸ್ತುವಿನ ಮೌಲ್ಯದ ಹತ್ತನೇ ಒಂದಂಶವನ್ನು ದಕ್ಷಿಣೆಯಾಗಿ ಕೊಡಬೇಕು.

– ಭವಿಷ್ಯತ್ ಪುರಾಣ

ಇವುಗಳನ್ನು ನಿತ್ಯ ಕೊಡಬೇಕು

ನಿತ್ಯಂ ದೇಯಾನಿ ರಾಜೇಂದ್ರ ಗಾವಃ ಪೃಥ್ವೀ ಸರಸ್ವತೀ ।
ದಾತಾರಂ ತಾರಯಂತ್ಯೇತೇ ಪಾಠವಾಪನದೋಹನೈಃ ॥

ಇವು ಮೂರು ಅತಿದಾನಗಳು ನಿತ್ಯ ಕೊಡಬೇಕಾದವು. –ಗೋ, ಪೃಥ್ವೀ, ಸರಸ್ವತೀ. ಪಾಠದಿಂದ ವಿದ್ಯಾದಾನ ಮಾಡಿದವನನ್ನು, ಬೆಳೆಯುವುದರಿಂದ

ಭೂದಾನ ಮಾಡಿದವನನ್ನು, ಹಾಲು ಕರೆಯುವುದರಿಂದ ಗೋದಾನ ಮಾಡಿದವನನ್ನು ಇವು ಪಾಪದಿಂದ ತಾರಣ ಮಾಡುತ್ತದೆ. –ಭವಿಷ್ಯತ್ ಪುರಾಣ

ದಾನಯೋಗ್ಯ ದೇಶ

ಹಿಮಾಚಲದಿಂದ ಸಾಗರದ ನಡುವಿನ ಒಂಬತ್ತು ಸಾವಿರ ಯೋಜನ ಪ್ರದೇಶವು ಸತ್ಕರ್ಮಾಚರಣೆಯಿಂದ ಸ್ವರ್ಗಾಪವರ್ಗಗಳನ್ನೀಯುವ ಕರ್ಮಭೂಮಿ. ಅಲ್ಲಿರುವವರು ಭಾರತೀಯರು. ಈ ಪ್ರದೇಶದಲ್ಲಿ ದಾನ ಮಾಡುವುದು ಶ್ರೇಷ್ಠ.

ಸರಸ್ವತಿ ನದಿಯಿಂದ ದೃಷದ್ವತೀನದಿಯವರೆಗಿನ ಪ್ರದೇಶ ದೇವ ನಿರ್ಮಿತವಾದ ಬ್ರಹ್ಮಾವರ್ತ ಎನಿಸುತ್ತದೆ.

ಪೂರ್ವ ಸಮುದ್ರದಿಂದ ದಕ್ಷಿಣ ಸಮುದ್ರದ ವರೆಗಿನ ಪ್ರದೇಶವು ಆರ್ಯಾವರ್ತ ಎನಿಸುತ್ತದೆ.

ಕೃಷ್ಣಸಾರ ಮೃಗವು ಸಹಜವಾಗಿ ಸಂಚರಿಸುವ ಪ್ರದೇಶ ಪವಿತ್ರವಾದ ದೇಶ. ಈ ಪ್ರದೇಶಗಳಲ್ಲಿ ಮಾಡುವ ದಾನವು ಮಹಾ ಪುಣ್ಯಪ್ರದವೂ ಸಂಸಾರಭಯನಾಶಕವೂ ಆಗಿದೆ.

ಗಂಗಾದ್ವಾರ, ಪ್ರಯಾಗ, ಅವಿಮುಕ್ತ ಕ್ಷೇತ್ರವೆನಿಸಿದ ಕಾಶೀ, ಪುಷ್ಕರ, ಗಂಗಾಸಾಗರಸಂಗಮ, ಕುರುಕ್ಷೇತ್ರ, ಗಯಾ, ಬದರೀ, ತಿರುಮಲ, ಉಡುಪಿ, ಶ್ರೀರಂಗ ಮುಂತಾದ ಪುಣ್ಯಕ್ಷೇತ್ರಗಳಲ್ಲಿ, ನದೀತೀರಗಳಲ್ಲಿ ಕೊಟ್ಟ ದಾನ ಅಕ್ಷಯ ಫಲವೀಯುವುದು.

ಎಲ್ಲ ತೀರ್ಥಗಳಲ್ಲಿ ಶ್ರೇಷ್ಠವಾದದ್ದು ಗಂಗೆ. ಅಂತಹ ಗಂಗಾತೀರದಲ್ಲಿ ಕೊಟ್ಟ ದಾನ ಮಹಾಫಲಪ್ರದವು.

ಸರ್ವತೀರ್ಥಮಯೀ ಗಂಗಾ ತತ್ರ ದತ್ತಂ ಮಹಾಫಲಮ್ ।

ಚಾತುರ್ವರ್ಣ್ಯ ವ್ಯವಸ್ಥೆಯಿಲ್ಲದಿರುವ ಪ್ರದೇಶವು ಮ್ಲೇಚ್ಛ ದೇಶವು. ಉಳಿದದ್ದು ಪೂಜ್ಯದೇಶವು. ಮ್ಲೇಚ್ಛದೇಶದಲ್ಲಿ ಕೊಡುವ ದಾನ ಮಹಾಫಲಪ್ರದವಲ್ಲ.

ಚಾತುರ್ವರ್ಣ್ಯವ್ಯವಸ್ಥಾನಂ ಯಸ್ಮಿನ್ ದೇಶೇ ನ ವಿದ್ಯತೇ ।
ಸ ಮ್ಲೇಚ್ಛದೇಶೋ ವಿಜ್ಞೇಯಃ ಆರ್ಯದೇಶಸ್ತತಃ ಪರಃ ॥

ತೀರ್ಥಕ್ಷೇತ್ರಗಳು, ದೇವಾಲಯಗಳು, ಹಟ್ಟಿ (ಕೊಟ್ಟಿಗೆ), ಬಾವಿ, ಪವಿತ್ರ ಉದ್ಯಾನಗಳು, ನದೀ ತೀರಗಳು ಅಥವಾ ಮನೆ, ವನ, ಪವಿತ್ರ ಸರೋವರಗಳೂ ಇಂಥಲ್ಲಿ ಮಹಾದಾನಗಳನ್ನು ಮಾಡಬೇಕು.

ದಾನಯೋಗ್ಯ ಕಾಲ

ಅಯನೇ ವಿಷುವೇ ಚೈವ ಚಂದ್ರ ಸೂರ್ಯಗ್ರಹೇ ತಥಾ ।
ಅಮಾಯಾಂ ಪೂರ್ಣಿಮಾಯಾಂ ಚ ಸಂಕ್ರಾಂತೌ ಹರಿವಾಸರೇ ।
ಯಥಾವಿಧಿ ಪ್ರದಾತವ್ಯಂ ವಿತ್ತಶಾಠ್ಯಂ ವಿನಾ ಜನೈಃ ॥

ಉತ್ತರ- ದಕ್ಷಿಣ ಅಯನಗಳು, ವಿಷುವ, ಚಂದ್ರ-ಸೂರ್ಯಗ್ರಹಣಕಾಲ, ಅಮಾವಾಸ್ಯೆ, ಪೌರ್ಣಮೀ, ಸಂಕ್ರಮಣಕಾಲ, ಹರಿದಿನ (ಏಕಾದಶೀ) ಇಂತಹ ಪುಣ್ಯಕಾಲದಲ್ಲಿ ವಿತ್ತಶಾಠ್ಯ ತೋರದೆ (ಹಣದ ವಂಚನೆ ತೋರದೆ) ವಿಧಿಬದ್ಧವಾದ ರೀತಿಯಲ್ಲಿ ಶ್ರದ್ಧೆಯಿಂದ ದಾನ ಮಾಡಬೇಕು.

ದಾನ ನೀಡುವ ರೀತಿ

ಎರಡು ಬಾರಿ ಆಚಮನ ಮಾಡಿ, ಪ್ರಾಣಾಯಾಮ-ಸಂಕಲ್ಪಗಳನ್ನು ಮಾಡಿ ಅದರ ಕೊನೆಯಲ್ಲಿ **ಅಮುಕ ಪ್ರವರಾನ್ವಿತಂ ಅಮುಕಶರ್ಮಾಣಂ ಭವಂತಂ ಅಮುಕ ದಾನ ಸಂಪ್ರದಾನತ್ವೇನ ವೃಣೇ** ಎಂದು ವಿಪ್ರವರಣ ಮಾಡಬೇಕು. ದಾನ ಪಡೆವವನ ಕೈಯಲ್ಲಿ ಅಡಿಕೆ ಅಥವಾ ನೆಲ್ಲಿಕಾಯಿ ಅಥವಾ ಬಾಳೆಹಣ್ಣುಗಳನ್ನು ಕೊಡಬೇಕು. ನೆಲ್ಲಿಕಾಯಿ ಶ್ರೇಷ್ಠ. ಅದಿಲ್ಲದಿದ್ದರೆ ಬಾಳೆಹಣ್ಣು

ವಿಪ್ರನ ಕೈಯಲ್ಲಿ ಕೊಡಬೇಕು. ದಾನ ಕೊಡುವ ಯಜಮಾನ ಉತ್ತರಕ್ಕೆ ಮುಖ ಮಾಡಿಕೊಂಡಿರಬೇಕು. ದಾನಪಾತ್ರ ವಿಪ್ರನನ್ನು ಪೂರ್ವಾಭಿಮುಖವಾಗಿ ಕೂಡಿಸಿ ಗಂಧ ಪುಷ್ಪ ವಸ್ತ್ರ ಆಭರಣಾದಿಗಳಿಂದ ಪೂಜಿಸಿ ದಾನಕೊಡುವ ವಸ್ತುವನ್ನು ಅಲಂಕರಿಸಿ, ಅಲ್ಲಿರುವ ದೇವತೆಯನ್ನು ಅರ್ಚಿಸಿ, ತನ್ನ ಗೋತ್ರ – ಪ್ರವರಾದಿಗಳನ್ನು ಹೇಳಿಕೊಂಡು ಬ್ರಾಹ್ಮಣಾಂತರ್ಗತ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಲಕ್ಷ್ಮೀನಾರಾಯಣ ಪ್ರೀತಿಂ ಕಾಮಯಮಾನಃ ಇದಂ ಸೋಪಸ್ಕರಂ ಸದಕ್ಷಿಣಾಕಂ ತುಭ್ಯಮಹಂ ಸಂಪ್ರದದೇ। ದತ್ತಂ ನ ಮಮ ನ ಮಮ ಎಂದು ಹೇಳಿಕೊಡಬೇಕು. ಮತ್ತೆ ಆ ವಿಪ್ರನನ್ನು ಮಂಗಳಾರತಿ ಬೆಳಗುವ ಮೂಲಕ ಪೂಜಿಸಿ, ಅವರ ಆಶೀರ್ವಾದವನ್ನು ಪಡೆಯಬೇಕು. ಅನಂತರ 'ಯಸ್ಯ ಸ್ಮೃತ್ಯಾ ಚ' – ಎಂಬ ಮಂತ್ರವನ್ನು ಹೇಳಿ ದಾನಫಲವನ್ನು ಭಗವಂತನಿಗೆ ಅರ್ಪಿಸಬೇಕು.

ಸಾಮಾನ್ಯವಾಗಿ ಸಂಕಲ್ಪ ಮಾಡಿ ದಾನ ಮಾಡುತ್ತೇವೆ. ದಾನ ಕೊಟ್ಟ ಮೇಲೆ ಅದರ ಫಲವನ್ನು ಭಗವಂತನಿಗೆ ಅರ್ಪಿಸುವುದನ್ನು ಮರೆಯುತ್ತೇವೆ. **ಅನೇನ ದಾನೇನ ಶ್ರೀ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀಲಕ್ಷ್ಮೀ ನಾರಾಯಣಃ ಪ್ರೀಯತಾಂ** ಎಂದು ಸಮರ್ಪಿಸಿ **'ಕಾಯೇನ ವಾಚಾ......'** ಮಂತ್ರವನ್ನು ಹೇಳಿ **ಅಚ್ಯುತಾನಂತ ಗೋವಿಂದ** ಎಂಬ ನಾಮಮಂತ್ರವನ್ನು ಪಠಿಸಬೇಕು.

ದಾನ ಮಾಡುವಾಗ ನಯ–ವಿನಯ–ಭಕ್ತಿ, ಶ್ರದ್ಧೆಗಳು ಇರಬೇಕು. ದಾನ ಸ್ವೀಕರಿಸುವ ವಿಪ್ರರ ಬಗ್ಗೆ ಗೌರವ–ಭಕ್ತಿಗಳಿರಬೇಕು. ದಾನ ಕೊಡುವವನೆಂಬ ಅಹಂಕಾರ, ಪ್ರಚಾರದ ಬಯಕೆ, ಯಾರಾದರೂ ತನ್ನನ್ನು ಹೊಗಳಬೇಕೆಂಬ ಆಸೆ, ದಾನ ಪಡೆದ ವಿಪ್ರರಲ್ಲಿ ಅನಾದರಗಳಿದ್ದರೆ ಕೊಟ್ಟ ದಾನ ನಿಷ್ಫಲವಾಗುವುದು.

ದೇಯದ್ರವ್ಯದ ದೇವತೆಗಳು

ದಾನ ಮಾಡುವ ಬೇರೆ ಬೇರೆ ವಸ್ತುಗಳಿಗೆ ಬೇರೆ ಬೇರೆ ದೇವತೆಗಳು ಅಭಿಮಾನಿಗಳಿದ್ದಾರೆ. ಅವರ ಸ್ಮರಣೆ ಮಾಡಬೇಕು. ಅಭಯದಾನ ಶ್ರೇಷ್ಠ.

ಅಭಯಕ್ಕೆ ಸರ್ವದೇವತೆಗಳೂ ಅಭಿಮಾನಿದೇವತೆಗಳು. ಭೂಮಿಗೆ ವಿಷ್ಣು ದೇವತೆ. ಕನ್ಯೆ, ದಾಸ–ದಾಸಿಯರಿಗೆ ಪ್ರಜಾಪತಿ ದೇವತೆ. ಆನೆಗೆ ಪ್ರಜಾಪತಿ, ಕುದುರೆಗೆ ಯಮ, ಒಂದು ಗೊರಸಿನ ಎಲ್ಲ ಪ್ರಾಣಿಗಳಿಗೂ ಯಮನೇ ದೇವತೆ. ಹಾಗೆಯೇ ಎಮ್ಮೆಗೆ ಕೂಡ ಯಮ ದೇವತೆ. ಒಂಟೆಗೆ ನಿರ್ಋತಿ, ಧೇನುವಿಗೆ ರುದ್ರ, ಛಾಗಕ್ಕೆ (ಆಡು) ಅಗ್ನಿ, ಮೇಷಕ್ಕೆ ವರುಣ, ವರಾಹಕ್ಕೆ ವಿಷ್ಣು ದೇವತೆಗಳು. ಎಲ್ಲ ಆರಣ್ಯಕ ಪಶುಗಳಿಗೆ ವಾಯು ದೇವತೆ.

ಜಲಾಶಯಗಳು, ನೀರು ತುಂಬಿದ ಪಾತ್ರೆ, ಕಮಂಡಲು, ಹಿಮ ಇವುಗಳಿಗೆಲ್ಲ ವರುಣ ದೇವತೆ. ಸಮುದ್ರದಲ್ಲಿ ದೊರೆಯುವ ಮುತ್ತು ರತ್ನ ಹವಳಗಳಿಗೆಲ್ಲ ವರುಣ ದೇವತೆ. ಎಲ್ಲ ಲೋಹಗಳಿಗೆ ಪ್ರಜಾಪತಿ ದೇವತೆ. ಸುವರ್ಣಕ್ಕೆ ಅಗ್ನಿ ದೇವತೆ. ಪಕ್ವಾನ್ನಕ್ಕೆ ಪ್ರಜಾಪತಿ ದೇವತೆ. ಸುಗಂಧದ್ರವ್ಯಗಳಿಗೆ ಗಂಧರ್ವ ದೇವತೆಗಳು. ವಸ್ತ್ರಗಳಿಗೆ ಬೃಹಸ್ಪತಿ, ರಸದ್ರವ್ಯಗಳಿಗೆ ಬುಧ, ಪಕ್ಷಿಗಳಿಗೆ ವಾಯು ದೇವತೆಗಳು.

ವಿದ್ಯೆಗೆ ಬ್ರಹ್ಮಾ, ವಿದ್ಯೆಯ ಉಪಕರಣಗಳಾದ ಪುಸ್ತಕಗಳಿಗೆ ಸರಸ್ವತೀ, ಎಲ್ಲ ಬಗೆಯ ಶಿಲ್ಪಗಳಿಗೆ ಪಾತ್ರೆಗಳಿಗೆ ವಿಶ್ವಕರ್ಮನು ದೇವತೆ.

ಎಲ್ಲ ಮರ, ಪುಷ್ಪ, ಶಾಕ, ಫಲಗಳಿಗೆ ವನಸ್ಪತಿಯೆನಿಸುವ ಚಂದ್ರ, ಛತ್ರಿ, ಕೃಷ್ಣಾಜಿನ, ಹಾಸಿಗೆ, ರಥ, ಆಸನ, ಚಪ್ಪಲಿ, ವಾಹನ, ಇವುಗಳಿಗೆ ಆಂಗೀರಸರು ಅಭಿಮಾನಿಗಳು.

ಶೂರರಿಗೆ ಉಪಯೋಗವಾಗುವ ಶಸ್ತ್ರ, ಗುರಾಣಿ, ಧ್ವಜ ಮುಂತಾದ ಯುದ್ಧದ ಉಪಕರಣಗಳಿಗೆ ಇಂದ್ರನು ದೇವತೆ. ಮನೆಗೆ ಸರ್ವದೇವತೆಗಳು ಅಭಿಮಾನಿಗಳು.

ಯಾವುದಕ್ಕೆ ದೇವತೆ ಹೇಳಿಲ್ಲವೋ ಅದಕ್ಕೆ ವಿಷ್ಣುವೇ ದೇವತೆ ಅಥವಾ ಇಲ್ಲಿ ಹೇಳಿರುವ ಹೇಳದಿರುವ ಸಮಸ್ತಕ್ಕೂ ವಿಷ್ಣುವೇ ದೇವತೆ.

– ವಿಷ್ಣುಧರ್ಮೋತ್ತರ ಪುರಾಣ

ವಿವಿಧ ಗೋದಾನಗಳು ಹಾಗೂ ಮಂತ್ರಗಳು

ಋಣಧೇನುದಾನಮಂತ್ರ

ಐಹಿಕಾಮುಷ್ಮಿಕಂ ಯಚ್ಚ ಸಪ್ತಜನ್ಮಾರ್ಜಿತಂ ಋಣಮ್ ।
ತತ್ಸರ್ವಂ ಶುದ್ಧಿಮಾಯಾತು ಗಾಮೇಕಾಂ ದದತೋ ಮಮ ॥

ಮೋಕ್ಷಧೇನು ದಾನಮಂತ್ರ

ಮೋಕ್ಷಂ ದೇಹಿ ಹೃಷೀಕೇಶ ಮೋಕ್ಷಂ ದೇಹಿ ಜನಾರ್ದನ ।
ಮೋಕ್ಷಧೇನುಪ್ರದಾನೇನ ಮುಕುಂದಃ ಪ್ರೀಯತಾಂ ಮಮ ॥

ಪಾಪಧೇನು ದಾನಮಂತ್ರ

ಆಜನ್ಮೋಪಾರ್ಜಿತಂ ಪಾಪಂ ಮನೋವಾಕ್ಕಾಯಕರ್ಮಭಿಃ ।
ತತ್ಸರ್ವಂ ಶುದ್ಧಿಮಾಯಾತು ಗೋಪ್ರದಾನೇನ ಕೇಶವ ॥

ಉತ್ಕ್ರಾಂತಿಧೇನು ದಾನಮಂತ್ರ

ಅದ್ಯ ಪೂರ್ವೋಚ್ಚರಿತ........ ಅಮುಕಸ್ಯ (ಮಮ) ಸುಖೇನ ಪ್ರಾಣೋತ್ಕ್ರಮಣಪ್ರತಿಬಂಧಕ ಸಕಲ ಪಾಪಕ್ಷಯದ್ವಾರಾ ಸುಖೇನ ಪ್ರಾಣೋತ್ಕ್ರಮಣಾಯ ಯಥಾಶಕ್ತಿ ಅಲಂಕೃತಾಮಿಮಾಮ್ ಉತ್ಕ್ರಾಂತಿಸಂಜ್ಞಿತಾಂ ಧೇನುಂ ರುದ್ರದೈವತಾಮ್ ಅಮುಕಶರ್ಮಣೇ ತುಭ್ಯಂ ಸಂಪ್ರದದೇ । ನ ಮಮ ।

ಓಂ ನಮೋ ಗೋಭ್ಯಃ ಶ್ರೀಮತೀಭ್ಯಃ ಸೌರಭೇಯೀಭ್ಯ ಏವ ಚ।
ನಮೋ ಬ್ರಹ್ಮಸುತಾಭ್ಯಶ್ಚ ಪವಿತ್ರಾಭ್ಯೋ ನಮೋ ನಮಃ ॥
ಭವಸಾಗರಮಗ್ನಾನಾಂ ಶೋಕತಾಪೋರ್ಮಿದುಃಖಿನಾಮ್ ।
ತ್ರಾತಾ ತ್ವಂ ಹಿ ಜಗನ್ನಾಥ ಶರಣಾಗತವತ್ಸಲ ॥

ಯಾ ಲಕ್ಷ್ಮೀಸ್ಸರ್ವಭೂತಾನಾಂ ಯಾ ಚ ದೇವೇ ಪ್ರತಿಷ್ಠಿತಾ ।
ಧೇನುರೂಪೇಣ ಸಾ ದೇವೀ ಮಮ ಪಾಪಂ ವ್ಯಪೋಹತು ॥

ಪ್ರತ್ಯಕ್ಷ ಗೋದಾನ ಮಾಡಲಾಗದಿದ್ದವರಿಗೆ ಬೇರೆ ಬೇರೆ ರೀತಿಯ ಗೋದಾನದ ಕ್ರಮಗಳನ್ನು ವರಾಹಪುರಾಣದಲ್ಲಿ (101 ನೇ ಅಧ್ಯಾಯದಿಂದ 112ನೇ ಅಧ್ಯಾಯದ ವರೆಗೆ) ಹೇಳಿರುತ್ತಾರೆ. ಅದು ಹೀಗಿದೆ–

ಜಲಧೇನುದಾನ

ಹಸು ಮಲಗುವಷ್ಟು ಸ್ಥಳವನ್ನು ಗೋಮಯದಿಂದ ಸಾರಿಸಿ, ಸುತ್ತಲೂ ನವಧಾನ್ಯಗಳಿಂದ ಅಲಂಕರಿಸಬೇಕು. ಮಧ್ಯದಲ್ಲಿ ಒಂದು ದೊಡ್ಡ ಕಲಶದಲ್ಲಿ ಶುದ್ಧ ಜಲವನ್ನು ತುಂಬಿಡಬೇಕು. ಇದನ್ನು ಹಸು ಎಂದು ಭಾವಿಸಬೇಕು. ಮತ್ತೊಂದು ಚಿಕ್ಕಕಳಸದಲ್ಲಿ ಶುದ್ಧ ಜಲವನ್ನು ತುಂಬಿಡಬೇಕು. ಇದನ್ನು ಕರು ಎಂದು ಚಿಂತಿಸಬೇಕು. ಕಲಶಗಳನ್ನು ಗರಿಕೆ, ಹೂವುಗಳಿಂದ ಅಲಂಕರಿಸಬೇಕು. ಬೆಟ್ಟದ ನೆಲ್ಲಿಕಾಯಿಗಳನ್ನು ಸುತ್ತಲೂ ಅಲಂಕಾರವಾಗಿ ಇಡಬೇಕು. ಬಿಳಿಸಾಸಿವೆಗಳನ್ನೂ ಸುತ್ತಲೂ ಅಲಂಕರಿಸಬೇಕು. ಪೂರ್ವದಲ್ಲಿ ಮೊಸರು, ಪಶ್ಚಿಮದಲ್ಲಿ ಸಕ್ಕರೆ, ಉತ್ತರದಲ್ಲಿ ತುಪ್ಪ, ದಕ್ಷಿಣದಲ್ಲಿ ಜೇನುತುಪ್ಪಗಳನ್ನು ಇಡಬೇಕು. ಎರಡು ಕಳಸಗಳಲ್ಲಿ ಕ್ರಮವಾಗಿ ಹಸು ಹಾಗೂ ಕರುಗಳನ್ನು ಆಹ್ವಾನಿಸಬೇಕು. ಗೋ ಅಂತರ್ಗತ ಗೋಪಾಲಕೃಷ್ಣನನ್ನು ಮಂತ್ರಪುರಸ್ಸರವಾಗಿ ಆಹ್ವಾನಿಸಿ ಷೋಡಶೋಪಚಾರ ಪೂಜೆ ಮಾಡಬೇಕು. ದಾನ ಸ್ವೀಕಾರ ಮಾಡುವ ಬ್ರಾಹ್ಮಣನನ್ನು ಪೂಜಿಸಿ ಯಾವ ಉದ್ದೇಶಕ್ಕಾಗಿ ಗೋದಾನ ಮಾಡುತ್ತೇವೆಂದು ಅದನ್ನು ಸಂಕಲ್ಪದಲ್ಲಿ ಹೇಳಿ ದರ್ಭೆ, ನೀರು, ತುಲಸೀದಳ, ದಕ್ಷಿಣೆಗಳಿಂದೊಡಗೂಡಿ ಬ್ರಾಹ್ಮಣನ ಕೈಗೆ ಕೊಟ್ಟು ಆವಾಹಿತ ಗೋ, ವತ್ಸ ಕಳಸಗಳನ್ನು ದಾನ ಕೊಟ್ಟು ಕೃಷ್ಣಾರ್ಪಣ ಹೇಳಿ ನಮಿಸಿ ಆಶೀರ್ವಾದ ಪಡೆಯಬೇಕು.

ದಾನ ಕೊಡುವ ಕರ್ತೃ ಒಂದು ದಿನ ಉಪವಾಸವಿದ್ದು, ಗೋ ಇರುವ ಕಡೆಗೆ ಹೋಗಿ ಗೋಗ್ರಾಸ ಕೊಟ್ಟು ಬ್ರಾಹ್ಮಣದಂಪತಿಗಳಿಗೆ ಭೋಜನ ಮಾಡಿಸಬೇಕು. ದಾನ ಪಡೆದವನು 3 ರಾತ್ರಿ ಜಲಪಾನ ಮಾಡಬೇಕು.

2. ರಸಧೇನುದಾನ–

ವರಾಹಪುರಾಣದಲ್ಲಿ ತಿಳಿಸಿದಂತೆ ಗೋಮಯದಿಂದ ಸಾರಿಸಿ ರಂಗವಲ್ಲಿಯಿಂದ ಅಲಂಕರಿಸಿದ ನೆಲದಲ್ಲಿ ಹಿಂದೆ ತಿಳಿಸಿದಂತೆ ದೊಡ್ಡ ಹಾಗೂ ಚಿಕ್ಕ ಕಳಸಗಳಲ್ಲಿ ಕಬ್ಬಿನ ರಸವನ್ನು ತುಂಬಿಡಬೇಕು. ನಾಲ್ಕು ದಿಕ್ಕಿನಲ್ಲಿ ಪಾತ್ರೆಗಳಲ್ಲಿ ಕರಿ ಎಳ್ಳನ್ನು ತುಂಬಿಡಬೇಕು. ಹಾಗೆ ನಾಲ್ಕು ದೀಪಗಳನ್ನು ಹಚ್ಚಿಡಬೇಕು. ಗೋ ಅಂತರ್ಗತ ಗೋಪಾಲಕೃಷ್ಣನನ್ನು ಆವಾಹಿಸಿ ಷೋಡಶೋಪಚಾರ ಪೂಜೆ ಸಲ್ಲಿಸಿ ದಾನ ಪಡೆವ ವಿಪ್ರನನ್ನು ಅರ್ಚಿಸಿ ದಾನ ಮಾಡಬೇಕು. ಗೋಗ್ರಾಸವಿತ್ತು ದಂಪತಿಭೋಜನ ಮಾಡಿಸಬೇಕು.

ದಾನ ಕೊಟ್ಟವರು ಹಾಗು ಪಡೆದವರು ಒಂದು ಹೊತ್ತು ಉಪವಾಸವಿರಬೇಕು.

3. ಗುಡಧೇನುದಾನ

ಮೇಲೆ ತಿಳಿಸಿದಂತೆ ಸಾರಿಸಿದ ನೆಲದಲ್ಲಿ ಬೆಲ್ಲಗಳನ್ನು ಹಸು–ಕರುಗಳ ಆಕಾರದಲ್ಲಿ ಜೋಡಿಸಿಟ್ಟು ಆವಾಹಿಸಿ ಪೂಜಿಸಿ ಬ್ರಾಹ್ಮಣನನ್ನು ಗೌರವಿಸಿ ದಾನ ಮಾಡಬೇಕು. ಗೋಗ್ರಾಸ ವಿಪ್ರಭೋಜನಗಳಾಗಬೇಕು.

ದಾನಮಂತ್ರ–

ಗುಡಧೇನೋ ಮಹಾವೀರ್ಯೆ ಸರ್ವಸಂಪತ್ಪ್ರದೇ ಶುಭೇ ।
ದಾನಾದಸ್ಮಾಚ್ಚ ಭೋ ದೇವಿ ಭಕ್ಷ್ಯ ಭೋಜ್ಯಂ ಪ್ರಯಚ್ಛ ಮೇ ॥
ವಾಚಾ ಕೃತಂ ಕರ್ಮಕೃತಂ ಮನಸಾ ಯದ್ವಿಚಿಂತಿತಮ್ ।
ಮಾನಕೂಟಂ ತುಲಾಕೂಟಂ ಕನ್ಯಾ ಗೋ ಅರ್ಥೇ ಉದಾಹೃತಮ್ ।
ಅನೃತಂ ನಾಶಮಾಯಾತು ಗುಡಧೇನೋ ದ್ವಿಜಾರ್ಪಿತೇ ॥

4. ಶರ್ಕರಾಗೋದಾನ–

ಹಿಂದೆ ತಿಳಿಸಿದಂತೆ ದೊಡ್ಡ ಹಾಗೂ ಚಿಕ್ಕ ಕಲಶಗಳಲ್ಲಿ ಸಕ್ಕರೆ ತುಂಬಿ ಆವಾಹನಾದಿ ಷೋಡಶೋಪಚಾರ ಪೂಜಾಪೂರ್ವಕ ದಾನ ಮಾಡಿ ಗೋಗ್ರಾಸ, ಬ್ರಾಹ್ಮಣ ಭೋಜನಗಳನ್ನು ನೆರವೇರಿಸುವುದು.

5. ಮಧುಗೋದಾನ–

ಎರಡು ಕಲಶಗಳಲ್ಲಿ ಜೇನುತುಪ್ಪ ತುಂಬಿ 4 ದಿಕ್ಕುಗಳಲ್ಲಿ 4 ದೀಪ ಹಚ್ಚಿ ಪೂಜೆ ಮಾಡಿ ದಾನ ಮಾಡುವುದು.

ದಾನಮಂತ್ರ–ರಸಜ್ಞಾ ಸರ್ವದೇವಾನಾಂ ಸರ್ವಭೂತಹಿತೇ ರತಾ।
ಪ್ರೀಯಂತಾಂ ಪಿತರೋ ದೇವಾ ಮಧುಧೇನೋ ನಮೋऽಸ್ತು ತೇ ॥

6. ಕ್ಷೀರಗೋದಾನ–

ಎರಡು ಕಂಚಿನ ಕಲಶಗಳಲ್ಲಿ ಹಾಲು ತುಂಬಿ ಪೂಜಿಸಿ ದಾನ ಮಾಡುವುದು.

7. ದಧಿಧೇನುದಾನ–

ತಂಬಿಗೆಗಳಲ್ಲಿ ಮೊಸರು ತುಂಬಿ ದಾನ ಮಾಡುವುದು.

8. ನವನೀತಗೋದಾನ–

ಕಂಚಿನ ತಟ್ಟೆಯಲ್ಲಿ ಬೆಣ್ಣೆಯನ್ನು ಹರಡಿ, ಗೋವಿನ ಚಿತ್ರವನ್ನು ಬರೆದು ಆವಾಹಿಸಿ ಪೂಜಿಸಿ ದಾನ ಮಾಡುವುದು.

ದಾನಮಂತ್ರ– ಪುರಾ ದೇವಾಸುರಾಸ್ಸರ್ವೇ ಸಾಗರಸ್ಯ ತು ಮಂಥನೇ ।
ಉತ್ಪನ್ನಂ ದಿವ್ಯಮಮೃತಂ ನವನೀತಮಿದಂ ಶುಭಮ್ ।
ಆಪ್ಯಾಯಂತು ಭೂತಾನಾಂ ನವನೀತ ನಮೋऽಸ್ತು ತೇ ॥

9. ಲವಣಧೇನು ದಾನ–

ತಟ್ಟೆಯಲ್ಲಿ ಉಪ್ಪನ್ನು ಹರಡಿ, ಅದರಲ್ಲಿ ಗೋವಿನ ಚಿತ್ರವನ್ನು ಬರೆದು 4 ದಿಕ್ಕುಗಳಲ್ಲಿ ಬೆಲ್ಲವನ್ನು ಇಟ್ಟು ದೀಪವನ್ನು ಹಚ್ಚಿ ಪೂಜೆ ಮಾಡಿ ದಾನ ಮಾಡುವುದು.

ಮಂತ್ರ – ಇಮಾಂ ಗೃಹಾಣ ಭೋ ವಿಪ್ರ ರುದ್ರರೂಪಾಂ ನಮೋಽಸ್ತು ತೇ।
ರಸಜ್ಞಾ ಸರ್ವಭೂತಾನಾಂ ಸರ್ವದೇವನಮಸ್ಕೃತಾ ।
ಕಾಮಂ ಪೂರಯ ಮೇ ದೇವಿ ರುದ್ರರೂಪೇ ನಮೋಽಸ್ತು ತೇ ॥

10. ಕಾರ್ಪಾಸ (ಹತ್ತಿ) ಧೇನು ದಾನ–

ಬಿಡಿಸಿದ ಹತ್ತಿಯನ್ನು ಗೋವಿನ ಆಕಾರದಲ್ಲಿ ಹರಡಿ ಗೋಬ್ರಾಹ್ಮಣ ಪೂಜಾ ಪೂರ್ವಕ ದಾನ ಮಾಡುವುದು.

ಮಂತ್ರ– ಯಥಾ ದೇವಗಣಃ ಸರ್ವಸ್ತ್ವಯಾ ಹೀನೋ ನ ವರ್ತತೇ।
ತಥಾ ಉದ್ಧರ ಮಾಂ ದೇವಿ ಪಾಹಿ ಸಂಸಾರಸಾಗರಾತ್ ॥

11. ಭತ್ತದ ಗೋದಾನ–

ಬಾಳೆ ಎಲೆಯ ಮೇಲೆ ಸುಮಾರು 5 ಸೇರು ಭತ್ತವನ್ನು ಗೋವಿನ ಆಕಾರದಲ್ಲಿ ಹರಡಿ ಸುತ್ತಲೂ ನವಧಾನ್ಯಗಳಿಂದ ಅಲಂಕರಿಸಿ ಪೂಜೆ ಮಾಡಿ ದಾನ ಮಾಡುವುದು.

ಮಂತ್ರ – ತ್ವಂ ಹಿ ವಿಪ್ರ ಮಹಾಭಾಗ ವೇದವೇದಾಂಗಪಾರಗ ।
ಮಯಾ ದತ್ತಂ ಚ ಗೃಹ್ಣೀಷ್ವ ಪ್ರಸೀದ ತ್ವಂ ದ್ವಿಜೋತ್ತಮ ।
ಪ್ರೀಯತಾಂ ಮಮ ದೇವೇಶೋ ಭಗವಾನ್ಮಧುಸೂದನಃ ॥
ಯಾ ಚ ಲಕ್ಷ್ಮೀಸ್ತು ಗೋವಿಂದೇ ಸ್ವಾಹಾ ಯಾ ಚ ವಿಭಾವಸೌ ।
ಶಕ್ರೇ ಶಚೀತಿ ವಿಖ್ಯಾತಾ ಶಿವೇ ಗೌರೀತಿ ಸುಸ್ಥಿತಾ ॥
ಗಾಯತ್ರೀ ಬ್ರಹ್ಮಣಃ ಪ್ರೋಕ್ತಾ ಜ್ಯೋತ್ಸ್ನಾ ಚಂದ್ರೇ ರವೇಃ ಪ್ರಭಾ ।
ಬುದ್ಧಿರ್ಬೃಹಸ್ಪತೇಃ ಖ್ಯಾತಾ ಮೇಧಾ ಮುನಿಷು ಸತ್ತಮಾ ॥
ತಸ್ಮಾತ್ಸರ್ವಮಯೀ ದೇವೀ ಧಾನ್ಯರೂಪೇಣ ಸಂಸ್ಥಿತಾ ॥

12. ಕಪಿಲ ಗೋದಾನ–

ಎಲ್ಲ ಗೋದಾನಗಳಿಗಿಂತ ಉತ್ತಮವಾದುದು ಇದು.

ಮಂತ್ರ– ಯಜ್ಞಸಾಧನಭೂತಾ ಯಾ ವಿಶ್ವಸ್ಯಾಘವಿನಾಶಿನೀ ।
ವಿಶ್ವರೂಪಧರೋ ದೇವಃ ಪ್ರೀಯತಾಮನಯಾ ಗವಾ ॥

13. ಉಭಯಮುಖಿಗೋದಾನ–

ಅರ್ಭಕರು ಹೊರಬಂದಿರುವ ಪ್ರಸವದ ಸ್ಥಿತಿಯ ಗೋವಿನ ದಾನ. ಈ ದಾನ ಬ್ರಹ್ಮಾಂಡದಾನಕ್ಕೆ ಸಮ. ಈ ಗೋದಾನದ ಅವಕಾಶ ದೊರೆಯುವುದು ಬಹಳ ಅಪರೂಪ.

ಪುತ್ರೋತ್ಸವ ಮುಂತಾದ ಎಲ್ಲ ಸಂತಸದ ಸಂದರ್ಭದಲ್ಲಿಯೂ ಗೋದಾನವನ್ನು ಮಾಡಬಹುದಾಗಿದೆ.

ಮಧ್ವವಿಜಯದಲ್ಲಿ ದಾನದ ಬಗ್ಗೆ

ನ ವಾ ಉ ದೇವಾಃ ಕ್ಷುಧಮಿದ್ ವಧಂ
ದದುರುತಾಶಿತಮುಪ ಗಚ್ಛಂತಿ ಮೃತ್ಯವಃ ।
ಉತೋ ರಯಿಃ ಪೃಣತೋ ನೋಪದಸ್ಯತ್ಯು
ತಾಪೃಣನ್ ಮರ್ಡಿತಾರಂ ನ ವಿಂದತೇ ॥ (ಋ. 10–117–10)

ದೇವತೆಗಳು ಹಸಿವೆಯನ್ನು ಮಾತ್ರ ಕೊಟ್ಟಿದ್ದಲ್ಲ. ಅದರ ನೆಪದಿಂದ ಸಂಹಾರವನ್ನೇ ಉಂಟು ಮಾಡಿದರು. ತಿಂದವನನ್ನೂ ಮೃತ್ಯು ಸಮೀಪಿಸುತ್ತದೆ. ಅನ್ನ ದಾನ ಮಾಡದವನು ರಕ್ಷಕನಾದ ಭಗವಂತನನ್ನು ಹೊಂದುವುದಿಲ್ಲ.

ಸಇದ್ ಭೋಜೋ ಯೋ ಗೃಹವೇ ದದಾತ್ಯನ್ನಕಾಮಾಯ ಚರತೇ ಕೃಶಾಯ।
ಅರಮಸ್ಮೈ ಭವತಿ ಯಾಮಹೂತಾ ಉತಾಪರೀಷು ಕೃಣುತೇ ಸಖಾಯಮ್॥

(ಋ 10–117–3)

ಯಾರು ಅನ್ನ ಬಯಸಿ ಮನೆಗೆ ಬಂದ ಪ್ರತಿಗ್ರಹಯೋಗ್ಯನಾದ ದರಿದ್ರನಿಗೆ ಅನ್ನವನ್ನು ಕೊಡುವನೋ ಅವನೇ ಇಹ-ಪರಗಳಲ್ಲಿ ಸುಖದ ಭೋಕ್ತಾರನಾಗುತ್ತಾನೆ. ಅನ್ನದಾನ ಮಾಡಿದವನಿಗೆ ದಾನ ಸಾರ್ಥಕವಾಗುತ್ತದೆ. ಶತ್ರುಗಳೂ ಕೂಡ ಅವನ ಸಖ್ಯವನ್ನು ಬಯಸುತ್ತಾರೆ.

ಶ್ರೀಮಧ್ವಾಚಾರ್ಯರು ಪಯಸ್ವಿನೀ ನದೀತೀರದ 'ಬೈಲಂಗಡಿ' ಗ್ರಾಮದಲ್ಲಿರುವ ವಿಷ್ಣುಮಂದಿರಕ್ಕೆ ಹೋದಾಗ ಕೇರಳದೇಶದ ವೇದ-ಶಾಸ್ತ್ರ ಚತುರರಾದ 63 ಗ್ರಾಮಗಳ ಜನರು ಬೇರೆ ದೇಶದ ವಿದ್ವಾಂಸನನ್ನು ಮುಂದಿಟ್ಟುಕೊಂಡು ಶ್ರೀಮಧ್ವಾಚಾರ್ಯರೊಂದಿಗೆ ವೇದಾರ್ಥ ಚರ್ಚೆ ಮಾಡಿದರು. ಸತ್ಪಾತ್ರನಿಗೆ ದಾನ ಕೊಟ್ಟವನ ಪ್ರಶಂಸೆ, ದಾನ ಕೊಡದವನ ನಿಂದೆಗಳನ್ನು ತಿಳಿಸುವ ಮೇಲಿನ ವೇದಮಂತ್ರದ 'ಪೃಣ' ಧಾತುವಿನ ಮೂಲವನ್ನು ಕೇಳಿದರು. ನೆರೆದ ವಿದ್ವಾಂಸರು ಅಪೃಣತ್ ಧಾತುವಿನ ಮೂಲ 'ಪ್ರೀ' ಎಂದು ಹೇಳಿ ಹಾಸ್ಯಾಸ್ಪದರಾದರು. ಈ ವೇದಮಂತ್ರ ಋಗ್ವೇದದ 10ನೇ ಮಂಡಲದ 117ನೇ ಶ್ಲೋಕದ 1 ಹಾಗೂ 3ನೇ ಮಂತ್ರ.

* * * * *

ಕನ್ಯಾದಾನ

ಸಂ. 'ವಿವಾಹ' – ಡಾ|| ಎಚ್. ಸತ್ಯನಾರಾಯಣಾಚಾರ್ಯ

ಕನ್ಯಾದಾನ ಮಹಾದಾನ. ಇದಕ್ಕೆ ತ್ರಿಗುಣೀಕೃತ ಅಗ್ನಿಷ್ಟೋಮದ ಫಲ. ಮೂರುಪಟ್ಟು ದಕ್ಷಿಣೆ ಹಾಗೂ ವೈಭವದಿಂದೊಡಗೂಡಿದ ವಾಜಪೇಯದ ಫಲ. ದೇಹಾವಸಾನದಲ್ಲಿ ಶಾಶ್ವತ ಬ್ರಹ್ಮಲೋಕದ ಫಲ. ಉಭಯಕುಲಪಿತೃ ಪ್ರೀತಿಯೂ ಫಲ. ಉಚ್ಚರಿಸಿ ನಿರೂಪಿಸಲು ಸಾಧ್ಯವಾಗದಷ್ಟು ದೊಡ್ಡ ಫಲ ಇದಕ್ಕಿದೆ. ಈ ಎಲ್ಲಾ ಕನ್ಯಾದಾನ ಕಲ್ಪೋಕ್ತಫಲಪ್ರಾಪ್ತಿಗಾಗಿ ಬ್ರಾಹ್ಮವಿವಾಹದಿಂದ ಯಥಾಶಕ್ತ್ಯಲಂಕೃತಳಾದ ಈ ಕನ್ಯೆಯನ್ನು ಶ್ರೀಧರರೂಪಿವರನಿಗೆ ದಾನವೀಯುತ್ತೇನೆ ಎಂದು ತಂದೆ ಸಂಕಲ್ಪಿಸುತ್ತಾನೆ. ತಾಯಿ ಸಮ್ಮತಿಯನ್ನು ಸೂಚಿಸುತ್ತಾ ಸಹಧರ್ಮಿಣಿಯಾಗಿ ನೀರು ಸುರಿಯುತ್ತಾಳೆ.

ತಂದೆ ಕನ್ಯೆಯ ಕೈಯಲ್ಲಿ ಬಂಗಾರವನ್ನಿಟ್ಟು ಆಕೆಯನ್ನು ಭುಜದಲ್ಲಿ ಹಿಡಿದು 'ಬ್ರಾಹ್ಮೇಣ ವಿವಾಹೇನ ಇಮಾಂ ಕನ್ಯಾಂ ಪ್ರದಾಸ್ಯಾಮಿ' ಇದಕ್ಕೆ ಸರ್ವದೇವತೆಗಳು ಸಾಕ್ಷಿ. ಸಾಕ್ಷಾದ್ ವಿಶ್ವಂಭರನೇ ಸಾಕ್ಷಿ ಎನ್ನುತ್ತಾನೆ.

ಬಂಗಾರವುಳ್ಳ ಕನ್ಯೆಯ ಬೊಗಸೆಯ ಮೇಲೆ ವರನ ಅಂಜಲಿಯನ್ನಿಟ್ಟು ವರನ ಕೈಯಲ್ಲಿ ಫಲ–ದಕ್ಷಿಣೆಗಳನ್ನಿಟ್ಟು ತನ್ನ ಪತ್ನಿ ಗಿಂಡಿಯಿಂದ ಸುರಿದ ಜಲಧಾರೆಯ ಮೂಲಕ ದಾನವೀಯುತ್ತಾನೆ.

ಗಂಡು ಮೇಲೆ; ಹೆಣ್ಣು ಕೆಳಗೆ

'ಜಗಳವಿಲ್ಲದಿದ್ದರೆ ಮದುವೆಯೇ ಅಲ್ಲ' ಎಂಬಷ್ಟೂ ಸಾಮಾನ್ಯವಾದದ್ದು ವಿವಾಹದಲ್ಲಿ ಜಗಳ. ಇದು ಪ್ರೀತಿಯ ಗಲಾಟೆ. ಅದರಲ್ಲೊಂದು ವಿವಾದ ಇದು. ಕನ್ಯಾದಾನ ಕೊಡುವಾಗ ವರನ ಕೈ ಮೇಲೋ? ವಧುವಿನ ಕೈ ಮೇಲೋ?

ನಾವು ಗಂಡಿನ ಕಡೆಯವರು. ಗಂಡು ಎಂದಿದ್ದರೂ ಮೇಲೆಯೇ. ವರನ ಕೈ ಕೆಳಗಿಡುವುದೆಂದರೇನು? ಸಾಧ್ಯವಿಲ್ಲ; ವರನ ಕೈ ಮೇಲಿರಬೇಕು.

ಅಲ್ಲ ಸ್ವಾಮಿ, ಸ್ವಲ್ಪ ಯೋಚಿಸಿ; ವಧುವನ್ನು ವರನಿಗೆ ದಾನವೀಯುವುದಲ್ಲವೇ? ದೇಯವಸ್ತು ಮೇಲಿರಬೇಕು. ಪ್ರತಿಗೃಹೀತೃವಿನ ಕೈ ಕೆಳಗೆ. ತೆಗೆದುಕೊಳ್ಳುವವ ಚಿಕ್ಕವನಾಗಲೇ ಬೇಕು. ಬಲಿಯ ಮುಂದೆ ದೇವನೂ ವಾಮನನಾಗಲಿಲ್ಲವೇ? ವರಾಂಜಲಿಯನ್ನು ಮೇಲಿಟ್ಟು ಕನ್ಯಾಪಿತೃ ನೀರು ಹಾಕಿದರೆ ಅಸಂಬಂದ್ಧವಲ್ಲವೇ? ವರನನ್ನು ಕನ್ಯೆಗೆ ದಾನ ಕೊಡುವುದೇನು? ಅಬದ್ಧ !!

ಈ ರೀತಿಯ ತರ್ಕಗಳಿಗೆ ಕೊನೆಯಿಲ್ಲ. ಕನ್ಯೆಯ ಬೊಗಸೆ ಕೈಯ ಮೇಲೆ ವರನ ಕೈಯನ್ನು ಇಡಬೇಕು ಎಂಬುದೇ ಸರಿಯಾದ ವಿಧಿ.

ದಾನದ ಕ್ರಮವನ್ನು ನಿರೂಪಿಸುವ ಸ್ಮೃತಿ ಭೂ, ಶಯ್ಯಾ ಮೊದಲಾದ ದಾನಗಳ ವಿಧಿ ನಿರೂಪಿಸಿ, 'ಅನ್ಯಾನಿ ದಾನಾನಿ ಚ ಹಸ್ತಮಧ್ಯೇ' ಎಂದಿದೆ. ಉಳಿದ ದಾನಗಳು ಹಸ್ತಮಧ್ಯದಲ್ಲಿ ನೀಡತಕ್ಕವುಗಳು. ಆದರೆ ಗೋ ಭೂ–ಶಯ್ಯಾದಾನಾದಿಗಳು ಹಾಗಲ್ಲ. ಭೂಮಿಯನ್ನು ಎತ್ತಿ ಅವನ ಕೈಯಲ್ಲಿ ಇಡುವುದು ಶಕ್ಯವೇ ?

ಭೂಮಿಯಲ್ಲಿ ವಿಪ್ರನನ್ನು ಕುಳ್ಳಿರಿಸಿ ಪೂಜಿಸಿ ದಾನವೀಯಬೇಕು. ಶಯ್ಯೆಯಲ್ಲೂ ಹಾಗೇ. ಇಲ್ಲಿ ದೇಯವಾದ ಭೂಮಿ ಶಯ್ಯೆಗಳು ಕೆಳಗೆ, ಪ್ರತಿಗೃಹೀತೃ ವಿಪ್ರನು ಮೇಲೆ. ಭೂದಾನ, ಶಯ್ಯಾದಾನದಂತೆಯೇ ಕನ್ಯಾದಾನ. ಕನ್ಯೆ ಭೂಮಿಯಂತೆ ಧಾರಕಳು. ಶಯ್ಯೆಯಂತೆ ವಿಶ್ರಾಂತಿ, ನೆಮ್ಮದಿ ನೀಡುವವಳು. ಈಕೆಯ ದಾನದಲ್ಲೂ ಇವಳು ಕೆಳಗೆ. ಸ್ವೀಕರ್ತೃ ಮೇಲೆ, ಹಾಗಾಗಿಯೇ ಪ್ರಯೋಗಗಳಲ್ಲಿ ಈ ಮಾತಿದೆ– 'ಕನ್ಯಾಂಜಲ್ಯುಪರಿ ವರಾಂಜಲಿಂ ನಿಧಾಯ'.

* * * * *

ತುಲಾಪುರುಷದಾನವಿಧಿ

ಯಜಮಾನನು ಸ್ನಾನ ಮಾಡಿ ನಿತ್ಯಾಹ್ನಿಕ ಮುಗಿಸಿ. ಆಚಮನ ಮಾಡಿ. ಪವಿತ್ರಪಾಣಿಯಾಗಿ, ಪ್ರಾಣಾಯಾಮ ಮಾಡಿ, ಶ್ರೀಹರಿವಾಯು ಸ್ಮರಣಪೂರ್ವಕವಾಗಿ ಸಂಕಲ್ಪ ಮಾಡಬೇಕು-

ಶ್ರೀ ಭಾರತೀರಮಣ ಮುಖ್ಯಪ್ರಾಣಾಂತರ್ಗತ- ಶ್ರೀವಿಷ್ಣು ಪ್ರೇರಣಯಾ ಶ್ರೀ ವಿಷ್ಣು ಪ್ರೀತ್ಯರ್ಥಂ ಸಕಲಶ್ರುತಿ ಪುರಾಣೋಕ್ತಫಲಪ್ರಾಪ್ತ್ಯರ್ಥಂ ಮಮ ಇಹ ಜನ್ಮನಿ ಜನ್ಮಾಂತರೇ ಚ ಕೃತ ವಿಷ್ಣುಪ್ರಸಾದಪ್ರತಿಬಂಧಕ- ನಾನಾವಿಧಜ್ಞಾತಾಜ್ಞಾತ- ದುರಿತನಾಶಪೂರ್ವಕ ಬ್ರಹ್ಮಹತ್ಯಾದಿ ಸಮಸ್ತಪಾಪಕ್ಷಯದ್ವಾರಾ ಶ್ರೀವಿಷ್ಣುಪ್ರೀತಿಹೇತುಭೂತಜ್ಞಾನ ಭಕ್ತಿವೈರಾಗ್ಯಾಭೀಷ್ಟ ಸಿದ್ಧ್ಯರ್ಥಂ ಸುವರ್ಣರಜತರತ್ನ- ತಾಮ್ರಧಾನ್ಯಾದಿನಾ ತುಲಾಪುರುಷ ಮಹಾದಾನಂ ಬ್ರಾಹ್ಮಣದ್ವಾರಾ ಕಾರಯಿಷ್ಯೇ ।

ತತ್ರಾದೌ ಗಣಪತಿ- ವರುಣಪೂಜನಂ, ಸ್ವಸ್ತಿಪುಣ್ಯಾಹವಾಚನಂ, ಮಾತೃಕಾಪೂಜನಂ, ನಾಂದೀಶ್ರಾದ್ಧಮ್ ಆಚಾರ್ಯಾದಿಋತ್ವಿಗ್ವರಣಂ ಚ ಕರಿಷ್ಯೇ। ಆಚಾರ್ಯಃ ಋತ್ವಿಜಾದೀನ್ ವೃತ್ವಾ ಯಥಾವಿಧಿ ವಸ್ತ್ರಾಲಂಕಾರಾದಿಭಿಃ ಮಧುಪರ್ಕವಿಧಿನಾ ಪೂಜಯೇತ್ ।

ತತಃ ಆಚಾರ್ಯಃ ಯಾಗಮಂಟಪೇ ಸರ್ಷಪವಿಕಿರಣ ಪಂಚಗವ್ಯಪ್ರೋಕ್ಷಣ- ಪ್ರಾದೇಶಕರಣಾಂತಂ ಕೃತ್ವಾ, ಕದಲೀಸ್ತಂಭ-ಕೇರದಲ- ಆಮ್ರಪಲ್ಲವತೋರಣ- ಪುಷ್ಪಮಾಲಾದಿನಾ ಮಂಟಪಂ ಭೂಷಯೇತ್ ।

ಮಧ್ಯೇ ವೇದ್ಯಾದೌ ವಾರುಣಮಂಡಲಂ ವಿಲಿಖ್ಯ ತತ್ರ ದಕ್ಷಿಣೋದಕ್ ಶಿಕ್ಯಾಂ ತುಲಾಂ ಬಧ್ನೀಯಾತ್ । ಗೌರೀಪ್ರೀತ್ಯರ್ಥಂ ತುಲಾಯಾಂ ಕರ್ಪೂರಕೃತ ಪಂಚಪಿಂಡಿಕಾರೂಪಾಂ ಗೌರೀಂ ಕುಂಕುಮೇನ ಪೂಜಯೇತ್ । ತತೋ ಧರ್ಮರಾಜಂ ಸೂರ್ಯಂ ವಿಷ್ಣುಪ್ರತಿಮಾಃ ತಿಸ್ರೋ ಮಾಷಮಾತ್ರ ಸುವರ್ಣನಿರ್ಮಿತಾಃ ಅಗ್ನ್ಯುತ್ತಾರಣಪೂರ್ವಕಂ ಪ್ರಾಣಪ್ರತಿಷ್ಠಾವಿಧಿನಾ

ಸಂಪೂಜ್ಯ ಇಷ್ಟದೇವತಾ– ಪ್ರತಿಮಾಂ ಚ ಪಂಚಾಮೃತೇನ ಅಭಿಷಿಚ್ಯ, ಅಭ್ಯರ್ಚ್ಯ ವಿಷ್ಣು ಪ್ರತಿಮಾಂ ತುಲಾಮಧ್ಯೇ ಬದ್ಧ್ವಾ ತತಃ ಪೂರ್ವೋಕ್ತತೋಲನೀಯ ದ್ರವ್ಯಾದಿದೇವತಾಂ ಸಂಪೂಜ್ಯ ತುಲಾಯೈ ನಮ ಇತಿ ತುಲಾಂ ತುಲಾಪ್ರಾಂತಕೂಟಯೋಃ ವಿಷ್ಣುಮ್ ಅನಂತಂ ಮಧ್ಯಕೂಟೇ ವಾಸುಕಿಂ ಫಲಕದ್ವಯೇ ಭೂಮಿಂ ಚ ಸಂಪೂಜ್ಯ ರಕ್ತವಸ್ತ್ರೇಣ ತುಲಾಂ ಸಂವೇಷ್ಟ್ಯ (ತತಃ ಶಕ್ತೌ ಸತ್ಯಾಂ ತುಲಾದಂಡೇ ಸುವರ್ಣನಿರ್ಮಿತಾಸು ಚತುರ್ವಿಂಶತಿ– ಪ್ರತಿಮಾಸು– ಅಶಕ್ತೌ ಪೂಗೀಫಲೇಷು ಅಕ್ಷತಪುಂಜೇಷು ವಾ ಉದಕ್ ಸಂಸ್ಥಾನ್ ದೇವಾನ್ ಆವಾಹಯೇತ್। ಪೂಜಯೇಚ್ಚ) ತದಿತ್ಥಮ್ –

1. ಓಂ ಈಶಾನಾಯ ನಮಃ, ಈಶಾನಮಾವಾಹಯಾಮಿ ।
2. ಓಂ ಶಶಿನೇ ನಮಃ, ಶಶಿನಮಾವಾಹಯಾಮಿ ।
3. ಓಂ ಮಾರುತಾಯ ನಮಃ, ಮಾರುತಮಾವಾಹಯಾಮಿ ।
4. ಓಂ ರುದ್ರಾಯ ನಮಃ, ರುದ್ರಮಾವಾಹಯಾಮಿ ।
5. ಓಂ ಸೂರ್ಯಾಯ ನಮಃ, ಸೂರ್ಯಮಾವಾಹಯಾಮಿ ।
6. ಓಂ ವಿಶ್ವಕರ್ಮಣೇ ನಮಃ, ವಿಶ್ವಕರ್ಮಾಣಮಾವಾಹಯಾಮಿ ।
7. ಓಂ ಗುರವೇ ನಮಃ, ಗುರುಮಾವಾಹಯಾಮಿ ।
8. ಓಂ ಅಂಗಿರೋಽಗ್ನಿಭ್ಯಾಂ ನಮಃ, ಅಂಗಿರೋಽಗ್ನೀ ಆವಾಹಯಾಮಿ।
9. ಓಂ ಪ್ರಜಾಪತಯೇ ನಮಃ, ಪ್ರಜಾಪತಿಮಾವಾಹಯಾಮಿ ।
10. ಓಂ ವಿಶ್ವೇಭ್ಯೋ ದೇವೇಭ್ಯೋ ನಮಃ, ವಿಶ್ವಾನ್ ದೇವಾನಾವಾಹಯಾಮಿ।
11. ಓಂ ಧಾತ್ರೇ ನಮಃ, ಧಾತಾರಮಾವಾಹಯಾಮಿ ।
12. ಓಂ ಪರ್ಜನ್ಯಶಂಭುಭ್ಯಾಂ ನಮಃ, ಪರ್ಜನ್ಯಶಂಭೂ ಆವಾಹಯಾಮಿ।
13. ಓಂ ಪಿತೃಭ್ಯೋ ನಮಃ, ಪಿತೄನಾವಾಹಯಾಮಿ ।
14. ಓಂ ಸೌಮ್ಯಾಯ ನಮಃ, ಸೌಮ್ಯಮಾವಾಹಯಾಮಿ ।

15. ಓಂ ಧರ್ಮಾಯ ನಮಃ, ಧರ್ಮಮಾವಾಹಯಾಮಿ ।

16. ಓಂ ಅಮರರಾಜಾಯ ನಮಃ, ಅಮರರಾಜಮಾವಾಹಯಾಮಿ ।

17. ಓಂ ಅಶ್ವಿಭ್ಯಾಂ ನಮಃ, ಅಶ್ವಿನೌ ಆವಾಹಯಾಮಿ ।

18. ಓಂ ಜಲೇಶಾಯ ನಮಃ, ಜಲೇಶಮಾವಾಹಯಾಮಿ ।

19. ಓಂ ಮಿತ್ರಾವರುಣಾಯ ನಮಃ, ಮಿತ್ರಾವರುಣೌ ಆವಾಹಯಾಮಿ ।

20. ಓಂ ಮರುದ್ಗಣೇಭ್ಯೋ ನಮಃ, ಮರುದ್ಗಣಾನಾವಾಹಯಾಮಿ ।

21. ಓಂ ಗಂಧರ್ವಾಯ ನಮಃ, ಗಂಧರ್ವಮಾವಾಹಯಾಮಿ ।

22. ಓಂ ಜಲೇಶಾಯ ನಮಃ, ಜಲೇಶಮಾಘಾಹಯಾಮಿ ।

23. ಓಂ ವಿಷ್ಣವೇ ನಮಃ, ವಿಷ್ಣುಮಾವಾಹಯಾಮಿ ।

ಇತಿ ಆವಾಹ್ಯ, ಸಂಪೂಜ್ಯ । ತತೋ ಯಜಮಾನಃ ವಸ್ತ್ರಾಭರಣಗಂಧ-ಮಾಲ್ಯಾದ್ಯಲಂಕೃತಃ ಕೃತಪುಷ್ಪಾಂಜಲಿಃ ತುಲಾಂ ತ್ರಿಃ ಪ್ರದಕ್ಷಿಣೀ ಕೃತ್ಯ ಪ್ರಾಙ್ಮುಖಃ ಉಪವಿಶ್ಯ ಪ್ರಾರ್ಥಯೇತ್ ।

ಓಂ ತ್ವಂ ತುಲೇ ಸರ್ವಭೂತಾನಾಂ ಪ್ರಮಾಣಮಿಹ ಕೀರ್ತಿತಾ ।
ಮಾಂ ತೋಲಯಂತೀ ಸಂಸಾರಾತ್ ಉದ್ಧರಸ್ವ ನಮೋಽಸ್ತು ತೇ ॥

ನಮೋ ನಮಸ್ತೇ ಗೋವಿಂದ ತುಲಾಪುರುಷಸಂಜ್ಞಕ ।
ತ್ವಂ ಹರೇ ತಾರಯಸ್ವಾಸ್ಮಾನ್ ಅಸ್ಮಾತ್ ಸಂಸಾರಸಾಗರಾತ್ ॥

ಇತಿ ಪಠಿತ್ವಾ ತುಲೋಪರಿ ಪುಷ್ಪಾಂಜಲಿಂ ಕ್ಷಿಪೇತ್ । ಪುನಃ ತುಲಾಂ ತ್ರಿಃ ಪ್ರದಕ್ಷಿಣೀಕೃತ್ಯ ವಾಮಹಸ್ತೇ ಧರ್ಮರಾಜಪ್ರತಿಮಾಂ ದಕ್ಷಿಣಹಸ್ತೇ ಸೂರ್ಯ-ಪ್ರತಿಮಾಮ್ ಅಂಕೇ ಸ್ವಾಭೀಷ್ಟದೇವತಾ ಪ್ರತಿಮಾಂ ಚ ಪಂಚಾಮೃತಾಭಿಷಿಕ್ತಾಮ್ ಅರ್ಚಿತಾಂ ಚ ಆದಾಯ ಪ್ರಾಙ್ಮುಖಃ ತುಲಾಯಾಮ್ ಉತ್ತರಫಲಕಮ್

ಆರೋಹೇತ್ । ದಕ್ಷಿಣಫಲಕೇ ತೋಲನೀಯದ್ರವ್ಯಾದೀನ್ ಸ್ಥಾಪ್ಯ (ದಕ್ಷಿಣೇನ ಸುವರ್ಣಂ ಸ್ಯಾತ್ ಉತ್ತರೇಣ ನರಾಧಿಪಃ- ಇತಿ ಮಾತ್ಸ್ಯವಚನಾತ್) ತತೋ ಯಜಮಾನಃ ತುಲಾಮಧ್ಯದಂಡ ಸ್ಥಿತದೃಷ್ಟಿಃ ಹರೇರ್ಮುಖಂ ಪಶ್ಯನ್ ಪೂರ್ವೋಕ್ತ- ಮಂತ್ರೌ ಪಠೇತ್ -

ಓಂ ತ್ವಂ ತುಲೇ ಸರ್ವ ಭೂತಾನಾಂ ಪ್ರಮಾಣಮಿಹ ಕೀರ್ತಿತಾ ।
ಮಾಂ ತೋಲಯಂತೀ ಸಂಸಾರಾತ್ ಉದ್ಧರಸ್ವ ನಮೋಽಸ್ತು ತೇ॥

ನಮೋ ನಮಸ್ತೇ ಗೋವಿಂದ ತುಲಾಪುರುಷಸಂಜ್ಞಕ ।
ತ್ವಂ ಹರೇ ತಾರಯಸ್ವಾಸ್ಮಾನ್ ಅಸ್ಮಾತ್ ಸಂಸಾರಸಾಗರಾತ್ ॥

ಇತಿ ಪಠಿತ್ವಾ,

ಗೋದೋಹನಕಾಲೇ- ತತ್ರ ಸ್ಥಿತ್ವಾ । ತುಲಾಯಾಃ ಅವತೀರ್ಯ ತೋಲಿತದ್ರವ್ಯೇ ತುಲಸೀಪತ್ರಂ ನಿಧಾಯ ಅದ್ಯ.... ಇತ್ಯಾದಿ ದೇಶಕಾಲೌ ಸಂಕೀರ್ತ್ಯ, ಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀವಿಷ್ಣು ಪ್ರೀತ್ಯರ್ಥಮ್ ಆತ್ಮಸಮತೋಲಿತದ್ರವ್ಯಮ್ ಆಚಾರ್ಯಾದಿ ಅನ್ಯೇಭ್ಯೋ ಬ್ರಾಹ್ಮಣೇಭ್ಯಃ ಸಮಸ್ತ- ಆಶ್ರಿತಬಂಧು ವರ್ಗೇಭ್ಯಃ ದೀನ- ಅನಾಥೇಭ್ಯಃ ದಾತುಮುತ್ಸೃಜೇ ನ ಮಮ ಇತಿ ವದೇತ್ ।

ಕೃತಸ್ಯ ತುಲಾದಾನಕರ್ಮಣಃ ಸಾಂಗತಾಸಿದ್ಧ್ಯರ್ಥಂ ಭೂಯಸೀಂ ದಕ್ಷಿಣಾಂ ಯಥಾಶಕ್ತಿ ದತ್ವಾ ಬ್ರಾಹ್ಮಣಾನ್ ಭೋಜಯಿಷ್ಯೇ ಇತಿ ಸಂಕಲ್ಪ್ಯ, ತತ ಆಚಾರ್ಯಃ ಆವಾಹಿತದೇವತಾಃ ಸಂಪೂಜ್ಯ ಯಾಂತು ದೇವಗಣಾಃ ಸರ್ವೇ.... ಇತಿ ವಿಸೃಜ್ಯ । ಆಚಾರ್ಯಾಯ ತುಲಾದಾನಾರ್ಥಂ ಪಾದಂ ವಾ ದತ್ವಾ ಪ್ರತಿಮಾಂ ವಸ್ತ್ರಾಭರಣಂ ಚ ದತ್ವಾ ಶೇಷಂ ಚ ಅನ್ಯೇಭ್ಯೋ ಋತ್ವಿಗ್ಭ್ಯೋ ಬ್ರಾಹ್ಮಣೇಭ್ಯೋ ದದ್ಯಾತ್ ।

ಪ್ರಮಾದಾತ್ ಕುರ್ವತಾಂ ಕರ್ಮ..... । ಯಸ್ಯ ಸ್ಮೃತ್ಯಾ ಚ..... ಇತಿ ಜಪಿತ್ವಾ ಕರ್ಮ ವಿಷ್ಣ್ವರ್ಪಣಂ ಕೃತ್ವಾ ಸುಹೃದ್ಯುತೋ ಭುಂಜೀತ- ಇತಿ।

ಹೋಮಕರಣಪಕ್ಷೇ- ಕೇಚಿತ್ತು ಅತ್ರ ತುಲಾಪೂಜನೋತ್ತರಂ ತಂತ್ರ ಸಾರವಿಧಿಪೂರ್ವಕಮ್ ಅಗ್ನಿಂ ಪ್ರತಿಷ್ಠಾಪ್ಯ ಷೋಡಶಸಂಸ್ಕಾರಸಿದ್ಧಿಂ ಕೃತ್ವಾ, ವೈಷ್ಣವತ್ವ ಸಿದ್ಧಿಂ ಪೀಠಪೂಜಾಂ ಚ ವಿಧಾಯ, ಅಗ್ನೌ ಶ್ರೀಪರಶುರಾಮಮಾವಾಹ್ಯ ಅರ್ಘ್ಯಾದಿ- ಪುಷ್ಪೋಪಚಾರಾಂತೇ ಆವರಣಪೂಜಾಂ ಸಮಾಪ್ಯ, ಧೂಪ-ದೀಪ-ನೈವೇದ್ಯ- ಮಂತ್ರಪುಷ್ಪಾಂತಂ ಕುರ್ಯಾತ್ । ತತಃ ಅಗ್ನಿಧ್ಯಾನಾದಿ- ಅನ್ವಾಧಾನಾದ್ಯಾಜ್ಯ- ಭಾಗಾಂತಂ ಕೃತ್ವಾ ತುಲಾಸ್ಥದೇವತಾಭ್ಯಃ ಅಷ್ಟಾಷ್ಟಾಜ್ಯಾಹುತೀಶ್ಚ ಇಚ್ಛಂತೀತಿ । ಹೋಮಶೇಷಂ ಸಮಾಪಯೇತ್ - ಇತಿ । ಸ್ಥಾಲೀಪಾಕಮಂತ್ರೇಣ ವೈಶ್ವದೇವತಂತ್ರೇಣ ವಾ ಹೋಮಃ ಕಾರ್ಯಃ ।

ಯಸ್ಯ ಸ್ಮೃತ್ಯಾ..... ಇತಿ ವಿಷ್ಣ್ವರ್ಪಣಮ್ ॥

॥ ಶ್ರೀ ಕೃಷ್ಣಾರ್ಪಣಮಸ್ತು ॥

ದಾನದ ವಿಧಿ-ವಿಧಾನಗಳು

ದಾನಮಿತಿ ಸರ್ವಾಣಿ ಭೂತಾನಿ ಪ್ರಶನಂದಂತಿ
ದಾನ್ನಾನ್ನಾತಿದುಶ್ಚರಂ ತಸ್ಮಾದ್ದಾನೇ ರಮಂತೇ...।

(ಮಹಾನಾರಾಣೋಪನಿಷತ್)

ದಾನವನ್ನು ಎಲ್ಲ ಪ್ರಾಣಿಗಳಿಗೂ ದಾನವೇ ಜ್ಞಾನದ ಮೂಲಕ ಮುಕ್ತಿಸಾಧನವಾಗಿದೆ ಎಂದು ತುತಿಸುತ್ತವೆ. ದಾನಕ್ಕಿಂತಲೂ ದುಷ್ಕರವಾದುದು ಮತ್ತೊಂದಿಲ್ಲ. ಹಣಕ್ಕಾಗಿ ಪ್ರಾಣವನ್ನು ಕಳೆದುಕೊಳ್ಳುತ್ತಾರೆ ಹಲವರು. ಹಾಗಿರುವಾಗ ಆ ಹಣದ ದಾನ ಅತಿಪ್ರಶಸ್ತ. ಆದ್ದರಿಂದ ಎಲ್ಲ ಧನಿಕರು ದಾನ ನೀಡುವುದರಲ್ಲಿ ಆನಂದಿಸುತ್ತಾರೆ.

ದಾನಂ ಯಜ್ಞಾನಾ ವರೂಥಂ ದಷಿಣಾ ಲೋಕೇ ದಾತಾರನ್ ।
ಸರ್ವಭೂತಾನ್ಯುಪಜೀವಂತಿ ದಾನೇನಾರಾತೀರಪಾನುದಂತ ದಾನೇನ
ದ್ವಿಷಂತೋ ಮಿತ್ರಾ ಭವಂತಿ ದಾನೇ ಸರ್ವಂ ಪ್ರಷ್ಠಿತಂ
ತಸ್ಮಾದ್ದಾನಂ ಪರಮಂವದಂತಿ ॥

(ಮಹಾನಾರಾಯಣೋಪನಿಷತ್)

ಯಜ್ಞಗಳಲ್ಲಿ ದಕ್ಷಿಣಾದಾನ ಶ್ರೇಷ್ಠ. ಲೋಕದಲ್ಲಿ ದಾತಾರರನ್ನು ಪಂಡಿತರು ಪಾಮರರು ಎಲ್ಲರು ಉಪಜೀವಿಸುತ್ತಾರೆ. ರಾಜರು ಶೂಭಟರಿಗೆ ಅಭೀಷ್ಟವನ್ನು ಕೊಟ್ಟು ಶತ್ರುಗಳನ್ನು ನಿರಾಕರಿಸುತ್ತಾರೆ. ಪ್ರಬಲ ಶತ್ರುಗಳೂ ದಾನದಿಂದ ಮಿತ್ರರಾಗುವುದು. ಕಷ್ಟಾರ್ಜಿತ ದ್ರವ್ಯದ ದಾನದಲ್ಲಿ ಎಲ್ಲ ಫಲವೂ ನೆಲೆಸಿದೆ. ಆದುದರಿಂದ ದಾನವು ಶ್ರೇಷ್ಠವೆಂದು ದಾಶಶೀಲರು ಹೇಳುವರು.

ತತ್ವಸಂಶೋಧನ ಸಂಸತ್
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ
ಶ್ರೀ ವಿದ್ಯಾಮಾನ್ಯಪ್ರಕಾಶಮ್, ಶ್ರೀಹೃಷಿಕೇಶತೀರ್ಥಸಂಸ್ಥಾನಮ್
ಶ್ರೀಪಲಿಮಾರು ಮಠ, ರಥಬೀದಿ, ಉಡುಪಿ-576101

ISBN 93-81807-17-5
9789381807170